ಬುಧವಾರ, ಅಕ್ಟೋಬರ್ 9, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

72198 21111 | BAJAJ SECURE | pine labs PAY LATER | HDFC BANK

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. *ಕೊಡುಗೆ ಆಯ್ದ ವೇರಿಯೆಂಟ್‌ಗಳ ಮೇಲೆ ಮಾತ್ರ. ಕೊಡುಗೆ 7ನೇ ನವೆಂಬರ್ 2024ರ ವರೆಗೆ ಮಾನ್ಯವಾಗಿರುತ್ತದೆ. ಬಜಾಜ್ ಆಟೋ ಯಾವುದೇ ಅಥವಾ ಎಲ್ಲ ಕೊಡುಗೆಗಳನ್ನು ಪೂರ್ವ ಸೂಚನೆ ಇಲ್ಲದೆ ಹಿಂದೆ ಪಡೆಯುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. *₹10000/- ವರೆಗಿನ ಉಳಿತಾಯ ಮೋಡೆಲ್‌ಅನ್ನು ಅವಲಂಬಿಸಿದೆ ₹5000/-* ವರೆಗೆ ಕ್ಯಾಶ್‌ಬ್ಯಾಕ್ ಮತ್ತು ₹5000/-* ಎಚ್‌ಡಿಎಫ್‌ಸಿ ಕಾರ್ಡ್ ಕ್ಯಾಶ್‌ಬ್ಯಾಕ್‌ನ್ನು ಒಳಗೊಂಡಿರುತ್ತದೆ. ವೃತ್ತಿಪರ ಮೇಲ್ವಿಚಾರಣೆಯಲ್ಲಿ , ನಿಯಂತ್ರಿತ ಮತ್ತು ನಿರ್ಜನ ಪರಿಸರದಲ್ಲಿ , ಸಾರ್ವಜನಿಕರು ಅಥವಾ ಪಬ್ಲಿಕ್ ರೋಡ್‌ಗಳಿಂದ ಪ್ರತ್ಯೇಕವಾಗಿ ಸಾಹಸಗಳನ್ನು ಪರಿಣಿತರು ನಿರ್ವಹಿಸಿದ್ದಾರೆ. ಈ ಸಾಹಸಗಳನ್ನು ಪುನರಾವರ್ತಿಸಲು ಪ್ರಯತ್ನಿಸಬೇಡಿ. ಯಾವಾಗಲೂ ಸಂಚಾರ ಮತ್ತು ಸುರಕ್ಷತಾ ನಿಯಮಗಳನ್ನು ಅನುಸರಿಸಿ. ಎ ಎಮ್ ಸಿ ನಿರ್ದಿಷ್ಟ ಮೋಡೆಲ್‌ಗಳಲ್ಲಿ, ನಿರ್ದಿಷ್ಟ ರಾಜ್ಯಗಳಲ್ಲಿ ಲಭ್ಯ. ಹೆಚ್ಚಿನ ವಿವರಗಳನ್ನು ಬಜಾಜ್ ಡೀಲರ್‌ರಿಂದ ಪಡೆಯಬಹುದು. ರೋಡ್ ಸೈಡ್ ಸಹಾಯವನ್ನು ಥರ್ಡ್ ಪಾರ್ಟೀಸ್ ಅವರ ಟರ್ಮ್ಸ್ ಮತ್ತು ಕಂಡಿಶನ್ ಅಡಿ ಒದಗಿಸುತ್ತಾರೆ. ಅಕ್ಟೋಬರ್ 15ರ ವರೆಗೆ ಮಾತ್ರ ಪೈನ್ ಲ್ಯಾಬ್ಸ್ ಯಂತ್ರಗಳ ಮೂಲಕ ಎಚ್‌ಡಿಎಫ್‌ಸಿ ಕ್ರೆಡಿಟ್ ಕಾರ್ಡ್‌ಗಳ ಇ ಎಮ್ಐ ವಹಿವಾಟುಗಳ ಮೇಲೆ ಕ್ಯಾಶ್‌ಬ್ಯಾಕ್ ಕೊಡುಗೆ ಲಭ್ಯವಿದೆ. ಇ-ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳಲ್ಲಿನ ಕೊಡುಗೆಗಳು ಅವುಗಳ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತವೆ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli** RV BAJAJ: 6360308373 • **Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri** circle KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur** : KHIVRAJ BAJAJ: - 7760931921 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 7022984402 • **Hubli** CHANNAMMA BAJAJ: 9620614106 • **Arvind Nagar branch** 8884771881 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGASHREE BAJAJ: 988690116, JAGASHREE BAJAJ: 9448634872 • **Chikodi** JAGASHREE BAJAJ: 9449736406 • **Gokak** JAGASHREE BAJAJ: 7022425616 • **Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A BAJAJ: 8123712938• Hospet AADI BAJAJ: 9731361414 • Hagaribommanahalli AADI BAJAJ: 9900363010 • SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8722182492 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477 • **Tumkur** AKSHAYA BAJAJ: 7259040212 • **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.

ನವರಾತ್ರಿ ಹಬ್ಬದ ಪ್ರಯುಕ್ತ
ಪಡೆಯಿರಿ ಬೋಳಾಸ್ ಕಾಜುಕತ್ಲಿ 250g MRP ₹ 325
ಕೇವಲ ₹199*
UP TO 40% OFF!*
FACTORY PRICE ADVANTAGE
*ಸ್ಟೋರ್ ಉತ್ಪನ್ನಗಳ ಮೇಲೆ
9th to 12th Oct ವರೆಗೆ ಮಾನ್ಯ
*ಷರತ್ತುಗಳು ಮತ್ತು ನಿಯಮಗಳು ಅನ್ವಯವಾಗುತ್ತವೆ.
1) ಮೊದಲ 100 ಗ್ರಾಹಕರಿಗೆ ಮಾತ್ರ ಆಫರ್ ಲಭ್ಯ.
2) ಆಫರ್ ಸ್ಟಾಕ್ ಇರುವವರೆಗೆ ಮಾತ್ರ ಮಾನ್ಯವಾಗಿರುತ್ತದೆ.
3) ಪ್ರತಿ ಗ್ರಾಹಕ ಒಮ್ಮೆಮಾತ್ರ ಆಫರ್ ಪಡೆಯಬಹುದು.
4) ದುರುಪಯೋಗದ ಸಂದರ್ಭದಲ್ಲಿ ಕೊಡುಗೆ ನಿರಾಕರಿಸುವ ಹಕ್ಕನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ .
OFFER AVAILABLE IN
Bolas
zomato
Pincode
Bolas
Bolas
Kaju Katli
*ಕ್ರಿಯಾತ್ಮಕ ರಚನೆ
DRY FRUITS | NUTS | SWEETS & MORE
FACTORY PRICE ADVANTAGE
ಬೋಳಾಸ್ Bolas
ಚೆನ್ನಪಟ್ಟಣ-9483548777 | ಕನಕಪುರ-9019963559 | ತುಮಕೂರು-9364009426 | ಬನಶಂಕರಿ-9364016910 | ಬಾಣಸವಾಡಿ-9364016909 | ಬೆಂಗಳೂರು ಮೀನಾಕ್ಷಿಮಾಲ್-9606019779 | ಬೆಂಗಳೂರು ಟಿಸಿ ಪಾಳ್ಯ-9364016907 | ಬಸವೇಶ್ವರ ನಗರ-9364016904 | ಗಾಂಧಿ ಬಝಾರ್-9364016908 | ಹರಳೂರು-6364863287 | ಎಚ್.ಎಸ್.ಆರ್-6364863283 | ಜಯನಗರ-6364863281 | ನೆಲಮಂಗಲ-9364016903 | ನ್ಯೂ ತಿಪ್ಪಸಂದ್ರ ಮೈನ್ ರೋಡ್-6364863285 | ಆಫ್ ಸರ್ಜಾಪುರ ರೋಡ್-6364863286 | ಆರ್ ಟಿ ನಗರ-6364863284 | ಸಂಪಿಗೆ ರೋಡ್ ಮಲ್ಲೇಶ್ವರಂ-9364016905 | ಉತ್ತರಹಳ್ಳಿ-9364016911 | ವಿದ್ಯಾರಣ್ಯಪುರ-9364016902 | ವಿಜಯನಗರ ಕ್ವಾರ್ಡ್ ರೋಡ್-9364016906 | ವಿಲ್ಸನ್ ಗಾರ್ಡನ್-6364863282 | ಮತ್ತಿಕೆರೆ-9364016901 | ಕೆಂಗೇರಿ-9364016916 | ಬಿಟಿಎಂ ಲೇಔಟ್-9364016917
/bolas.outlet
www.bolas.co.in

ಬುಧವಾರ, ಅಕ್ಟೋಬರ್ 9, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 281 | ಪುಟ 24
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದುರ್ಗಾ ಮಾತೆ ಕೋಲ್ಕತ್ತದಲ್ಲಿ ದುರ್ಗಾ ಪೂಜೆ ಸಂದರ್ಭದಲ್ಲಿ ಪೆಂಡಾಲ್‌ವೊಂದರಲ್ಲಿ ಮಂಗಳವಾರ ಕಂಡ ದುರ್ಗಾ ಮಾತೆಯ ಮೂರ್ತಿ

ಸರ್ಕಾರಿ ಶಾಲೆಯಲ್ಲಿ ಫೇಸ್ ಬಯೋಮೆಟ್ರಿಕ್! 6

ಸುಳ್ಳು ಸುದ್ದಿ ತಡೆಗೆ ಉನ್ನತ ಮಟ್ಟದ ಸಮಿತಿ ರಚನೆ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,634 ▲	25,013 ▲	₹79,770 (ಬೆಂಗಳೂರು)	₹96,200 (ಬೆಂಗಳೂರು) ▼	83.97 ▲

ವಿಮಾ ಪರಿಹಾರಕ್ಕೆ ಕಂಪನಿಯೇ ಹೊಣೆ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪಘಾತ ನಡೆದ ಸಂದರ್ಭದಲ್ಲಿ ವಾಹನಕ್ಕೆ ಪರವಾನಗಿ ಮತ್ತು ಫಿಟ್ನೆಸ್ ಸರ್ಟಿಫಿಕೇಟ್ ಇಲ್ಲದೇ ಇದ್ದರೂ ವಿಮಾ ಕಂಪನಿಯು ಅಪ ಘಾತದ ಸಂತ್ರಸ್ತರಿಗೆ ಪರಿಹಾರ ಪಾವತಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

'ಅಪಘಾತಕ್ಕೆ ಒಳಗಾದ ವಾಹನಕ್ಕೆ ಫಿಟ್ನೆಸ್ ಸರ್ಟಿಫಿಕೇಟ್ ಇಲ್ಲದಿದ್ದರೂ ನ್ಯಾಯಮಂಡಳಿ ಪರಿಹಾರ ನೀಡುವಂತೆ ನಿರ್ದೇಶಿಸಿದೆ' ಎಂದು ಆಕ್ಷೇಪಿಸಿ, 'ಶ್ರೀರಾಮ ಜನರಲ್ ಕಂಪನಿ ಇನ್ಶೂರೆನ್ಸ್ ಕಂಪನಿ' ಮತ್ತು 'ಪರಿಹಾರದ ಮೊತ್ತ ಹೆಚ್ಚಳ ಮಾಡಲು ನಿರ್ದೇಶಿಸಬೇಕು' ಎಂದು ಮೃತರ ವಾರಸುದಾರರು ಕೋರಿದ್ದ ಎಂಎಫ್‌ಎ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

5ನೇ ಪುಟ ನೋಡಿ

ಹಬ್ಬದ ಋತು: ಬೆಳ್ಳುಳ್ಳಿ ದರ ಏರಿಕೆ ಬಿಸಿ 09

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಜೆಕೆಎನ್‌ಸಿ–ಕಾಂಗ್ರೆಸ್ ಮೈತ್ರಿ ತೆಕ್ಕೆಗೆ ಜಮ್ಮು–ಕಾಶ್ಮೀರ

ಹರಿಯಾಣ: ಬಿಜೆಪಿ ಹ್ಯಾಟ್ರಿಕ್

ಹರಿಯಾಣದಲ್ಲಿ ನಾಯಬ್ ಸಿಂಗ್ ಸೈನಿ ಅವರೇ ಮತ್ತೆ ಮುಖ್ಯಮಂತ್ರಿಯಾಗುವ ಸಾಧ್ಯತೆ

ಜಮ್ಮು – ಕಾಶ್ಮೀರಕ್ಕೆ ಒಮರ್ ಅಬ್ದುಲ್ಲಾ ಸಿ.ಎಂ: ಫಾರೂಕ್ ಅಬ್ದುಲ್ಲಾ ಘೋಷಣೆ

• ಮಂಜುನಾಥ ಹೆಬ್ಬಾರ್

ನವದೆಹಲಿ: ಉತ್ತರ ಭಾರತದ ಎರಡು ಸಣ್ಣ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಮತದಾರರು ಸ್ಪಷ್ಟ ತೀರ್ಪು ನೀಡಿದ್ದಾರೆ. ಹರಿಯಾಣದಲ್ಲಿ ದಶಕದ ಆಡಳಿತ ವಿರೋಧಿ ಅಲೆಯಲ್ಲಿಯೇ ಈಜಿದ ಬಿಜೆಪಿಯು ಗೆಲುವಿನ ದಡ ಸೇರಿದೆ. ಕಣಿವೆ ರಾಜ್ಯ ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ (ಜೆಕೆಎನ್‌ಸಿ)–ಕಾಂಗ್ರೆಸ್ ಮೈತ್ರಿಕೂಟ ಸರಳ ಬಹುಮತ ಪಡೆದಿದೆ. ಎನ್‌ಡಿಎ ಹಾಗೂ 'ಇಂಡಿಯಾ' ಮೈತ್ರಿಕೂಟದಲ್ಲಿ ಗುರುತಿಸಿಕೊಳ್ಳದೆ ಸ್ವತಂತ್ರವಾಗಿ ಸ್ಪರ್ಧಿಸಿದ್ದ ಪ್ರಾದೇಶಿಕ ಪಕ್ಷಗಳು ನೆಲ ಕಚ್ಚಿವೆ.

ಲೋಕಸಭಾ ಚುನಾವಣೆಯಲ್ಲಿ ಸ್ವತಂತ್ರವಾಗಿ ಬಹುಮತದ ಗಡಿ ತಲುಪಲಾಗದೆ ಅಲ್ಪ ಹಿನ್ನಡೆ ಸಾಧಿಸಿದ್ದ ಕಮಲ ಪಾಳಯ ವಿಧಾನಸಭೆಗಳ ಚುನಾವಣೆಯ ಅಗ್ನಿಪರೀಕ್ಷೆಯಲ್ಲಿ ಗೆದ್ದಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿ ಎರಡನೇ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಲೆ ಇನ್ನೂ ಇದೆ ಎಂಬುದನ್ನು ಈ ಫಲಿತಾಂಶ ತೋರಿಸಿಕೊಟ್ಟಿದೆ.

8ನೇ ಪುಟ ನೋಡಿ

ನಾಯಬ್ ಸಿಂಗ್ ಸೈನಿ



ಒಮರ್ ಅಬ್ದುಲ್ಲಾ



ಹರಿಯಾಣ

ಪಕ್ಷ	ಗೆದ್ದ ಸ್ಥಾನ	ಮತ ಪ್ರಮಾಣ
ಬಿಜೆಪಿ	48	39.94%
ಕಾಂಗ್ರೆಸ್	37	39.09%
ಐಎನ್‌ಎಲ್‌ಡಿ	2	4.14%
ಪಕ್ಷೇತರರು	3	1.82%

ಜಮ್ಮು-ಕಾಶ್ಮೀರ

ಪಕ್ಷ	ಗೆದ್ದ ಸ್ಥಾನ	ಮತ ಪ್ರಮಾಣ
ಜೆಕೆಎನ್‌ಸಿ	42	23.43%
ಕಾಂಗ್ರೆಸ್	6	11.97%
ಬಿಜೆಪಿ	29	25.64%
ಪಿಡಿಪಿ	3	8.88%
ಇತರರು	10	24.83%

ಬಿಜೆಪಿ ಗೆದ್ದಿದ್ದೇಗೆ?

- ಹರಿಯಾಣದಲ್ಲಿ ಚುನಾವಣೆಗೆ ಕೆಲವೇ ತಿಂಗಳುಗಳು ಉಳಿದಿರುವಾಗ ಮುಖ್ಯಮಂತ್ರಿ ಬದಲಾವಣೆ ಮಾಡಲಾಯಿತು. ಒಬಿಸಿ ನಾಯಕ ನಾಯಬ್ ಸಿಂಗ್ ಸೈನಿ ಅವರಿಗೆ ಮುಖ್ಯಮಂತ್ರಿ ಪಟ್ಟ ಕಟ್ಟಲಾಯಿತು.
- ಜೆಜೆಪಿ ಜತೆಗಿನ ಮೈತ್ರಿ ಕಡಿದುಕೊಂಡಿದ್ದು ಹಾಗೂ ಹೊಸ ಜಾತಿ ಸಮೀಕರಣದ ಸೂತ್ರ ಹೆಣೆಯಲಾಯಿತು. ಜಾಟೇತರ ಸಮುದಾಯದ ಮತಗಳ ಕ್ರೋಡೀಕರಣಕ್ಕೆ ಸಂಪೂರ್ಣ ಗಮನ ನೀಡಲಾಯಿತು.
- ಗ್ರಾಮೀಣ ಭಾಗದ ಕ್ಷೇತ್ರಗಳ ಕಡೆಗೆ ಹೆಚ್ಚಿನ ಗಮನ ಹರಿಸಿ ತಳ ಮಟ್ಟದಲ್ಲಿ ಸಂಘಟನೆ ಬಲಪಡಿಸಲು ಪ್ರಯತ್ನ ಮಾಡಿತು. ಪ್ರಚಾರಕ್ಕಾಗಿ ಪ್ರತಿ ಜಿಲ್ಲೆಗೆ 150 ಆರ್‌ಎಸ್‌ಎಸ್ ಕಾರ್ಯಕರ್ತರ ನಿಯೋಜನೆ ಮಾಡಿತು.
- ಲೋಕಸಭಾ ಚುನಾವಣೆ ಫಲಿತಾಂಶ ಪ್ರಕಟಗೊಂಡ ಬೆನ್ನಲ್ಲೇ ಬಿಜೆಪಿಯು ಹರಿಯಾಣದ ಕಡೆಗೆ ಸಂಪೂರ್ಣ ಗಮನ ಹರಿಸಿತು.

'ಕೈ' ಎಡವಿದ್ದೆಲ್ಲಿ?

- ಹರಿಯಾಣದಲ್ಲಿ ಜಾಟರ ಮತಗಳೇ ಗೆಲುವಿನ ದಡ ಮುಟ್ಟಿಸ ಬಲ್ಲವು ಎಂದು ಕಾಂಗ್ರೆಸ್ ಭಾವಿಸಿತ್ತು. ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಅವರನ್ನೇ ಸಂಪೂರ್ಣವಾಗಿ ನೆಚ್ಚಿಕೊಂಡಿತ್ತು. ಹೂಡಾ ಸೂಚಿಸಿದ್ದ 71 ಮಂದಿಗೆ ಟಿಕೆಟ್ ನೀಡಲಾಗಿತ್ತು. ದಲಿತ ಸಮುದಾಯದ ಪ್ರಭಾವಿ ನಾಯಕಿಯಾಗಿರುವ ಸಂಸದೆ ಕುಮಾರಿ ಶೆಲ್ಜಾ ಅವರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿತ್ತು. ಅವರು ಮುನಿಸಿಕೊಂಡು ಪ್ರಚಾರದಿಂದ ಅಂತರ ಕಾಯ್ದುಕೊಂಡರು. ಕಾಂಗ್ರೆಸ್ ನಾಯಕರ ಒಳ ಜಗಳವು ಬಿಜೆಪಿಗೆ ಪ್ರಮುಖ ಪ್ರಚಾರ ವಿಷಯವಾಯಿತು. ಪರಿಣಾಮವಾಗಿ, ಶೇ 20ರಷ್ಟಿದ್ದ ದಲಿತರ ಮತಗಳು ವಿಭಜನೆಯಾದವು.
- ಚುನಾವಣಾ ಪೂರ್ವದಲ್ಲಿ ಬಿಜೆಪಿ 160 ರ್‍ಯಾಲಿಗಳನ್ನು ನಡೆಸಿತು. ಕಾಂಗ್ರೆಸ್ ಪಕ್ಷದ ರ್‍ಯಾಲಿಗಳ ಸಂಖ್ಯೆ 60 ದಾಟಿರಲಿಲ್ಲ. ಪಕ್ಷದ ತಾರಾ ಪ್ರಚಾರಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತಿತರರು ನಾಲ್ಕೈದು ರ್‍ಯಾಲಿಗಳಿಗೆ ಸೀಮಿತರಾದರು.

ಸಿ. ಕೃಷ್ಣಯ್ಯ ಚೆಟ್ಟಿ™ ಗ್ರೂಪ್ ಆಫ್ ಜ್ಯುವೆಲರ್ಸ್

ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರಸ್ತೆ (ಕೆಂಪು ಬಣ್ಣದ ಮುಂಭಾಗ) • ಜಯನಗರ, 5 ನೇ ಬ್ಲಾಕ್ • ಮಲ್ಲೇಶ್ವರಂ, ಮಾರ್ಗೋಸಾ ರಸ್ತೆ • ಫೀನಿಕ್ಸ್ ಮಾರ್ಕೆಟ್ ಸಿಟಿ, ವೈಟ್ ಫೀಲ್ಡ್.

Tel: 080-4000 1869 / 4100 1869 | www.ckcjewellers.com | blogs.ckcjewellers.com

•ನಿಯಮಗಳು ಮತ್ತು ಷರತ್ತುಗಳಿಗಾಗಿ www.ckcjewellers.com ಗೆ ಭೇಟಿ ನೀಡಿ. ಲೋಗೋಗಳು, ಹೆಸರುಗಳು ಮತ್ತು ನೋಂದಾಯಿತ ಟ್ರೇಡ್‌ಮಾರ್ಕ್‌ಗಳ ದುರುಪಯೋಗವನ್ನು ನಿಷೇಧಿಸಲಾಗಿದೆ.

ಸಿಕೆಸಿ ಸಮೂಹ ಕಂಪನಿಗಳು C. KRISHNIAH CHETTY & SONS™ C. KRISHNIAH CHETTY JEWELLERS® THE 1869 GUILD C. Krishniah Chetty & Sons C. KRISHNIAH CHETTY CHARITABLE TRUST C. Krishniah Chetty Foundation

*ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ: * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಗಾಗದಿರಿ. ವಾಸ್ತವವಾಗಿ ಅದು ಸಿಕೆಸಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೊ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ. ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು–ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ. ಇದಲ್ಲದೆ, ಅನಧಿಕೃತ ವ್ಯವಹಾರದೊಂದಿಗೆ ವ್ಯವಹರಿಸುವಾಗ ನೀವು ಆರ್ಥಿಕ ನಷ್ಟವನ್ನು ಅನುಭವಿಸಬಹುದು.*

ಕಿದ್ವಾಯಿ ನಿರ್ದೇಶಕರಾಗಿ ತೇಜಸ್ವಿನಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ ಡಾ. ತೇಜಸ್ವಿನಿ ಬಿ. ಅವರನ್ನು ನೇಮಿಸಲಾಗಿದೆ.

ಈ ಕುರಿತು ವೈದ್ಯಕೀಯ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದ್ದು, ಇವರು ಸಂಸ್ಥೆಯ ರೇಡಿಯೇಷನ್ ಆಂಕಾಲಜಿ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಈ ಹಿಂದಿನ ನಿರ್ದೇಶಕ ಡಾ.ವಿ.ಲೋಕೇಶ್ ಅವರ ವಿರುದ್ಧ ಅಧಿಕಾರ ದುರ್ಬಳಕೆ, ಅಕ್ರಮ ಸೇವಾ ಬಡ್ತಿ, ವೈದ್ಯಕೀಯ ನಿರ್ಲಕ್ಷ್ಯ ಸೇರಿ ವಿವಿಧ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಯುತ್ತಿದೆ. ಇದೇ ಕಾರಣದಿಂದ ಅವರನ್ನು ಅಮಾನತು ಮಾಡಲಾಗಿದೆ. ಇದರಿಂದಾಗಿ ಸಂಸ್ಥೆಯ ನಿರ್ದೇಶಕ ಹುದ್ದೆ ಹಲವು ದಿನಗಳಿಂದ ಖಾಲಿಯಿತ್ತು.

ಸಂಸ್ಥೆಯ ಆಡಳಿತ ಸುಧಾರಣೆ ಹಾಗೂ ಚಟುವಟಿಕೆಗಳ ನಿರ್ವಹಣೆಗೆ ಐಎಎಸ್ ಅಧಿಕಾರಿ ಎನ್. ಮಂಜುಶ್ರೀ ಅವರನ್ನು ಆಡಳಿತಾಧಿಕಾರಿಯನ್ನಾಗಿ ಫೆಬ್ರುವರಿಯಲ್ಲಿ ನೇಮಕ ಮಾಡಲಾಗಿತ್ತು. 6 ತಿಂಗಳ ಅವಧಿ ಮುಕ್ತಾಯವಾಗಿದ್ದರಿಂದ ಇಲಾಖೆಯು ಆಡಳಿತಾಧಿಕಾರಿಯ ಕಾರ್ಯಾವಧಿ ವಿಸ್ತರಿಸುವಂತೆ ಸರ್ಕಾರವನ್ನು ಕೋರಿತ್ತು. ಎನ್‌ಎಚ್‌ಎಂ ನಿರ್ದೇಶಕ ನವೀನ್ ಭಟ್ ಅವರನ್ನು ಸಂಸ್ಥೆಗೆ ನೂತನ ಆಡಳಿತಾಧಿಕಾರಿಯನ್ನಾಗಿ ಕಳೆದ ತಿಂಗಳು ನೇಮಿಸಲಾಗಿತ್ತು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/20/2024
ದಿನಾಂಕ : 25-06-2024 ಗೆ ತಿದ್ದುಪಡಿ

ಕೆಲಸದ ಹೆಸರು	ಅಂದಾಜು ಮೌಲ್ಯ
ತುಮಕೂರು – ರಾಯದುರ್ಗ – ಯೋಜನಾ ನಿರ್ವಹಣಾ ಸೇವೆಗಳನ್ನು ಒದಗಿಸುವುದು – ಪಾವಗಡ (107.550 ಕಿಮೀ) ನಿಂದ – ಮಡಕಶಿರಾ (85.200 ಕಿಮೀ); ಕೊರಟಗೆರೆ (29.825 ಕಿಮೀ) – ಊರುಕೆರೆ (11.050 ಕಿಮೀ); ಮಧುಗಿರಿ (50.550 ಕಿಮೀ) – ಕೊರಟಗೆರೆ (29.825 ಕಿಮೀ); ಮಡಕಶಿರಾ (85.200 ಕಿಮೀ) – ಮಧುಗಿರಿ (50.550 ಕಿಮೀ) ಒಳಗೊಂಡಂತೆ ಇಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಮತ್ತು ಕನ್ಸ್‌ಟ್ರಕ್ಷನ್ (ಇಪಿಸಿ) ವಿಧಾನದ ಮೂಲಕ ವಿದ್ಯುತ್ ಮತ್ತು ಟೆಲಿಕಮ್ಯುನಿಕೇಶನ್ ಕಾಮಗಾರಿಗಳು (ಟೆಂಡರ್ ಉಲ್ಲೇಖ ಸಂ. : ಪಿಎಂಎಸ್–ಟಿಕೆ–ಆರ್‌ಡಿಜಿ)	ರೂ. 16,98,48,547/-

ಬಿಡ್ ಮುಕ್ತಾಯದ ದಿನಾಂಕ	
ಹಾಲಿ ಇರುವ ದಿನಾಂಕ	ಪರಿಷ್ಕೃತ ದಿನಾಂಕ
23-10-2024 (15:00 ಗಂಟೆಗಳು)	08-11-2024 (15:00 ಗಂಟೆಗಳು)

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು
ಪಿಯುಬಿ/483/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/24/2024
ದಿನಾಂಕ : 28-08-2024 ಗೆ ತಿದ್ದುಪಡಿ-2

ಕೆಲಸದ ಹೆಸರು	ಅಂದಾಜು ಮೌಲ್ಯ
ಬಾಗಲಕೋಟೆ – ಕುಡಚಿ ಹೊಸ ಮಾರ್ಗ ಯೋಜನೆ (142 ಕಿಮೀ) ಅಡಿಯಲ್ಲಿ ಯದವಾಡ (ಹೊರತುಪಡಿಸಿ) (60.000 ಕಿಮೀ) ಮತ್ತು ಕುಡಚಿ (ಹೊರತುಪಡಿಸಿ) (142.000 ಕಿಮೀ) – 82.000 ಕಿಮೀ ನಡುವೆ ಹೊಸ ಬ್ರಾಡ್ ಗೇಜ್ ಮಾರ್ಗ ಟ್ರ್ಯಾಕ್‌ನ ನಿರ್ಮಾಣಕ್ಕಾಗಿ ಸಿಗ್ನಲಿಂಗ್, ಟೆಲಿಕಮ್ಯುನಿಕೇಶನ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ ಯೋಜನಾ ನಿರ್ವಹಣಾ ಸೇವೆಗಳನ್ನು ಒದಗಿಸುವುದಕ್ಕಾಗಿ ಅಧಿಕೃತ ಇಂಜಿನಿಯರ್‌ರ ನೇಮಕಾತಿಯ ಪ್ರಸ್ತಾವನೆಗಾಗಿ ಕೋರಿಕೆ. (ಟೆಂಡರ್ ಉಲ್ಲೇಖ ಸಂ. : ಪಿಎಂಎಸ್–ಬಿಜಿಕೆ–ಕೆಯುಡಿ–02)	ರೂ. 13,24,71,937/-

ಬಿಡ್ ಮುಕ್ತಾಯದ ದಿನಾಂಕ	
ಹಾಲಿ ಇರುವ ದಿನಾಂಕ	ಪರಿಷ್ಕೃತ ದಿನಾಂಕ
16-10-2024 (15:00 ಗಂಟೆಗಳು)	29-10-2024 (15:00 ಗಂಟೆಗಳು)

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು
ಪಿಯುಬಿ/484/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25
South Western Railway - SWR | SWRRLY | SWRRLY

PUBLIC NOTICE

This is to inform the General public / Whomsoever it may concern that my client SMT. **GEETHA A R** W/o. Sri. Saajan A D Aged about 28 Years R/o at No: 463, 39th B Cross Road , 5th Block , Jayanagar 3rd block, Bangalore-560041. Intend / Propose to purchase the schedule property belonging to **SMT. UMA R** W/o. Shivaraj K.S W/o. Shivaraj K.S Aged about 48 years, Residing At: Ayyapa Nagar , Devasandra , K.R Puram, Bangalore and **SRI. E S RAMA BHAT** S/o. Sham Bhat Aged about 64 years Residing At: 8/2A1B 2nd cross, 3rd main Akshaya Nagar, Yelenahalli Bangalore 560068 and **RI. B V JAYARAM** S/o. Venkata Giri Gowda Aged about 70 years Residing At: 2719 / Canara bank Nanjundyya layout, Begur , Bangalore 560068.

They represent that they are the absolute owners and having clear and marketable title to the schedule property. Any Persons, Firm, Institution Including Financial Institution claiming to have any right/ title/ interest /claims or enforceable right in the schedule property either as the owner or in any other manner of objection for such alienation may lodge their objections with documentary proof within **7 days** from the date of publication of this notice, with the undersigned, failing which it will be presumed that no valid claims and objections subsist and thereafter my client shall proceed to complete the sale transaction with owner referred above.

-: SCHEDULE PROPERTY : -

Item No.1
ALL THAT PIECE AND PARCEL OF the Agricultural land bearing **New Sy No: 148/14 old Sy No:148/2B Measuring 20 Guntas** situated at Seegekotte Village, Kasaba Hobli, Kanakapura Taluk, Ramanagara District, and bounded on
East by : Sy no. 3
West by : Sy no. 1
North by : Sy no. 3 and Main Road
South by : Sy no. 149

Item No.2
ALL THAT PIECE AND PARCEL OF the Agricultural land bearing **New Sy No: 149/7 old Sy No: 149/3 Measuring 26.12 Guntas** situated at Seegekotte Village, Kasaba Hobli, Kanakapura Taluk, Ramanagara District, and bounded on
East by : Private property
West by : Sy no. 1
North by : Main Road
South by : Private property

Item No. 3
ALL THAT PIECE AND PARCEL OF the Agricultural land bearing **Sy No: 148/2B Measuring 20 Guntas and 1 Guntas** Karab situated at situated at Seegekotte Village, Kasaba Hobli, Kanakapura Taluk, Ramanagara District, and bounded on
East by : Private property
West by : Sy no. 2C and Sy no. 149
North by : Sy no. 3
South by : Sy no. 149

Item No. 4
ALL THAT PIECE AND PARCEL OF the Agricultural land bearing **Sy No: 149/3 Measuring 26.08 Guntas and 3 Guntas** Karab situated at Seegekotte Village, Kasaba Hobli, Kanakapura Taluk, Ramanagara District, and bounded on
East by : Private property
West by : Sy no. 2 and Sy no. 150
North by : Sy no. 150
South by : Sy no. 150

RAVI KUMAR C, ADVOCATE
#11B 3rd Cross Road, Thimmappa Reddy Layout, Hulimavu, B.G Bengaluru – 560076
Email:ashralawfirm@gmail.com, Phone: 9900061616

ಏಕಕಾಲಕ್ಕೆ ಹಲವರಿಗೆ ಮೂರರಿಂದ ನಾಲ್ಕು ಬಡ್ತಿ • ತನಿಖೆಗೆ ಸಚಿವ ಶರಣ ಪ್ರಕಾಶ ಸೂಚನೆ

ಜಿಟಿಟಿಸಿ: ನಿಯಮ ಉಲ್ಲಂಘಿಸಿ ಬಡ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿಟಿಟಿಸಿ) ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಸೇವಾ ಹಿರಿತನ ಕಡೆಗಣಿಸಿ ಹಲವು ನೌಕರರಿಗೆ ಏಕಕಾಲಕ್ಕೆ ಮೂರರಿಂದ ನಾಲ್ಕು ಬಡ್ತಿಗಳನ್ನು ನೀಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುವಂತೆ ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವ ಡಾ.ಶರಣ ಪ್ರಕಾಶ ಪಾಟೀಲ ನಿರ್ದೇಶನ ನೀಡಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಜಯನಗರ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ, ಗೋವಿಂದರಾಜ ನಗರ ಶಾಸಕ ಪ್ರಿಯಕೃಷ್ಣ ಮತ್ತು ನೆಲಮಂಗಲ ಶಾಸಕ ಶ್ರೀನಿವಾಸ್ ಅವರು ಸಚಿವರಿಗೆ ಪತ್ರ ಬರೆದು ತನಿಖೆಗೆ ಒತ್ತಾಯಿಸಿದ್ದರು.

2020ರಲ್ಲಿ ಅಂದಿನ ವ್ಯವಸ್ಥಾಪಕ ನಿರ್ದೇಶಕ ರಾಘವೇಂದ್ರ ಮತ್ತು ಆಡಳಿತ ವ್ಯವಸ್ಥಾಪಕ ಮುನೀರ್ ಖಾತಿಬ್ ಸೇರಿ ಅಂದಿನ ನೌಕರರ ಸಂಘದ ಜತೆ ಸೇರಿ ಮಾಡಿಕೊಂಡ ಒಪ್ಪಂದದಿಂದ ದೊಡ್ಡ ಪ್ರಮಾಣದಲ್ಲಿ ನೌಕರರಿಗೆ ಅನ್ಯಾಯವಾಗಿದೆ. ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿ, 2000ರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಸಿಬ್ಬಂದಿ ಸಂಖ್ಯಾ ಬಲವನ್ನು ಪರಿಗಣಿಸದೇ ರೋಸ್ಟರ್ ವ್ಯವಸ್ಥೆಯನ್ನೂ ಬದಿಗೊತ್ತಿ ಪೂರ್ವಾನ್ವಯವಾಗುವಂತೆ ಬಡ್ತಿ ನೀಡಲಾಗಿದೆ. ಇದರಿಂದ ಎಲ್ಲ ವೃಂದದ ಜ್ಯೇಷ್ಠತೆ, ಬಡ್ತಿ, ವೇತನ ಶ್ರೇಣಿಗಳಲ್ಲಿ ದೊಡ್ಡ ಪ್ರಮಾಣದ ತಾರತಮ್ಯ ಆಗಿದೆ. ಇದರಿಂದ ಸಂಸ್ಥೆಗೆ ಆರ್ಥಿಕ ನಷ್ಟವೂ ಆಗಿದೆ ಎಂದು ಶಾಸಕರು ಪತ್ರದಲ್ಲಿ ಉಲ್ಲೇಖಿಸಿದ್ದರು.

ಈ ರೀತಿ ಬಡ್ತಿ ಪಡೆದವರಲ್ಲಿ ಕೆಲವು ವೇತನ ರಹಿತವಾಗಿ ರಜೆಯಲ್ಲಿದ್ದವರು, ಗೈರು ಹಾಜರಾದವರಿಗೂ ಬಡ್ತಿ ಮತ್ತು ವೇತನ ಬಾಕಿ ನೀಡಲಾಗಿದೆ. ಇದರಿಂದ ಜಿಟಿಟಿಸಿಗೆ ಆರ್ಥಿಕ ನಷ್ಟವುಂಟಾಗಿದೆ. ಅಟೆಂಡರ್ ಆಗಿ ಸೇರಿದವರು ಫೋರ್‌ಮನ್ ಶ್ರೇಣಿಗೆ ಬಡ್ತಿ ಪಡೆದಿದ್ದಾರೆ. ಫೋರ್‌ಮನ್ ಹುದ್ದೆ ಅಧಿಕಾರಿ ಹುದ್ದೆಗಿಂತ ಒಂದು ಹಂತ ಕೆಳಗಿನದು. ನ್ಯಾಷನಲ್ ಅಪ್ರೆಂಟಿಶಿಪ್ ಸರ್ಟಿಫಿಕೇಟ್ (ಎನ್‌ಎಸಿ) ಪಡೆದು ಕೆಲಸ ಸೇರಿದವರಿಗೆ ಡಿಪ್ಲೊಮಾಗೆ ಸರಿಸಮಾನವೆಂದು ಪರಿಗಣಿಸಿ ಬಡ್ತಿ ನೀಡಲಾಗಿದೆ. ಸಂಸ್ಥೆಯ ನಿಯಮದ ಪ್ರಕಾರ, ಎನ್‌ಎಸಿಯನ್ನು ಡಿಪ್ಲೊಮಾಗೆ ಸಮಾನವಾಗಿ ಪರಿಗಣಿಸುವುದು ತಪ್ಪು ಎಂದು ಆಡಳಿತ ಮಂಡಳಿ ಸಭೆ ನಿರ್ಣಯಿಸಿದೆ. ಇದನ್ನೂ ಉಲ್ಲಂಘಿಸಲಾಗಿದೆ ಎಂದು ದೂರಿದ್ದಾರೆ.

ಮುಖ್ಯಾಂಶಗಳು
- ಪರಿಶಿಷ್ಟ ಜಾತಿ ಮತ್ತು ಪಂಗಡದ ಸಿಬ್ಬಂದಿಗೆ ಬ್ಯಾಕ್‌ಲಾಗ್ ಬಡ್ತಿ ಇಲ್ಲ
- ವೇತನ ರಹಿತ ರಜೆಯಲ್ಲಿ ಇದ್ದವರು, ಗೈರಾದವರಿಗೂ ಬಡ್ತಿ
- ಬಡ್ತಿ ಒಪ್ಪಂದದ ಸೇವಾ ನಿಯಮ 2000ರ ಉಲ್ಲಂಘನೆ

ಆರಂಭಗೊಳ್ಳದ ತನಿಖೆ

ಬಡ್ತಿ ಆಗಿರುವ ಲೋಪಗಳ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಸಚಿವ ಶರಣ ಪ್ರಕಾಶ ಪಾಟೀಲ ಅವರು ಸೂಚನೆ ನೀಡಿದ್ದರೂ ಇಲಾಖೆ ಹಾಗೂ ಜಿಟಿಟಿಸಿ ಇನ್ನೂ ತನಿಖೆ ಆರಂಭಿಸಿಲ್ಲ ಎಂದು ಮೂಲಗಳು ತಿಳಿಸಿವೆ.

'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಿ 2000 ದ ವೃಂದ ಮತ್ತು ನೇಮಕಾತಿ ನಿಯಮ ಮತ್ತು ಸೇವಾ ಹಿರಿತನವನ್ನು ಪರಿಗಣಿಸಿ ಆಗಿರುವ ತಪ್ಪುಗಳನ್ನು ಸರಿಪಡಿಸಬೇಕು. ಅಕ್ರಮವಾಗಿ ನೀಡಿರುವ ಮತ್ತು ಒಬ್ಬರಿಗೆ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ಬಡ್ತಿ ನೀಡಿರುವುದನ್ನು ರದ್ದುಪಡಿಸಬೇಕು' ಎಂದು ಜಿಟಿಟಿಸಿ ನೌಕರರ ಸಂಘದ ಪ್ರಧಾನಕಾರ್ಯದರ್ಶಿ ಎಚ್.ಎನ್. ದೇವರಾಜು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ನಿಯಮಾವಳಿಗಳ ಉಲ್ಲಂಘನೆ ಆಗಿದ್ದರೆ, ಶಿಸ್ತು ಕ್ರಮ ತೆಗೆದುಕೊಂಡು ಅವಕಾಶ ವಂಚಿತರಿಗೆ ಮುಂಬಡ್ತಿ ನೀಡುವ ಕುರಿತು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಲಾಗಿದೆ

ಡಾ.ಶರಣ ಪ್ರಕಾಶ ಪಾಟೀಲ
ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವ

ಐರಾವತ 2.0: ತಿಂಗಳ ಕೊನೆಗೆ 20 ಬಸ್ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐರಾವತ 2.0 ಮಾದರಿಯ 20 ಬಸ್‌ಗಳು ಅಕ್ಟೋಬರ್ ಕೊನೆಯೊಳಗೆ ಕೆಎಸ್‌ಆರ್‌ಟಿಸಿಗೆ ಸೇರ್ಪಡೆಗೊಳ್ಳಲಿವೆ.

ಹೊಸಕೋಟೆಯಲ್ಲಿರುವ ವೋಲ್ವೊ ಬಸ್ ತಯಾರಿಕಾ ಘಟಕಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ್, ಉಪಾಧ್ಯಕ್ಷ ಮೊಹಮ್ಮದ್ ರಿಜ್ವಾನ್ ನವಾಬ್, ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಸೋಮವಾರ ಭೇಟಿ ನೀಡಿ ಐರಾವತ-2.0 ಬಸ್‌ಗಳ ಪರಿವೀಕ್ಷಣೆ ನಡೆಸಿದರು.

ಮುಖ್ಯಾಂಶಗಳು
- ಹೊಸ ಮಾದರಿಯ ಒಳಾಂಗಣ ವಿನ್ಯಾಸ
- ಸುಧಾರಿತ ಎಂಜಿನ್, ಅಗ್ನಿ ಅವಘಡ ಎಚ್ಚರಿಕೆ ಮತ್ತು ಸುರಕ್ಷತೆ ವ್ಯವಸ್ಥೆ ಅಳವಡಿಕೆ

ಬಸ್ ವಿಶೇಷತೆ: ಶಕ್ತಿಶಾಲಿ ಹ್ಯಾಲೊಜೆನ್ ಹೆಡ್‌ಲೈಟ್ ಮತ್ತು ಹಗಲು ಚಾಲನಾ ಲೈಟ್‌ಗಳೊಂದಿಗೆ (ಡಿಆರ್‌ಎಲ್) ಹೊಸ ಮಾದರಿಯ ಸುಂದರವಾದ ಒಳಾಂಗಣ ವಿನ್ಯಾಸ ಮತ್ತು ಬಾಹ್ಯವಾಗಿ ಸ್ಕ್ಯಾಂಡಿನೇವಿಯನ್ ವಿನ್ಯಾಸವನ್ನು ಈ ಬಸ್ ಹೊಂದಿದೆ.

ಇಂಧನ ದಕ್ಷತೆ ಹೆಚ್ಚಿರುವ ಏರೋಡೈನಾಮಿಕ್ ವಿನ್ಯಾಸ ಅಳವಡಿಸಲಾಗಿದೆ. ಸುಧಾರಿತ ಎಂಜಿನ್, ಅಗ್ನಿ ಅವಘಡ ಎಚ್ಚರಿಕೆ ಮತ್ತು ಸುರಕ್ಷತೆ ವ್ಯವಸ್ಥೆ (ಎಫ್‌ಎಪಿಎಸ್) ಅಳವಡಿಸಲಾಗಿದೆ. ಬಸ್ಸಿನ ಒಳಗೆ ಪ್ರಯಾಣಿಕರ ಆಸನದ ಎರಡೂ ಬದಿಯಲ್ಲಿ ನೀರಿನ ಪೈಪುಗಳಿದ್ದು 30 ನಾಜಲ್‌ಗಳಿಂದ ನೀರು ಸರಬರಾಜು ಆಗಿ ಬೆಂಕಿ ಅವಘಡ ನಿಯಂತ್ರಿಸುವ ವ್ಯವಸ್ಥೆ ಇದಾಗಿದೆ.

ಶೇ 3.5ರಷ್ಟು ಅಧಿಕ ಉದ್ದ ಇರುವ ಬಸ್‌ನಲ್ಲಿ ಪ್ರಯಾಣಿಕರ ಆಸನಗಳ ನಡುವಿನ ಅಂತರ ಹೆಚ್ಚಿಸಲಾಗಿದೆ. ಬಸ್‌ನ ಎತ್ತರ ಶೇ. 5.6ರಷ್ಟು ಅಧಿಕ ಇರಲಿದೆ. ಕಿಟಕಿ ಗಾಜು ಶೇ 9.5ರಷ್ಟು ವಿಸ್ತಾರವಾಗಿದೆ. ವಿಶಾಲ ಲಗೇಜು ಸ್ಥಳಾವಕಾಶ, ಅತ್ಯಾಧುನಿಕ ಮೊಬೈಲ್ ಚಾರ್ಜಿಂಗ್ ಪಾಯಿಂಟ್, ಉತ್ತಮ ಹವಾನಿಯಂತ್ರಣಾ ವ್ಯವಸ್ಥೆ ಇದೆ.

ಹಿಂಭಾಗದಲ್ಲಿ ಫಾಗ್ ಲೈಟ್ ಅಳವಡಿಸಿರುವುದರಿಂದ ರಾತ್ರಿ ವೇಳೆಯಲ್ಲಿ ಹೆಚ್ಚಿನ ಸುರಕ್ಷತೆ ಇರುತ್ತದೆ. ಚಾಲಕರಿಗೆ ಸುಲಭವಾಗಿ ಕೈಗೆಟುಕುವ ಚಾಲಕ ನಿಯಂತ್ರಣಗಳು ಮತ್ತು ಸ್ವಿಚ್‌ಗಳನ್ನು ಹೊಂದಿದೆ. ಬಾಗಿಲಿನ ಮೂಲಕ ಪಾದಚಾರಿಗಳನ್ನು ಸುಲಭವಾಗಿ ಚಾಲಕರು ಗಮನಿಸುವ ವ್ಯವಸ್ಥೆ ಇದೆ.

ವೋಲ್ವೊ-9600 ಮಾದರಿಯಾಗಿದ್ದು, ಒಂದು ಬಸ್‌ನ ದರ ₹1.78 ಕೋಟಿ ಆಗಿದೆ. ಈಗಾಗಲೇ 443 ಐಷಾರಾಮಿ ಬಸ್‌ಗಳನ್ನು ಸಂಸ್ಥೆ ಹೊಂದಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿಗೆ ಸೇರ್ಪಡೆಗೊಳ್ಳಲಿರುವ ಐರಾವತ 2.0 ಮಾದರಿಯ ಬಸ್ ಅನ್ನು ಹೊಸಕೋಟೆ ವೋಲ್ವೊ ಬಸ್ ತಯಾರಿಕಾ ಫ್ಯಾಕ್ಟರಿಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವೀಕ್ಷಿಸಿದರು

ಕೆರೆಗಳ ಸ್ವಚ್ಛತೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಂಟು ಕೆರೆಗಳಲ್ಲಿ ಸ್ವಚ್ಛತಾ ಅಭಿಯಾನ ಮಂಗಳವಾರ ಆರಂಭವಾಯಿತು.

ಕೆಳಗಿನ ಬೈರಸಂದ್ರ, ನಾಯಂಡಹಳ್ಳಿ, ಗೌಡನಪಾಳ್ಯ, ಕೌದೇನಹಳ್ಳಿ, ದೊರೆಕೆರೆ, ಅಗರ, ಅಮೃತಹಳ್ಳಿ, ಚೊಕ್ಕಸಂದ್ರ ಹಾಗೂ ಉಲ್ಲಾಳು ಕೆರೆಗಳಲ್ಲಿ 175 ಸಿಬ್ಬಂದಿ, 13 ಟ್ರ್ಯಾಕ್ಟರ್ ಹಾಗೂ ನಾಲ್ಕು ಜೆಸಿಬಿಗಳನ್ನು ಬಳಸಿಕೊಂಡು ಸ್ವಚ್ಛತಾ ಕೆಲಸ ಮಾಡಲಾಗಿದೆ ಎಂದು ಅರಣ್ಯ, ಪರಿಸರ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಹೇಳಿದ್ದಾರೆ.

ಅಮೃತಹಳ್ಳಿ, ಕೌದೇನಹಳ್ಳಿ ಹಾಗೂ ಕೆಳಗಿನ ಬೈರಸಂದ್ರ ಕೆರೆಗಳಿಗೆ ಪ್ರೀತಿ ಗೆಹ್ಲೋಟ್ ಮಂಗಳವಾರ ಭೇಟಿ ನೀಡಿದ್ದರು.

ಕೆರೆಯ ಅಂಗಳದ ಪಾದಚಾರಿ ಮಾರ್ಗದಲ್ಲಿ ಸ್ವಚ್ಛತೆ, ಕೆರೆ ಏರಿಯಲ್ಲಿ ಕಳೆ ತೆಗೆಯುವುದು, ನೀರಿನಲ್ಲಿ ಜೊಂಡು ತೆಗೆಯುವುದು, ಒಳಹರಿವು ಸ್ವಚ್ಛತೆಗೊಳಿಸುವ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಸ್ವಚ್ಛತಾ ಅಭಿಯಾನವು ಈ ವಾರ ಪೂರ್ತಿ ನಡೆಯಲಿದ್ದು, ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಿಕೊಂಡು ಸರಿಯಾಗಿ ಸ್ವಚ್ಛತೆ ಮಾಡಲು ಅಧಿಕಾರಿಗಳಿಗೆ ಹೇಳಿದರು.

ಉಲ್ಲಾಳು ಕೆರೆಯಲ್ಲಿ ಸಿಬ್ಬಂದಿ ಮಂಗಳವಾರ ಸ್ವಚ್ಛತೆ ನಡೆಸಿದರು

ಪೌರಕಾರ್ಮಿಕರ ಕರಡು ಆಯ್ಕೆ ಪಟ್ಟಿ ಇಂದು ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪೌರಕಾರ್ಮಿಕ ಹುದ್ದೆಗಳಿಗೆ ಆಯ್ಕೆಯಾಗಿರುವ 12,692 ಅಭ್ಯರ್ಥಿಗಳ ಕರಡು ಪಟ್ಟಿಯನ್ನು ಅಕ್ಟೋಬರ್ 9ರಂದು ಪಾಲಿಕೆ ಪ್ರಕಟಿಸಲಿದೆ.

'ಪಾಲಿಕೆ ವ್ಯಾಪ್ತಿಯಲ್ಲಿ ನೇರ ಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ 'ಡಿ' ವೃಂದದ ಪೌರಕಾರ್ಮಿಕರ ನೇಮಕಾತಿ ಪ್ರಕ್ರಿಯೆಯನ್ನು ಎರಡು ಹಂತದಲ್ಲಿ ನಡೆಸಲಾಗುತ್ತಿದೆ. ಮೊದಲ ಹಂತದಲ್ಲಿ 3,673 ಹಾಗೂ ಎರಡನೇ ಹಂತದಲ್ಲಿ 11,307 ಹುದ್ದೆಗಳು ಸೇರಿದಂತೆ ಒಟ್ಟು 14,980 ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಬೇಕಾಗಿದೆ. ಇದರಲ್ಲಿ ನಿಯಮಾನುಸಾರ 12,692 ಅರ್ಹ ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ' ಎಂದು ಆಡಳಿತ ವಿಭಾಗದ ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರನ್ ತಿಳಿಸಿದ್ದಾರೆ.

ಘನತ್ಯಾಜ್ಯ ನಿರ್ವಹಣೆ ಹಾಗೂ ವಿವಿಧ ಸ್ವಚ್ಛತಾ ಕಾರ್ಯಗಳ ನಿರ್ವಹಣೆಗಾಗಿ ಘನತ್ಯಾಜ್ಯ ವಿಭಾಗದಲ್ಲಿ ನೇರ ಪಾವತಿಯಡಿ(ಡಿಪಿಎಸ್) ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಂದ 15 ಸಾವಿರಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದವು. ದೀರ್ಘಾವಧಿ ಸೇವೆ, ರೋಸ್ಟರ್ ಪದ್ಧತಿ ಹಾಗೂ ವಿವಿಧ ಮಾನದಂಡಗಳ ಆಧಾರದ ಮೇಲೆ ಎರಡು ಹಂತಗಳಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ಅರ್ಜಿ ಸಲ್ಲಿಸಿದವರ ಪೈಕಿ 12,692 ಪೌರಕಾರ್ಮಿಕರನ್ನು ಆಯ್ಕೆ ಮಾಡಲಾಗಿದೆ ಎಂದಿದ್ದಾರೆ.

ಕರಡು ಆಯ್ಕೆ ಪಟ್ಟಿಯನ್ನು ಪಾಲಿಕೆ ವೆಬ್‌ಸೈಟ್ https://bbmp.gov.in/home ನಲ್ಲಿ ಪ್ರಕಟಿಸಲಾಗುತ್ತಿದೆ. ಅಲ್ಲದೆ, ಆಯಾ ವಲಯದ ಜಂಟಿ ಆಯುಕ್ತರ ಕಚೇರಿ ಹಾಗೂ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಚೇರಿಯಲ್ಲೂ ಪಟ್ಟಿ ಪ್ರಕಟಿಸಲಾಗುತ್ತದೆ. ಆಕ್ಷೇಪಣೆಗಳಿದ್ದರೆ ಅ.21ರೊಳಗೆ ಸಲ್ಲಿಸಬಹುದು ಎಂದು ತಿಳಿಸಿದ್ದಾರೆ.

'ಪೌರಕಾರ್ಮಿಕರ ಹುದ್ದೆಗೆ ಆಯ್ಕೆಯಾಗಿರುವವರು ಯಾವುದೇ ಆಸೆ, ಆಮಿಷಗಳಿಗೆ ಒಳಗಾಗಬಾರದು. ಮಧ್ಯವರ್ತಿಗಳ ಮಾತುಗಳನ್ನು ಕೇಳಿ ವಂಚನೆಗೆ ಒಳಗಾಗಬಾರದು. ಪಟ್ಟಿಯ ಬಗ್ಗೆ ಮಾಹಿತಿ ಅಥವಾ ವಿವರಣೆ ಬೇಕಿದ್ದರೆ ಬಿಬಿಎಂಪಿ ಕಚೇರಿಗೆ ಭೇಟಿ ನೀಡಬೇಕು' ಎಂದಿದ್ದಾರೆ.

ಮೈಸೂರು ರೇಸ್

ಗ್ರಿಜ್ಲಿ ಗೆಲ್ಲುವ ನಿರೀಕ್ಷೆ

ಚೀಫ್ ಮಿನಿಸ್ಟರ್ಸ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗ್ರಿಜ್ಲಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕ್ಯೂವೆಗ 6, ಇಕೊ ಸಿಸ್ಟಮ್ 7, ಸ್ಯಾಂಡ್ ಕ್ಯಾಸ್ಸ್ 3
2ನೇ ರೇಸ್: ಸ್ಕ್ವೇರ್ ಕಟ್ 7, ವರ್ದಾನ್ 4, ಗೋಲ್ಡನ್ ಬರ್ಡ್ 6
3ನೇ ರೇಸ್: ಕಾನ್ಫಿಡೆಂಟ್ ಗೇಮ್ 1, ನ್ಯಾಚುರಲ್ ಸ್ಪೀಡ್ 2, ಬ್ರೂಸ್ ಅಲ್‌ಮೈಟಿ 5
4ನೇ ರೇಸ್: ಗ್ರಿಜ್ಲಿ 4, ರೈಸ್ ಎ ಬಕ್ 8, ಮಿಸ್ಟಿಕ್ ಬಾಂಡ್ 2
5ನೇ ರೇಸ್: ಸೂಪರ್ ಕೈಂಡ್ 4, ಕೇಪ್ರಿ ಗರ್ಲ್ 8, ಲಾಟರ್‌ಬ್ರನೆನ್ 1
6ನೇ ರೇಸ್: ವಾಯು 7, ಡಾಲ್‌ಹೌಸಿ 3, ಕಂಟ್ರಿ ಮ್ಯಾಜಿಕ್ 5

ಉತ್ತಮ ಬೆಟ್: ವಾಯು

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಸರ್ಜಾಪುರ ರಸ್ತೆಯಲ್ಲಿ ಮಲಬಾರ್ ಗೋಲ್ಡ್ & ಡೈಮಂಡ್ಸ್ ಮಳಿಗೆ

ಬೆಂಗಳೂರು: ಜಾಗತಿಕ ಆಭರಣ ತಯಾರಕ ಮತ್ತು ಮಾರಾಟ ಸಂಸ್ಥೆ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ತನ್ನ ನೂತನ ಮಳಿಗೆಯನ್ನು ಬೆಂಗಳೂರಿನ ಸರ್ಜಾಪುರ ರಸ್ತೆಯಲ್ಲಿ ತೆರೆದಿದೆ.

ಮಲಬಾರ್ ಗೋಲ್ಡ್ ಸಂಸ್ಥೆಯ 18ನೇ ಮತ್ತು ಕರ್ನಾಟಕದ 36ನೇ ಶೋರೂಮ್ ಅನ್ನು ಖ್ಯಾತ ಚಿತ್ರನಟಿ ಶ್ರೀನಿಧಿ ಶೆಟ್ಟಿ ಅವರು ಅ.6 ರಂದು ಅದ್ದೂರಿಯಾಗಿ ಉದ್ಘಾಟಿಸಿದರು.

ಈ ಶುಭ ಸಂದರ್ಭದಲ್ಲಿ ಮಲಬಾರ್ ಗೋಲ್ಡ್ & ಡೈಮಂಡ್ಸ್ ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು, ಸಂಸ್ಥೆಯ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಬದ್ಧತೆಯ ಪ್ರತಿಬಿಂಬ: ಹೊಸ ಮಳಿಗೆ ಉದ್ಘಾಟನೆ ಬಗ್ಗೆ ಪ್ರತಿಕ್ರಿಯೆ ನೀಡಿದ ಮಲಬಾರ್ ಸಮೂಹ ಅಧ್ಯಕ್ಷ ಎಂ.ಪಿ. ಅಹ್ಮದ್, ಸರ್ಜಾಪುರ ರಸ್ತೆಯಲ್ಲಿ ಶೋರೂಮ್ ಆರಂಭಿಸಿರುವುದಕ್ಕೆ ತುಂಬಾ ಸಂತೋಷವಾಗಿದೆ. ಬೆಂಗಳೂರಿನ ಗ್ರಾಹಕರಿಗೆ ಅತ್ಯುನ್ನತ ಚಿನ್ನಾಭರಣಗಳನ್ನು ಒದಗಿಸುವ ನಮ್ಮ ಬದ್ಧತೆಯ ಪ್ರತಿಬಿಂಬ ಈ ಮಳಿಗೆಯಾಗಿದೆ. ನಮಗೆ ಇದೊಂದು ಹೊಸ ಮೈಲಿಗಲ್ಲಾಗಿದ್ದು, ಗ್ರಾಹಕ ಸಮುದಾಯ ನಮ್ಮ ಮೇಲಿಟ್ಟಿರುವ ವಿಶ್ವಾಸ ಮತ್ತು ಬೆಂಬಲಕ್ಕೆ ತಕ್ಕಂತ ಮೌಲ್ಯವನ್ನು ನಾವು ನೀಡಲಿದ್ದೇವೆ ಎಂದಿದ್ದಾರೆ.

ಸರ್ಜಾಪುರ ರಸ್ತೆಯ ಕೈಕೊಂಡ್ರಹಳ್ಳಿ ಪೈ ಇಂಟರ್‌ನ್ಯಾಷನಲ್ ಸಮೀಪದ ಪಿಎಲ್‌ಆರ್ ಸ್ಕ್ವೇರ್‌ನಲ್ಲಿ ತೆರೆಯಲಾದ ಮಳಿಗೆಯಲ್ಲಿ ಮೈನ್ ಡೈಮಂಡ್ ಜ್ಯುವೆಲರಿ, ಎರಾ ಅನ್‌ಕಟ್ ಡೈಮಂಡ್ ಜ್ಯುವೆಲರಿ, ಡಿವೈನ್ ಹೆರಿಟೇಜ್ ಜ್ಯುವೆಲರಿ, ಎಥ್ನಿಕ್ ಹ್ಯಾಂಡ್‌ಕ್ರಾಫ್ಟೆಡ್ ಜ್ಯುವೆಲರಿ, ಪ್ರೆಸಿಯಾ ಪ್ರೆಸಿಯಸ್ ಜೆಮ್‌ಸ್ಟೋನ್ ಜ್ಯುವೆಲರಿ ಮತ್ತು ವಿರಾಝ್ ರಾಯಲ್ ಪಾಲ್ಕಿ ಜ್ಯುವೆಲರಿ ಸೇರಿದಂತೆ ಮಲಬಾರ್‌ನ ಶ್ರೇಷ್ಠ ಬ್ರ್ಯಾಂಡ್‌ಗಳ ಸಂಗ್ರಹಗಳಿವೆ. ಇಲ್ಲಿ ಬ್ರೈಡಲ್, ಸಾಂಪ್ರದಾಯಿಕ ಹಾಗೂ ಸಮಕಾಲೀನ ವಿನ್ಯಾಸಗಳ ಆಕರ್ಷಕ ಆಭರಣಗಳನ್ನು ಕಾಣಬಹುದು. ಗುಣಮಟ್ಟದ ಭರವಸೆ ಮತ್ತು ಮಾರಾಟ ನಂತರದ ಸೇವೆಗಳ ಬಗ್ಗೆ ಸಂಸ್ಥೆ ಖಾತ್ರಿ ನೀಡುತ್ತದೆ.

ಆಕರ್ಷಕ ಉಡುಗೊರೆ: ಹಬ್ಬದ ದಿನಗಳ ಪ್ರಯುಕ್ತ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ₹50 ಸಾವಿರ ಮೌಲ್ಯದ ಆಭರಣ ಖರೀದಿಸುವ ಗ್ರಾಹಕರಿಗೆ ಆಕರ್ಷಕ ಉಡುಗೊರೆ ನೀಡಲಿದೆ. ಅನ್‌ಕಟ್, ಪೋಲ್ಕಿ ಮತ್ತು ಪ್ರೆಶಿಯಸ್ ಜ್ಯುವೆಲರಿ ಖರೀದಿ ಮೇಲೆ 200 ರಿಂದ 300 ಮಿಲಿ ಗ್ರಾಂ ತೂಕದ ಚಿನ್ನದ ನಾಣ್ಯ ಉಚಿತ ಹಾಗೂ ವಜ್ರಾಭರಣ ಖರೀದಿ ಮೇಲೆ 400 ಮಿಲಿ ಗ್ರಾಂ ತೂಕದ ಚಿನ್ನದ ನಾಣ್ಯ ಪಡೆಯಲಿದ್ದಾರೆ. ದೀಪಾವಳಿ ವಿಶೇಷ, ಗ್ರಾಹಕರು ಶೇ.10 ರಷ್ಟು ಹಣ ನೀಡಿ ಆಭರಣಗಳನ್ನು ಮುಂಗಡ ಬುಕ್ಕಿಂಗ್ ಮಾಡಿಕೊಳ್ಳುವ ವ್ಯವಸ್ಥೆ ಕಲ್ಪಿಸಲಾಗಿದೆ. ಹಳೆಯ ಚಿನ್ನ ಮತ್ತು ವಜ್ರಗಳಿಗೆ ಶೇ.100 ರಷ್ಟು ವಿನಿಮಯ ಮೌಲ್ಯ ನೀಡಲಾಗುತ್ತದೆ. ಪ್ರಮಾಣೀಕೃತ ವಜ್ರಗಳನ್ನು 28 ಹಂತದ ಗುಣಮಟ್ಟ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಅಲ್ಲದೆ, ಗ್ರಾಹಕರು ಖರೀದಿಸುವ ಎಲ್ಲ ಆಭರಣಗಳಿಗೆ ಒಂದು ವರ್ಷದವರೆಗೆ ಉಚಿತ ವಿಮೆ ಸೌಲಭ್ಯ ಕಲ್ಪಿಸಲಾಗುತ್ತದೆ ಎಂದು ಸಂಸ್ಥೆ ಹೇಳಿದೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್ ಹೊಸ ಶೋರೂಂ ಅನ್ನು ಚಿತ್ರನಟಿ ಶ್ರೀನಿಧಿ ಶೆಟ್ಟಿ ಉದ್ಘಾಟಿಸಿದರು. ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು, ಸಂಸ್ಥೆಯ ಹಿರಿಯ ಅಧಿಕಾರಿ ಇತರರು ಉಪಸ್ಥಿತರಿದ್ದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

'ಮೂಢನಂಬಿಕೆ ದೂರ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜ್ಞಾನ ಜ್ಞಾನ ಮತ್ತು ಎಂಜಿನಿಯರಿಂಗ್ ಜ್ಞಾನ ಭದ್ರವಾಗಿದ್ದರೆ ಮಾತ್ರ ತಂತ್ರಜ್ಞಾನ ಉತ್ತಮವಾಗಿರುತ್ತದೆ. ಈ ನಿಟ್ಟಿನಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಗಮನಹರಿಸಿದರೆ ಜೀವನದಲ್ಲಿ ಯಶಸ್ಸು ಸಾಧ್ಯ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಡಾ. ಜಗದೀಶ್ ಗೋಪಾಲನ್ ಹೇಳಿದರು.

ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕದ ಡಾ.ಎಚ್.ಎನ್. ನ್ಯಾಷನಲ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ನೂತನ ವಿದ್ಯಾರ್ಥಿಗಳ ಸ್ವಾತಗ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

'ಸಂಶೋಧನೆಗಳು ವಿಫಲವಾದಾಗ ನೋವಾಗುವುದು ಸಹಜ. ಕಣ್ಣೀರಿಡುವ ಬದಲು ಪ್ರಯೋಗಾಲಯದಲ್ಲಿ ತಪ್ಪಾದ ವಿಷಯವನ್ನು ಸರಿಪಡಿಸುವ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವುದೇ ಜೀವನ' ಎಂದರು.

'ಪ್ರಶ್ನಿಸುವ ಪ್ರವೃತ್ತಿ ಹೆಚ್ಚಾಗಬೇಕು. ಮೂಢನಂಬಿಕೆ ದೂರ ಮಾಡಲು ಎಚ್.ನರಸಿಂಹಯ್ಯ ಅವರು ಜೀವನದಲ್ಲಿ ಹೋರಾಟ ನಡೆಸಿದ್ದರು' ಎಂದರು.

ಬಿಬಿಎಂಪಿ ದಕ್ಷಿಣ ವಲಯದ ಜಂಟಿ ಆಯುಕ್ತ ಎಚ್.ಆರ್.ಶಿವಕುಮಾರ್ ಮಾತನಾಡಿ, 'ರಾಜ್ಯದಲ್ಲೇ ಅತ್ಯಂತ ಪಾರದರ್ಶಕ ಕೌನ್ಸೆಲಿಂಗ್ ವ್ಯವಸ್ಥೆಯಿದೆ. ಈ ನೀತಿಯಿಂದಾಗಿ ಬಡವರೂ ಓದುವಂತಾಯಿತು' ಎಂದು ತಿಳಿಸಿದರು.

ಚಿತ್ರಾವಳಿ

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹ್ಯಾಟ್ರಿಕ್ ವಿಜಯ ಸಾಧಿಸಿ ಅಧಿಕಾರ ಹಿಡಿದ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿ ಕಚೇರಿಯಲ್ಲಿ ವಿಜಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಅವರಿಗೆ ಮಾಜಿ ಸಚಿವ ಎನ್.ಮಹೇಶ್ ಸಿಹಿ ತಿನ್ನಿಸಿ ಸಂಭ್ರಮಿಸಿದರು. ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಭಾಗವಹಿಸಿದ್ದರು

ಬೆಂಗಳೂರು ಜಿಲ್ಲಾಮಟ್ಟದ ಹ್ಯಾಂಡ್ ಬಾಲ್ ಪಂದ್ಯಾವಳಿಯ ಅಂತಿಮ ಪಂದ್ಯದಲ್ಲಿ ದೊಡ್ಡಬೆಲೆಯಲ್ಲಿರುವ ಬಸವ ಬಾಲಕಿಯರ ವಸತಿ ಶಾಲೆ ಗೆಲುವು ಸಾಧಿಸಿ ಪ್ರಶಸ್ತಿ ಪಡೆಯಿತು. ವಿಜೇತ ವಿದ್ಯಾರ್ಥಿನಿಯರ ತಂಡದ ಜೊತೆಗೆ ದೈಹಿಕ ಶಿಕ್ಷಣ ಶಿಕ್ಷಕ ಬಿ.ಎಲ್‌ಪೂಜಾರಿ ಉಪಸ್ಥಿತರಿದ್ದರು

ಸಂಸದ ಬಸವರಾಜ ಬೊಮ್ಮಾಯಿ ಅವರು ಬಿಜೆಪಿ ಕಚೇರಿಯಲ್ಲಿ ಲೇಖಕ ಡಾ.ಆರ್‌ಬಾಲಸುಬ್ರಹ್ಮಣ್ಯಂ ಅವರ 'ಪವರ್ ವಿದಿನ್ ದಿ ಲೀಡರ್‌ಶಿಪ್ ಲೆಗೆಸಿ ಆಫ್ ನರೇಂದ್ರ ಮೋದಿ' ಕೃತಿ ಬಿಡುಗಡೆಗೆ ಮುನ್ನ ಕೃತಿಯ ಕುರಿತಾದ ಪೋಸ್ಟರ್‌ಗಳನ್ನು ವೀಕ್ಷಿಸಿದರು

Hyundai
Super Delight Days
ಈ ಹಬ್ಬದ ಸೀಸನ್‌ನಲ್ಲಿ Hyundai ಕಾರುಗಳ ಮೇಲೆ ಅದ್ಭುತ ಲಾಭಗಳನ್ನು ಗಳಿಸಿ.
HYUNDAI
Hyundai Super Delight Days
Avail amazing benefits on Hyundai cars.
Service
ಕೊಡುಗೆ 2024 ಅಕ್ಟೋಬರ್ 31ರವರೆಗೆ ಲಭ್ಯವಿರಲಿದೆ.*
Hyundai EXTER ಮತ್ತು Grand i10 NIOS ನಲ್ಲಿ Hy-CNG Duo ಲಭ್ಯವಿರುತ್ತದೆ
VENUE ಲಾಭಗಳು ₹80 629* ವರೆಗೆ
EXTER ಲಾಭಗಳು ₹42 972* ವರೆಗೆ
i20 ಲಾಭಗಳು ₹55 000* ವರೆಗೆ
Grand i10 NIOS ಲಾಭಗಳು ₹58 000* ವರೆಗೆ
^^₹ 5 999 ಪಾವತಿಸಿ VENUE ಆಕ್ಸೆಸರಿ ಪ್ಯಾಕೇಜ್ ಅನ್ನು ಪಡೆದರೆ ₹ 21 628 ಮೌಲ್ಯದ ವರೆಗೆ ಲಾಭಗಳನ್ನು ಗಳಿಸಬಹುದು. ₹ 4 999 ಪಾವತಿಸಿ EXTER ಆಕ್ಸೆಸರಿ ಪ್ಯಾಕೇಜ್ ಪಡೆದರೆ ₹ 17 971 ಮೌಲ್ಯದ ವರೆಗೆ ಲಾಭಗಳನ್ನು ಗಳಿಸಬಹುದು.
##ಮಾನ್ಯತೆ ಇರುವ ಪ್ರಮಾಣಪತ್ರವನ್ನು ಸಲ್ಲಿಸಿದರೆ ಹೆಚ್ಚುವರಿ ಸ್ಕ್ರಾಪೇಜ್ ಬೋನಸ್ ಲಭ್ಯವಿದೆ. #CSD ಮತ್ತು KPKB ಮೇಲೆ ವಿಶೇಷ ಲಾಭಗಳು ಲಭ್ಯವಿರುತ್ತವೆ.
HYUNDAI
Hyundai Cl!ck to Buy Scan here
3 YEAR Unlimited** Kilometer Warranty
UPTO 7 YEARS Extended Warranty^
3 YEARS Road Side Assistance (RSA)***
UPTO 5 YEARS Shield of Trust Running Repair Package~
UPTO 5 YEARS Shield of Trust Super Maintenance Package~
Hy - CNG Duo
For Information Contact: Toll Free:1800114645 Bangalore: Advaith Hyundai, Residency Road, Ph: 9606076451 Marathahalli, Outer Ring Road, Ph: 9606076452 Vasanthnagar, Ph: 9606076453 Bannerghatta Road, Ph: 9606076454 Kormangala, Ph: 9606076455 Avalahalli, Ph: 9606076456, Sarjapura Ph: 9606076458 Bilekahalli, Ph: 9606076457 Trident Hyundai, Sankey Road, Ph: 9844266882 K R Puram, Ph: 9844266873 Hosur Road, Ph: 9964187952 Indiranagar, Ph: 9743107927, Yelahanka, Ph: 7353750677, Yeshwantpur, Ph: 9844701452 Blue Hyundai, New Bel Road, Ph: 9513000800 Magadi Road, Ph: 9513200033, Rajajinagar, Ph: 9591200001, Basavangudi, Ph: 9591211118, Mysore Road, Ph: 9591100001, Nelamangala, Ph: 9742245636 Lakshmi Hyundai, Hebbal Ph: 9900037900 Kalyan Nagar, Ph: 8884441111, Whitefield, Ph: 8884497700, Devanahalli, Ph: 8884499037 Pavan Hyundai, Kanakpura Road, Ph: 7337882400, Electronic City, Ph: 7337882335 Ramanagara: Advaith Hyundai, Ph: 9900095504, Pavan Hyundai, Kanakpura, Ph: 7892718572 Kolar: Advaith Hyundai, Ph: 9620229885, Chintamani, Ph: 8147994737 Mangalore: Kanchana Hyundai, Ph: 9900144113, Advaith Hyundai, Ph: 9606938832 Dakshina Kannada: Kanchana Hyundai, Puttur, Ph: 9740873450, Surathkal, Ph: 9482574530. Advaith Hyundai Belthangady, Ph: 7760962819, Sullia, Ph: 8861003072 Udupi: Kanchana Hyundai, Ph: 9611133151, 9972440758, Kundapur, Ph: 9900145948, Karkala, Ph: 8762464853 Uttara Kannada: Kanchana Hyundai, Karwar, Ph: 6366770399, Sirsi, Ph: 9731856300, Kumta, Ph: 9535855966 Mysore: Advaith Hyundai, Belavadi, Ph: 9538970802 JLB Road, Ph: 9538971141, KPR Hyundai, Mysore Ph: 9538879294 Hunsur, Ph: 9606478210 Mandya: Advaith Hyundai, Ph: 9740060075 Coorg: Advaith Hyundai, Madikeri, Ph: 9538971151 Gonikoppal, Ph: 9945774088 Kushalnagar, Advaith Hyundai, Ph: 9538971149 Hassan: Advaith Hyundai, Ph: 9620004782, KPR Hyundai, Sakleshpura, Ph: 9538879238, Channarayapatna, Ph: 9538879238 Shimoga: Rahul Hyundai, Ph: 6364465441 Sagar, Ph: 7625080180, Thirthahalli, Ph: 9108843230, Shikaripura, Ph: 7795800034 Chikmagalur: Rahul Hyundai, Ph: 7795800038 Hubli: Bellad Hyundai, Ph: 9900035084, Raam Hyundai, Ph: 8495072555, Bellad Hyundai, Dharwad, Ph: 9900255267 Belgaum: Nagshanti Hyundai, Ph: 9844890456, 9844890459 Chikodi, Ph: 7411307080 Gokak, Ph: 8147978240 Athani, Ph: 8722552253, 9620341451 Saundatti, Ph: 8147978240 Bijapur: Narayan Hyundai, Ph: 9742272157, 9742272153 Bagalkot, Ph: 9742253245, Jamkhandi, Ph: 9742272271 Davanagere: KJ Hyundai, Ph: 7022001201 Channagiri, Ph: 7022425985 Chitradurga: KJ Hyundai, Ph: 9980759983 Gulbarga: Shah Hyundai, Ph: 9108049250 Hospete: Anika Hyundai, Ph: 8884484018 Bidar: Shah Hyundai, Ph: 7625093556, Basvakalyan Ph: 9108049250 Raichur: Shah Hyundai, Ph: 9108049252, Sindhanur, Ph: 9071371501 Tumkur: Pavan Hyundai, Ph: 9364012913, Advaith Hyundai, Tiptur, Ph: 9686668513, Bellari: Anika Hyundai, Ph: 8792910448 Yadgir: Shah Hyundai, Ph: 9108049262 Koppal: Anika Hyundai, Ph: 8884484015, Chamarajanagar: KPR Hyundai, Kollegal, Ph : 9035708713, Gadag: Bellad Hyundai, Ph : 9844504724, Haveri: Bellad Hyundai, Haveri Ph: 9731596540, KJ Hyundai, Ranebennur Ph: 7406555311
my Hyundai app
Hyundai Promise Certified Pre-Owned Car
Scan to chat with us or give a missed call at 9555295868
Terms & Conditions apply. *Scheme is applicable on select variants of Hyundai VENUE, Hyundai EXTER, Hyundai i20 & Hyundai Grand i10 NIOS cars purchased between 1st - 31st October 2024.
INNOCEAN-039/24 KAN

ಸುಜುಕಿ ಜೊತೆಗೆ ಆನಂದಮಯ ಮತ್ತು ವರ್ಣಮಯ ಸಂಭ್ರಮಾಚರಣೆ
ಸುಜುಕಿ ಪರಿಚಯಿಸುತ್ತಿದೆ
SUZUKI
ದಸರಾ ಕೊಡುಗೆ
ವಿಸ್ತರಿತ ವಾರಂಟಿ 10 ವರ್ಷಗಳು*
₹10 000* ವರೆಗೆ ವಿನಿಮಯ ಕೊಡುಗೆ
ಕ್ಯಾಶ್‌ಬ್ಯಾಕ್ ಕೊಡುಗೆ ₹10 000* ವರೆಗೆ
100%* ವರೆಗೆ ಸಾಲ
ನೋ ಹೈಪೋಥಿಕೇಷನ್*
Access 125
Avenis
BURGMAN STREET
GIXXER SF
V-STROM SX
HDFC BANK We understand your world
IDFC FIRST Bank ALWAYS YOU FIRST
L&T Financial Services Two-wheeler Finance
SHRIRAM Finance
SUZUKI at your Doorstep
SUZUKI WARRANTY COVERAGE UP TO 10 YEARS
SUZUKI ROADSIDE ASSISTANCE
Ride safe. Wear a helmet.
For further information, call Suzuki Motorcycle India Private Limited (Toll-Free): 1800-121-7996 (Mon-Sat from 9:00 am to 6:00 pm), or write to us at: customer.queries@suzukimotorcycle.in, visit website: www.suzukimotorcycle.co.in for T&C or visit nearest Suzuki two-wheeler dealership for more.
BANGALORE: Basavanagudi: ADVAITH SUZUKI – Ph: 9880741841 , Kathriguppe: APPLE SUZUKI, Ph: 080-26697070/8080, 8884446504/08/02, BTM Layout: APPLE SUZUKI, Ph: 8884446512, Kanakapura Road: APPLE SUZUKI, Ph: 8884446503, RR Nagar: APPLE SUZUKI – Ph: 8884446502, Old Airport Road (Domlur): ARYAN SUZUKI, Ph: 9739969996, Whitefield: ARYAN SUZUKI, Ph: 9739969995, K. R. Puram: ARYAN SUZUKI, Ph: 9739949998, Mahadevpura: ARYAN SUZUKI, Ph: 9739929996, Hoodi: ARYAN SUZUKI – Bike Zone, Ph: 08047470000/8073783992, KH Road: AEROLEX (AVANISH) SUZUKI -9591931113, KH Road: AVANISH SUZUKI BIKEZONE-9606092067, Vijaynagar: AVANISH SUZUKI, Ph: 8971900111, 8197800222, Kengeri, AVANISH SUZUKI, Ph: 8197900111/ 7204048604, Nagarbhavi: AVANISH SUZUKI, Ph: 9606988444/7204048604, Banaswadi: BHOJANNA SUZUKI, Ph: 9148656565, Bellary Road: MEGHAVATH SUZUKI, Ph: 9632899459, M G Road: MEGHDOOTH SUZUKI, Ph: 9513533384, HBR Layout: MEGHDOOTH SUZUKI:9513533374 Hosur Road: NINESTAR SUZUKI, Ph: 9019023333, HSR Layout: NINESTAR SUZUKI, Ph: 9019023333, Bannerghatta Road: NINESTAR SUZUKI, Ph: 9019023333, Koramangala: ORION SUZUKI, Ph: 080-25524747,9535081055, JP NAGAR: ORION SUZUKI, Ph: 96060 37441 Rajaji Nagar: SAPTAGIRI SUZUKI, Ph: 7066016611/ 9743200054, Mathikere: SAPTAGIRI SUZUKI, Ph: 9620152020,Basaweshwara Nagar: SAPTAGIRI SUZUKI, Ph: 8722037107, Sheshadripuram: SAPTAGIRI SUZUKI, Ph: 9741921526, Kottigepalya: SAPTAGIRI SUZUKI, Ph: 7899739267, Peenya, Tumkur Road: SAPTAGIRI SUZUKI, Ph: 9986466659, Nelamangala: SAPTAGIRI SUZUKI, Ph: 9591892296, Vasanthnagar: VALUE SUZUKI, Ph: 9845906084/9108258679, Yelahanka: Honnasiri Suzuki, Ph: 9945004047, Tumkur: Pramod Suzuki, Ph: 8050202244, 8050202266, 9591118539. Smayanashree Suzuki, Ph: 8088576806/8694989948, Tiptur: Smayanashree Suzuki, Ph:9900596996, Hoskote: Daivik Suzuki, Ph: 7899366585,9591208777,9449046049, Chikballapur: Bhawnit Suzuki, Ph: 8088137199, Ramanagara: Shreekar Suzuki, Ph: 8970070072 / 9686625513, Kolar: Nandi Suzuki, Ph: 9902672589 / 9353486342

ಬಿಬಿಎಂಪಿ: 'ಆರ್ ಕೋಡ್ 130' ಬಳಸಿ 'ಎ' ಖಾತಾ ನೀಡಿರುವುದು ಪತ್ತೆ • ಖಾತಾ ರದ್ದಾಗಿಲ್ಲ

ಅಕ್ರಮ 'ಎ' ಖಾತಾ: ವರ್ಷವಾದರೂ ಕ್ರಮವಿಲ್ಲ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 45 ಸಾವಿರಕ್ಕೂ ಹೆಚ್ಚು ಆಸ್ತಿಗಳಿಗೆ ಅಕ್ರಮವಾಗಿ 'ಎ ಖಾತಾ' ನೀಡಿರುವ ಪ್ರಕರಣಗಳನ್ನು ಪತ್ತೆಹಚ್ಚಿ ಒಂದೂವರೆ ವರ್ಷವಾದರೂ ಎಂಟೂ ವಲಯಗಳ ಆಯುಕ್ತರು ಯಾರ ವಿರುದ್ಧವೂ ಶಿಸ್ತು ಕ್ರಮ ಕೈಗೊಂಡಿಲ್ಲ.

ಬಿ ಖಾತಾಗೆ ಅರ್ಹವಾಗಿರುವ ಆಸ್ತಿಗಳ ಮಾಲೀಕರಿಂದ ಅಕ್ರಮವಾಗಿ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು, 'ಐಎಫ್‌ಎಂಎಸ್' ತಂತ್ರಾಂಶದ 'ಆರ್ ಕೋಡ್ 130' ಬಳಸಿ 'ಎ' ಖಾತಾ ನೀಡಿರುವುದು ತನಿಖೆಯಲ್ಲಿ ಪತ್ತೆಯಾಗಿತ್ತು.

ಪ್ರಕರಣದ ಕುರಿತು ತನಿಖೆ ನಡೆಸಿದ್ದ ಅಂದಿನ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ, '2015ರಿಂದ 2023ರವರೆಗೆ ಒಟ್ಟು 45,133 ಪ್ರಕರಣಗಳಲ್ಲಿ ₹898.70 ಕೋಟಿ ಪಾವತಿಸಿಕೊಳ್ಳಲಾಗಿದೆ. ಇವುಗಳಲ್ಲಿ ಬಹುತೇಕ ಪ್ರಕರಣಗಳು ಅಕ್ರಮ' ಎಂದು 2023ರ ಜುಲೈನಲ್ಲಿ ವರದಿ ನೀಡಿದ್ದರು.

ಸರ್ಕಾರದ ಆದೇಶದಂತೆ, ಕೊಳೆಗೇರಿ ಸೇರಿದಂತೆ ಕೆಲವು ಪ್ರದೇಶಗಳ ಆಸ್ತಿಗಳಿಗೆ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು ಎ ಖಾತಾ ನೀಡಲು 'ಆರ್ ಕೋಡ್-130' ಬಳಸಲಾಗುತ್ತದೆ. ಈ ಕೋಡ್ ಅನ್ನು ದುರ್ಬಳಕೆ ಮಾಡಿಕೊಂಡಿರುವ ಎಆರ್‌ಒಗಳು, ಬಿ ಖಾತಾ ಹೊಂದಬೇಕಿರುವ ಆಸ್ತಿಗಳಿಗೆ ಎ ಖಾತಾ ನೀಡಿದ್ದಾರೆ. ಭೂ ಪರಿವರ್ತನೆಯಾಗದ ನಿವೇಶನಗಳಿಗೆ ಅಭಿವೃದ್ಧಿ ಶುಲ್ಕ ಪಾವತಿಸಿಕೊಳ್ಳಲು ಅವಕಾಶವಿಲ್ಲ. ಅಂತಹ ಆಸ್ತಿಗಳೆಲ್ಲವೂ ಬಿ ಖಾತಾ ಅಥವಾ ವಹಿಯಲ್ಲಿ ದಾಖಲಾಗಿರುತ್ತವೆ. ಇಂತಹ ಪ್ರಕರಣಗಳಲ್ಲೂ ಎ ಖಾತಾ ನೀಡಿ ಅಕ್ರಮ ಎಸಗಲಾಗಿದೆ. ಅಂತಹ ಎಲ್ಲ ಅಧಿಕಾರಿಗಳ ವಿರುದ್ಧ ವಲಯ ಆಯುಕ್ತರು ಕ್ರಮಕೈಗೊಂಡು ವರದಿ ಸಲ್ಲಿಸಬೇಕು ಎಂದು ಕಳೆದ ವರ್ಷವೇ ಸೂಚಿಸಲಾಗಿತ್ತು.

'ಅಕ್ರಮವಾಗಿ ಎ ಖಾತಾ ಪಡೆಯಲು ಅಭಿವೃದ್ಧಿ ಶುಲ್ಕವನ್ನು ಪಾವತಿಸಿರುವ ನಿವೇಶನಗಳ ಮಾಲೀಕರು ತಪ್ಪೊಪ್ಪಿಗೆ ಅರ್ಜಿ ನೀಡಿದರೆ ಶುಲ್ಕವನ್ನು ಹಿಂದಿರುಗಿಸಲಾಗುತ್ತದೆ. ಇಲ್ಲದಿದ್ದರೆ ಆ ಮೊತ್ತ ಪಾಲಿಕೆಯಲ್ಲೇ ಉಳಿಯುತ್ತದೆ. ಅಕ್ರಮ ಎ ಖಾತಾವನ್ನು ರದ್ದುಪಡಿಸಿ, ಆ ಎಲ್ಲ ಆಸ್ತಿಗಳನ್ನು ಬಿ ಖಾತಾ ಪಟ್ಟಿಗೆ ವರ್ಗಾಯಿಸಲಾಗುತ್ತದೆ' ಎಂದೂ ಹೇಳಲಾಗಿತ್ತು.

ಕ್ರಮ ಕೈಗೊಳ್ಳಲು ವಲಯ ಆಯುಕ್ತರಿಗೆ ಸೂಚನೆ ನೀಡಿದ ನಂತರ ಜಯರಾಂ ರಾಯಪುರ ವರ್ಗಾವಣೆಯಾದರು. ನಂತರ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ನೇತೃತ್ವದಲ್ಲಿ ಸಮಿತಿ ರಚಿಸಿ, ಈ ಪ್ರಕರಣಗಳ ಬಗ್ಗೆ ಕ್ರಮ ಕೈಗೊಳ್ಳಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದ್ದರು. ಇಷ್ಟಾದರೂ ಈವರೆಗೆ ಯಾವುದೇ ಕ್ರಮವಾಗಿಲ್ಲ.

ಅತಿ ಹೆಚ್ಚು ಪ್ರಕರಣಗಳು

ಎಆರ್‌ಒ	ಪ್ರಕರಣ	ಎಆರ್‌ಒ	ಪ್ರಕರಣ
ಹೂಡಿ	3,565	ಯಲಹಂಕ ಸ್ಯಾಟಲೈಟ್‌ಟೌನ್	1,625
ಮಾರತ್‌ಹಳ್ಳಿ	3,320	ಕೆಂಗೇರಿ	1,621
ವೈಟ್‌ಫೀಲ್ಡ್	2,574	ಹೊರಮಾವು	1,467
ಉತ್ತರಹಳ್ಳಿ	2,371	ಥಣಿಸಂದ್ರ	1,424
ಚಂದ್ರಾಲೇಔಟ್	2,236	ಗೋವಿಂದರಾಜನಗರ	1,234
ಯಲಹಂಕ	2,099	ಎಚ್‌ಬಿಆರ್ ಲೇಔಟ್	1,206
ಬೇಗೂರು	1,927	ಮಾರುತಿಸೇವಾ ನಗರ	1,206
ದಾಸರಹಳ್ಳಿ	1,798	ಅಂಜನಾಪುರ	1,007
ಶೆಟ್ಟಿಹಳ್ಳಿ	1,673		

ವಲಯ	ಪ್ರಕರಣ	ಸಂಗ್ರಹ ಮೊತ್ತ (₹ ಕೋಟಿಗಳಲ್ಲಿ)
ಬೊಮ್ಮನಹಳ್ಳಿ	6,413	129.31
ದಾಸರಹಳ್ಳಿ	3,927	31.28
ಪೂರ್ವ	6,136	21.46
ಮಹದೇವಪುರ	12,334	427.69
ಆರ್.ಆರ್. ನಗರ	3,422	92.17
ದಕ್ಷಿಣ	2,157	8.13
ಪಶ್ಚಿಮ	4,623	8.43
ಯಲಹಂಕ	6,121	180.22
ಒಟ್ಟು	45,133	898.70

ಮುಖ್ಯಾಂಶಗಳು

- 2023ರ ಜುಲೈನಲ್ಲಿ ಅಕ್ರಮ ಪತ್ತೆ
- ಕ್ರಮ ಕೈಗೊಳ್ಳಲು ವಲಯ ಆಯುಕ್ತರಿಗೆ ಸೂಚನೆ
- ಹೊಸ ಸಮಿತಿ ರಚನೆಯಾದರೂ ಕ್ರಮವಿಲ್ಲ

'ಮತ್ತೊಮ್ಮೆ ಸೂಚನೆ'

ಮುನೀಶ್

'ಅಕ್ರಮ 'ಎ' ಖಾತಾಗಳ ಬಗ್ಗೆ ಈಗಾಗಲೇ ತನಿಖೆ ನಡೆದಿದೆ. ಅಕ್ರಮದಲ್ಲಿ ಯಾರೆಲ್ಲ ಭಾಗಿ ಆಗಿದ್ದಾರೆ ಎಂಬುದರ ಕುರಿತು ಹಣಕಾಸು ವಿಭಾಗದಲ್ಲಿ ಹಿಂದೆ ಇದ್ದ ವಿಶೇಷ ಆಯುಕ್ತ ಜಯರಾಂ ವರದಿ ನೀಡಿದ್ದಾರೆ. ಅದರಂತೆ ವಲಯ ಆಯುಕ್ತರು ಕ್ರಮ ಕೈಗೊಳ್ಳಬೇಕು. ತನಿಖೆಗೆ ಹೊಸ ಸಮಿತಿ ರಚನೆ ಆಗಿದ್ದರೂ ಹೊಸ ಕ್ರಮ ತೆಗೆದುಕೊಳ್ಳುವಂತಹದ್ದೇನೂ ಇಲ್ಲ. ಆದ್ದರಿಂದ ಹಿಂದಿನ ಆದೇಶದಂತೆಯೇ ವಲಯ ಆಯುಕ್ತರು ಶಿಸ್ತು ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಮತ್ತೊಮ್ಮೆ ಅವರಿಗೆ ನೆನಪಿಸಲಾಗುತ್ತದೆ' ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸುದ್ದಿ 2 ನಿಮಿಷ

ಜಗದೀಶ್ ಬೆಂಗಳೂರು ನಗರ ಡಿ.ಸಿ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆ ಆಯುಕ್ತರಾಗಿದ್ದ ಜಿ. ಜಗದೀಶ್ ಅವರನ್ನು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಕೆ.ಎ. ದಯಾನಂದ ಅವರನ್ನು ನೋಂದಣಿ ಮಹಾಪರಿವೀಕ್ಷಕ ಮತ್ತು ಮುದ್ರಾಂಕಗಳ ಆಯುಕ್ತರಾಗಿ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಶನಿವಾರ ಆದೇಶ ಹೊರಡಿಸಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಆಯುಕ್ತ ಕೆ. ಶ್ರೀನಿವಾಸ್ ಅವರಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತರ ಹುದ್ದೆಯ ಹೆಚ್ಚುವರಿ ಹೊಣೆ ನೀಡಲಾಗಿದೆ.

ಜಿಲ್ಲಾಧಿಕಾರಿಯಾಗಿದ್ದ ದಯಾನಂದ ಅವರು ನೋಂದಣಿ ಮಹಾಪರಿವೀಕ್ಷಕ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ಹೊಂದಿದ್ದರು.

29ಕ್ಕೆ ನೀರು – ನೈರ್ಮಲ್ಯ ಶೃಂಗಸಭೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಹಾಗೂ ಮಾಹಿತಿ ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ ಅ. 29ರಂದು ಬೆಂಗಳೂರಿನಲ್ಲಿ 'ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸುಸ್ಥಿರತೆ'ಯ ಶೃಂಗಸಭೆ ಆಯೋಜಿಸಲಾಗುತ್ತಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಗ್ರಾಮೀಣ ಭಾಗ ಎದುರಿಸುತ್ತಿರುವ ಕುಡಿಯುವ ನೀರು, ನೈರ್ಮಲ್ಯದ ಸಮಸ್ಯೆಗೆ ಪರಿಹಾರ ಒದಗಿಸುವ ವಿನೂತನ ಆಲೋಚನೆಗಳಿಗೆ ಈ ಶೃಂಗಸಭೆ ವೇದಿಕೆ ಆಗಲಿದೆ. ಹೊಸ ತಂತ್ರಜ್ಞಾನ ಬಳಸಿಕೊಂಡು ತ್ಯಾಜ್ಯ ನಿರ್ವಹಣೆ, ನೀರಿನ ಮಾಲಿನ್ಯ ಪತ್ತೆಹಚ್ಚುವುದು, ಕೈಗಾರಿಕಾ ಅಭಿವೃದ್ಧಿಗೆ ಉದಯೋನ್ಮುಖ ತಂತ್ರಜ್ಞಾನಗಳ ಮೌಲ್ಯಮಾಪನ ಮಾಡುವುದು ಸಭೆಯ ಮುಖ್ಯ ಕಾರ್ಯಸೂಚಿ ಎಂದು ಮಾಹಿತಿ ನೀಡಿದ್ದಾರೆ.

₹25 ಲಕ್ಷ ಬಹುಮಾನ: ಗ್ರಾಮೀಣ ಭಾಗದ ನೀರು ಮತ್ತು ನೈರ್ಮಲ್ಯದ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ವಿನೂತನ ಆಲೋಚನೆಗಳನ್ನು ಪ್ರಸ್ತುತಪಡಿಸಲು ಅರ್ಜಿ ಆಹ್ವಾನಿಸಲಾಗಿದೆ.

ನವೋದ್ಯಮಗಳು ಅರ್ಜಿ ಸಲ್ಲಿಸಬಹುದು. ಶೃಂಗಸಭೆಯಲ್ಲಿ ತಮ್ಮ ಆಲೋಚನೆಗಳನ್ನು ಪ್ರಸ್ತುತ ಪಡಿಸುವರಿಗೆ ವಿಶೇಷ ಅಧಿವೇಶನ ನಡೆಸಲಾಗುವುದು, ಅಲ್ಲಿ ಆಯ್ದ ನವೋದ್ಯಮ ವಿಜೇತರಿಗೆ ₹25 ಲಕ್ಷ ಬಹುಮಾನ ನೀಡಲಾಗುವುದು. ಆಸಕ್ತರು ತಮ್ಮ ಪ್ರಸ್ತಾವನೆಗಳ ಪಿಚ್‌ಡೆಕ್ ಪ್ರಸ್ತಾವನೆಯೊಂದಿಗೆ ಅರ್ಜಿ ಸಲ್ಲಿಸಬಹುದು ಎಂದು ಸಚಿವ ಪ್ರಿಯಾಂಕ್ ತಿಳಿಸಿದ್ದಾರೆ.

ಎಳನೀರು, ತೆಂಗಿನಕಾಯಿ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ತೆಂಗಿನಕಾಯಿ ಮತ್ತು ಎಳನೀರು ಪೂರೈಕೆಯಲ್ಲಿನ ಕೊರತೆಯಿಂದಾಗಿ ದರ ಹೆಚ್ಚಳವಾಗಿದೆ. ಒಂದು ತೆಂಗಿನ ಕಾಯಿ ₹50ರಂತೆ ಮಾರಾಟವಾಗುತ್ತಿದ್ದರೆ, ಎಳನೀರು ಒಂದರ ದರ ₹60ಕ್ಕೆ ತಲುಪಿದೆ.

'ಪ್ರತಿವರ್ಷ ಮಳೆಗಾಲದಲ್ಲಿ ಒಂದು ಎಳನೀರಿಗೆ ₹30 ರಿಂದ ₹40ರಂತೆ ಮಾರಾಟವಾಗುತ್ತಿತ್ತು. ಆದರೆ ಈ ವರ್ಷ ಬೇಸಿಗೆಯಿಂದ ಮಳೆಗಾಲದವರೆಗೂ ಒಂದೇ ಬೆಲೆ ಇದೆ. ತೆಂಗಿನಕಾಯಿ ₹20ರಿಂದ 25ರಂತೆ ಮಾರಾಟವಾಗುತ್ತಿತ್ತು. ಆದರೆ, ಈಗ ₹45 ರಿಂದ ₹50ರಂತೆ ಮಾರಾಟ ಆಗುತ್ತಿದೆ. ದೀಪಾವಳಿವರೆಗೂ ತೆಂಗಿನಕಾಯಿ ಬೆಲೆ ಏರುಮುಖವಾಗಿರಲಿದೆ' ಎಂದು ವ್ಯಾಪಾರಿಗಳು ತಿಳಿಸಿದರು.

ಆರೋಗ್ಯಕರವಾದ ಎಳನೀರಿಗೆ 'ಸಿಲಿಕಾನ್ ಸಿಟಿ' ಬೆಂಗಳೂರಿನಲ್ಲಿ ಹೆಚ್ಚು ಬೇಡಿಕೆ ಇದ್ದು, ಎಲ್ಲ ಋತುವಿನಲ್ಲೂ ದರ ಏರಿಕೆಯಾಗುತ್ತದೆ. ಹಿಂದಿನ ಬೇಸಿಗೆಯಲ್ಲಿ ಬಿಸಿಲಿನ ಝಳ ಹೆಚ್ಚಾಗಿತ್ತು. ಇದರಿಂದ ತೆಂಗಿನ ಇಳುವರಿ ಕುಂಠಿತಗೊಂಡಿದೆ. ಬೆಂಗಳೂರು ನಗರಕ್ಕೆ ಎಳನೀರು ಕಡಿಮೆ ಪ್ರಮಾಣದಲ್ಲಿ ಪೂರೈಕೆಯಾಗುತ್ತಿರುವ ಕಾರಣ ದರ ಹೆಚ್ಚಳವಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

'ಬೆಂಗಳೂರು ನಗರಕ್ಕೆ ಸಾಮಾನ್ಯವಾಗಿ ಚಾಮರಾಜನಗರ, ಮಂಡ್ಯ, ಹಾಸನ ಮತ್ತು ತುಮಕೂರು ಭಾಗದಿಂದ ಎಳನೀರು ಪೂರೈಕೆಯಾಗುತ್ತಿತ್ತು. ಆದರೆ, ಸತತ ಎರಡು ವರ್ಷಗಳ ಮಳೆ ಕೊರತೆಯಿಂದ ಅಂತರ್ಜಲ ಮಟ್ಟ ಕುಸಿದಿದ್ದು, ಹಲವು ಜಮೀನುಗಳಲ್ಲಿ ಕೊಳವೆ ಬಾವಿಗಳಲ್ಲಿಯೂ ನೀರು ಬಾರದ ಸ್ಥಿತಿ ನಿರ್ಮಾಣವಾಗಿದೆ. ನೀರಿನ ಕೊರತೆಯಿಂದಾಗಿ ಇಳುವರಿ ಕಡಿಮೆಯಾಗಿದೆ. ಹಾಗಾಗಿ, ಮೊದಲಿನಷ್ಟು ಎಳನೀರು ಪೂರೈಕೆಯಾಗುತ್ತಿಲ್ಲ' ಎಂದು ಎಳನೀರು ವ್ಯಾಪಾರಿ ಶಿವ ಹೇಳಿದರು.

'ಮದ್ದೂರು ಎಪಿಎಂಸಿಯ ಎಳನೀರು ಮಹಾರಾಷ್ಟ್ರ, ಗುಜರಾತ್ ಸೇರಿದಂತೆ ಇತರೆ ರಾಜ್ಯಗಳಿಗೆ ಪೂರೈಕೆಯಾಗುತ್ತಿದೆ. ನಗರದ ಎಳನೀರು ಪೂರೈಕೆದಾರರೊಂದಿಗೆ ಒಳ್ಳೆಯ ಸಂಪರ್ಕ ಇರುವ ಮಾರಾಟಗಾರರಿಗಷ್ಟೇ ರೈತರು ಎಳನೀರು ಪೂರೈಸುತ್ತಿದ್ದಾರೆ' ಎಂದು ಅವರು ವಿವರಿಸಿದರು.

ಕಾವೇರಿ 5ನೇ ಹಂತ; 16ಕ್ಕೆ ಚಾಲನೆ

ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವ್ಯಾಪ್ತಿಯ 110 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಬಹು ನಿರೀಕ್ಷಿತ ಕಾವೇರಿ 5ನೇ ಹಂತದ ಯೋಜನೆಯನ್ನು ಇದೇ 16ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಲೋಕಾರ್ಪಣೆ ಮಾಡಲಿದ್ದಾರೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ತೊರೆಕಾಡನಹಳ್ಳಿಯ(ಟಿ.ಕೆ.ಹಳ್ಳಿ) ಬೆಂಗಳೂರು ಜಲಮಂಡಳಿ ಕಚೇರಿ ಆವರಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಯೋಜನೆಯನ್ನು ಲೋಕಾರ್ಪಣೆ ಮಾಡಲಾಗುತ್ತಿದೆ.

ಮಳವಳ್ಳಿ ಕ್ಷೇತ್ರದ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಚಿವರು, ಸಂಸದರು ಮತ್ತು ಶಾಸಕರು ಸೇರಿದಂತೆ ಎಲ್ಲ ಚುನಾಯಿತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ಜಲಮಂಡಳಿ ಅಧ್ಯಕ್ಷ ವಿ.ರಾಮ್‌ಪ್ರಸಾತ್ ಮನೋಹರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಯೋಜನೆಗೆ ಆರ್ಥಿಕ ಸಹಕಾರ ನೀಡಿರುವ ಜೈಕಾ ಇಂಡಿಯಾ ಕಚೇರಿಯ ಮುಖ್ಯ ಪ್ರತಿನಿಧಿ ಟೇಕುಚಿ ಟಕುರೋ, ಭಾರತದಲ್ಲಿ ಜಪಾನ್‌ನ ಕಾನ್ಸಲ್ ಜನರಲ್ ಟ್ಸುಟೋಮು, ಭಾರತದಲ್ಲಿ ಜಪಾನ್ ರಾಯಭಾರ ಕಚೇರಿಯ ಆರ್ಥಿಕ ಸಚಿವ(ಆರ್ಥಿಕ ಮತ್ತು ಅಭಿವೃದ್ಧಿ) ಹೊಕುಗೋ ಕ್ಯೋಕು ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

110 ನೀರು ಪೂರೈಕೆಯಾಗುವ ಹಳ್ಳಿಗಳು	4 ಲಕ್ಷ ನೀರಿನ ಸಂಪರ್ಕದ ಗುರಿ	₹4,336 ಕೋಟಿ ಯೋಜನೆಯ ವೆಚ್ಚ	2014 ಯೋಜನೆಯ ಆರಂಭ
770 ಎಂಎಲ್‌ಡಿ ನೀರು ಪೂರೈಕೆ ಪ್ರಮಾಣ	1,450 ಎಂಎಲ್‌ಡಿ ಸದ್ಯ ನಗರಕ್ಕೆ ನೀರು ಪೂರೈಕೆಯಾಗುತ್ತಿರುವ ಪ್ರಮಾಣ		

ಸಿ.ಎಂ.ಗೆ ಆಹ್ವಾನ

ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅವರು ಮಂಗಳವಾರ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರಿಗೆ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ನೀಡಿದರು.

ಆಹ್ವಾನ ಪತ್ರಿಕೆ ಸ್ವೀಕರಿಸಿ ಮಾತನಾಡಿದ ಶಿವಕುಮಾರ್ ಅವರು, 'ಈ ಯೋಜನೆಯಿಂದ 110 ಹಳ್ಳಿಗಳ ನಿವಾಸಿಗಳಿಗೆ ಹಾಗೂ ನಗರದ ಎಲ್ಲ ನಿವಾಸಿಗಳಿಗೆ ಸಮರ್ಪಕ ನೀರು ಸರಬರಾಜಾಗಲಿದೆ' ಎಂದು ತಿಳಿಸಿದರು.

ದಸರಾ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾವಿದೆ ರೂಪಶ್ರೀ ಮಧುಸೂದನ್ ಮತ್ತು ತಂಡದವರು ನೃತ್ಯ ಪ್ರದರ್ಶಿಸಿದರು

ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ
ಭಾರತ ಸರ್ಕಾರ

"ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು ನೈಸರ್ಗಿಕ ವಿಕೋಪಗಳಿಂದ ಉಂಟಾಗುವ ನಷ್ಟದಿಂದ ನಮ್ಮ ಪರಿಶ್ರಮಿ ರೈತರ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಅತ್ಯಂತ ಪರಿಣಾಮಕಾರಿ ಎಂದು ದೃಢಪಟ್ಟಿದೆ. ಕೋಟಿಗಟ್ಟಲೆ ರೈತರು ಇದರ ಲಾಭ ಪಡೆಯುತ್ತಿದ್ದಾರೆ."
–ನರೇಂದ್ರ ಮೋದಿ, ಪ್ರಧಾನಮಂತ್ರಿ





ಪಾಲಿಸಿಯನ್ನು ಕೈಯಲ್ಲಿ ಪಡೆದ ರೈತ,
ಬೆಳೆಯ ಸುರಕ್ಷೆಯ ವರದಾನವನ್ನು ಪಡೆದಂತೆ

ಬೆಳೆ ವಿಮೆ ಮಾಡಿಸಿಕೊಳ್ಳಿ, ವಿಮೆ ಭದ್ರತೆಯನ್ನು ಪಡೆದುಕೊಳ್ಳಿ

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ ಪ್ರಯೋಜನಗಳು
- ಇಲ್ಲಿಯವರೆಗೆ 19.67 ಕೋಟಿ ರೈತರು ಫಸಲ್ ಬಿಮಾ ಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ
- ₹1.65 ಲಕ್ಷ ಕೋಟಿ ಮೊತ್ತದ ಪರಿಹಾರವನ್ನು ರೈತರಿಗೆ ಪಾವತಿಸಲಾಗಿದೆ
- 70 ಕೋಟಿಗೂ ಹೆಚ್ಚು ರೈತರ ಅರ್ಜಿಗಳನ್ನು ಸ್ವೀಕರಿಸಲಾಗಿದೆ

ರಾಷ್ಟ್ರವ್ಯಾಪಿ ಸಹಾಯವಾಣಿ 14447

ನನ್ನ ಪಾಲಿಸಿ ನನ್ನ ಕೈಯಲ್ಲಿ
ಮಹಾ ಅಭಿಯಾನ
1-31 ಅಕ್ಟೋಬರ್ 2024

ವಾಟ್ಸ್‌ಆ್ಯಪ್ ಮೂಲಕ ನಮ್ಮನ್ನು ಸಂಪರ್ಕಿಸಿ

ನಿಮ್ಮ ಗ್ರಾಮದಲ್ಲಿ ಆಯೋಜಿಸಿರುವ ಫಸಲ್ ಬಿಮಾ ಪಾಠಶಾಲೆ ಮೂಲಕ ಈ ವಿಷಯಗಳ ಕುರಿತು ಮಾಹಿತಿ ಪಡೆಯಿರಿ:
- ವಿಮಾ ಪಾಲಿಸಿಗಳು, ಸರ್ಕಾರಿ ಪಾಲಿಸಿಗಳು, ಭೂ ದಾಖಲೆಗಳು ಮತ್ತು ಪರಿಹಾರಮೊತ್ತ ಮತ್ತು ಕುಂದುಕೊರತೆ ಪರಿಹಾರ
- ರೈತರ ತರಬೇತಿಗಾಗಿ ಫಸಲ್ ಬಿಮಾ ಪಾಠಶಾಲೆ

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ

ವಿಮಾ ಪಾಲುದಾರರು: AIC, Bajaj Allianz, Chola MS, Future Generali, HDFC ERGO, ICICI Lombard, IFFCO-TOKIO, Kshema, Oriental Insurance, Reliance, General Insurance, SBI General, Universal Sompo General Insurance

ಯೋಜನೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಸಾಮಾನ್ಯ ಸೇವಾ ಕೇಂದ್ರ | ಬೆಳೆ ವಿಮೆ ಆ್ಯಪ್ https://play.google.com | ಅಂಚೆಕಚೇರಿ | ಬ್ಯಾಂಕ್ ಶಾಖೆ | @PMFBY

ಯೋಜನೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ QR ಕೋಡ್ ಅನ್ನು ಸ್ಕ್ಯಾನ್ ಮಾಡಿ

ಪಿಯು ಕ್ರೋಢೀಕೃತ ಫಲಿತಾಂಶ ಪ್ರಕಟ

ಬೆಂಗಳೂರು: ದ್ವಿತೀಯ ಪಿಯು ಮೂರು ಪರೀಕ್ಷೆಗಳ ಕ್ರೋಢೀಕೃತ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಪ್ರಕಟಿಸಿದೆ.

ವಿಜ್ಞಾನ ವಿಷಯದಲ್ಲಿ ಶೇಷಾದ್ರಿಪುರಂ ಸಂಯುಕ್ತ ಪಿಯು ಕಾಲೇಜಿನ ಪ್ರೀತಂ 599, ಧಾರವಾಡದ ವಿದ್ಯಾನಿಕೇತನ ವಿಜ್ಞಾನ ಕಾಲೇಜಿನ ಎ. ವಿದ್ಯಾಲಕ್ಷ್ಮಿ 598 ಅಂಕ ಪಡೆದಿದ್ದಾರೆ. 11 ಮಂದಿ 597 ಅಂಕ ಗಳಿಸಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಉಡುಪಿಯ ಕುಕ್ಕುಂದೂರಿನ ಕ್ರಿಯೇಟಿವ್ ಕಾಲೇಜಿನ ಸಾನ್ವಿರಾವ್ 598, ತುಮಕೂರಿನ ವಿದ್ಯಾನಿ ಸ್ವತಂತ್ರ ಪಿಯು ಕಾಲೇಜಿನ ಜ್ಞಾನವಿ ರಾವ್ 597 ಅಂಕ ಪಡೆದಿದ್ದಾರೆ. ಎಂಟು ವಿದ್ಯಾರ್ಥಿಗಳು 596 ಅಂಕ ಗಳಿಸಿದ್ದಾರೆ. ಕಲಾ ವಿಭಾಗದಲ್ಲಿ ವಿಜಯಪುರದ ಎಸ್.ಎಸ್. ಕಾಲೇಜಿನ ವೇದಾಂತ್, ಬೆಂಗಳೂರಿನ ಎನ್‌ಎಂಕೆಆರ್‌ವಿ ಕಾಲೇಜಿನ ಡಿ. ಮೇಧಾ ಮತ್ತು ಕೂಡ್ಲಿಗಿಯ ಇಂದು ಸ್ವತಂತ್ರ ಪಿಯು ಕಾಲೇಜಿನ ಬಿ.ವಿ. ಕವಿತಾ ತಲಾ 596 ಅಂಕ ಪಡೆದಿದ್ದಾರೆ.

ರೈಲು ನಿಲ್ದಾಣಗಳಲ್ಲಿ ಊಟದ ವ್ಯವಸ್ಥೆ

ನವದೆಹಲಿ (ಪಿಟಿಐ): ನವರಾತ್ರಿ ಹಬ್ಬದ ಋತುವಿನಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ರೈಲ್ವೆ ಇಲಾಖೆಯು 150ಕ್ಕೂ ಹೆಚ್ಚು ನಿಲ್ದಾಣಗಳಲ್ಲಿ 'ವಿಶೇಷ ಊಟ'ದ ಮಾರಾಟಕ್ಕೆ ವ್ಯವಸ್ಥೆ ಮಾಡಿದೆ ಎಂದು ಹೇಳಿಕೆ ತಿಳಿಸಿದೆ.

ಪ್ರಯಾಣಿಕರು ಮೊಬೈಲ್ ಆ್ಯಪ್, ವೆಬ್‌ಸೈಟ್ ಮೂಲಕವೂ ಆರ್ಡರ್ ಮಾಡಬಹುದು ಎಂದು ಹೇಳಿಕೆ ತಿಳಿಸಿದೆ.

ರಾಜ್ಯದ ಬೆಂಗಳೂರು ಕಂಟೋನ್ಮೆಂಟ್, ಮಂಗಳೂರು ಸೆಂಟ್ರಲ್ ಸ್ಟೇಷನ್ ಸೇರಿ ವಿವಿಧ 150 ನಿಲ್ದಾಣಗಳಲ್ಲಿ ವಿಶೇಷ ಊಟ ಲಭ್ಯವಿರಲಿದೆ.

ಗ್ರಾಮ ಪಂಚಾಯಿತಿ ನೌಕರರ ಮುಷ್ಕರ ಮುಂದುವರಿಕೆ

ಕ್ರಮಕ್ಕೆ ಆಯುಕ್ತರ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು ಮತ್ತು ನೌಕರರ ಮುಷ್ಕರ ರಾಜ್ಯದಾದ್ಯಂತ ಮುಂದುವರಿದಿದೆ. ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಂಗಳವಾರ ಪತ್ರವೊಂದನ್ನು ರವಾನಿಸಿರುವ ಪಂಚಾಯತ್ ರಾಜ್ ಇಲಾಖೆ ಆಯುಕ್ತರು, ಮುಷ್ಕರ ಮುಂದುವರಿಸುವ ಅಧಿಕಾರಿಗಳು, ನೌಕರರ ವಿರುದ್ಧ ಕ್ರಮ ಜರುಗಿಸುವಂತೆ ಸೂಚಿಸಿದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು, ನೌಕರರು ಹಾಗೂ ಚುನಾಯಿತ ಸದಸ್ಯರು ಜೊತೆಯಾಗಿ ಶುಕ್ರವಾರದಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಮೊದಲ ಎರಡು ದಿನ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮುಷ್ಕರ ನಡೆಸಲಾಗಿತ್ತು. ಸೋಮವಾರದಿಂದ ಜಿಲ್ಲಾ ಕೇಂದ್ರಗಳಲ್ಲಿ ಮುಷ್ಕರ ಮುಂದುವರಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ಎಲ್ಲ ವೃಂದ ಸಂಘಗಳು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟವು ಅಕ್ಟೋಬರ್ 4ರಿಂದ ಮುಷ್ಕರ ನಡೆಸುವುದಾಗಿ ಪ್ರಕಟಿಸಿತ್ತು. ಸೆಪ್ಟೆಂಬರ್ 30ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಸಚಿವರ ಅಧ್ಯಕ್ಷತೆಯಲ್ಲಿ ಎರಡು ಪ್ರತ್ಯೇಕ ಸಭೆಗಳನ್ನು ಆಯೋಜಿಸಲಾಗಿತ್ತು. ಆದರೆ, ಪ್ರತಿಭಟನೆಯ ನೇತೃತ್ವ ವಹಿಸಿದ್ದ ಸಂಘಟನೆಯ ಪ್ರತಿನಿಧಿಗಳು ಸಭೆಗೆ ಹಾಜರಾಗಿರಲಿಲ್ಲ ಎಂದು ಪಂಚಾಯತ್ ರಾಜ್ ಆಯುಕ್ತೆ ಅರುಂಧತಿ ಚಂದ್ರಶೇಖರ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಅಕ್ಟೋಬರ್ 1ರಂದು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರೆದ ಸಭೆಗೂ ಹೋರಾಟದ ನೇತೃತ್ವ ವಹಿಸಿದ್ದವರು ಬರಲಿಲ್ಲ. ಅ.4ರಂದು ಹೋರಾಟ ನಡೆಯುತ್ತಿದ್ದ ಸ್ವಾತಂತ್ರ್ಯ ಉದ್ಯಾನಕ್ಕೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರೇ ಭೇಟಿನೀಡಿ ಮನವಿ ಸ್ವೀಕರಿಸಿದ್ದರು. ಆ ದಿನ ಸಂಜೆ ಮುಷ್ಕರ ನಿರತರ ಪ್ರತಿನಿಧಿಗಳ ಜೊತೆ ಸಭೆಯನ್ನೂ ನಡೆಸಿದ್ದರು ಎಂದು ತಿಳಿಸಿದ್ದಾರೆ.

'ಪಂಚಾಯಿತಿಗಳ ಅಧಿಕಾರಿಗಳು, ನೌಕರರು ಮತ್ತು ಸದಸ್ಯರ ಬೇಡಿಕೆಗಳ ಕುರಿತು ಚರ್ಚಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಅ.10ರಂದು ಸಭೆ ನಿಗದಿಯಾಗಿದೆ. ಆದರೂ, ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು ಮತ್ತು ನೌಕರರು ಕರ್ತವ್ಯಕ್ಕೆ ಹಾಜರಾಗದೇ ಇರುವುದು ಕಂಡುಬಂದಿದೆ. ಮುಷ್ಕರ ಅಥವಾ ಪ್ರತಿಭಟನೆಯಲ್ಲಿ ಭಾಗವಹಿಸಲು ಸರ್ಕಾರಿ ನೌಕರರಿಗೆ ಅವಕಾಶವಿಲ್ಲ. ಕರ್ತವ್ಯಕ್ಕೆ ಹಾಜರಾಗದೇ ಇರುವವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ ನಿಯಮಗಳ ಅಡಿಯಲ್ಲಿ ಕ್ರಮ ಜರುಗಿಸಬೇಕು' ಎಂದು ಆಯುಕ್ತರು ಪತ್ರದಲ್ಲಿ ಸೂಚಿಸಿದ್ದಾರೆ.

'ಗ್ರಾ.ಪಂ. ಸಿಬ್ಬಂದಿ, ಸದಸ್ಯರ ಬೇಡಿಕೆ ಈಡೇರಿಸಿ'

'ಗ್ರಾಮ ಪಂಚಾಯತಿ ಅಧಿಕಾರಿ, ಸಿಬ್ಬಂದಿ ಮತ್ತು ಸದಸ್ಯರ ಬೇಡಿಕೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ತಜ್ಞರ ತಂಡ ರಚಿಸಬೇಕು' ಎಂದು ಒತ್ತಾಯಿಸಿ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪತ್ರ ಬರೆದಿದ್ದಾರೆ.

'ಅಧಿಕಾರ ವಿಕೇಂದ್ರೀಕರಣ ಸಾಧ್ಯವಾಗುತ್ತಿರುವುದು ಗ್ರಾಮ ಪಂಚಾಯತಿಗಳಿಂದ. ವಸತಿ ಯೋಜನೆ, ಕುಡಿಯುವ ನೀರು, ಬೀದಿ ದೀಪಗಳು ಮತ್ತು ನೈರ್ಮಲ್ಯ ನಿರ್ವಹಣೆ ಜತೆಗೆ ಸರ್ಕಾರದ ವಿವಿಧ 29 ಸೇವೆಗಳನ್ನು ಗ್ರಾಮ ಪಂಚಾಯತಿಗಳು ನೀಡುತ್ತಿವೆ. ಗ್ರಾಮ ಪಂಚಾಯತಿಗಳ ಮೇಲೆ ಕಾರ್ಯದೊತ್ತಡ ಹೆಚ್ಚು ಇದೆ. ಇದನ್ನು ನಿರ್ವಹಿಸುವ ಸಿಬ್ಬಂದಿಯ ಬೇಡಿಕೆಗಳನ್ನು ಈಡೇರಿಸುವುದು ಅತ್ಯಗತ್ಯ' ಎಂದು ಪತ್ರದಲ್ಲಿ ಹೇಳಿದ್ದಾರೆ.

'ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅಧಿಕಾರಿಗಳು, ಸಿಬ್ಬಂದಿ ಮತ್ತು ಸದಸ್ಯರು ನಾಲ್ಕು ದಿನಗಳಿಂದ ಕೆಲಸ ಸ್ಥಗಿತಗೊಳಿಸಿ ಧರಣಿ ನಡೆಸುತ್ತಿದ್ದಾರೆ. ಅವರ ಬೇಡಿಕೆಗಳು ನ್ಯಾಯಯುತವಾಗಿದ್ದು, ಅವುಗಳ ಈಡೇರಿಕೆಗೆ ಕ್ರಮ ತೆಗೆದುಕೊಳ್ಳಬೇಕು' ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ದಿನೇಶ್ ಗೂಳಿಗೌಡ

'ಗ್ರಾಮ ಪಂಚಾಯತಿಗಳಲ್ಲಿ ನಾಲ್ಕು ದಿನಗಳಿಂದ ಎಲ್ಲ ಸ್ವರೂಪದ ಕೆಲಸ ಸ್ಥಗಿತವಾಗಿವೆ. ಜನರಿಗೆ ತೊಂದರೆಯಾಗುತ್ತಿದೆ. ಪ್ರತಿಭಟನೆಯಲ್ಲಿ ಭಾಗಿಯಾಗಿರುವ ಗ್ರಾಮ ಪಂಚಾಯತ್ ರಾಜ್ ಸದಸ್ಯರ ಒಕ್ಕೂಟ, ಪಿಡಿಒ ಕ್ಷೇಮಾಭಿವೃದ್ಧಿ ಒಕ್ಕೂಟ ಮತ್ತು ನೌಕರರ ಸಂಘಗಳ ಪದಾಧಿಕಾರಿಗಳನ್ನು ಕರೆದು ತಕ್ಷಣವೇ ಸಭೆ ನಡೆಸಬೇಕು' ಎಂದು ಗೂಳಿಗೌಡ ಅವರು ಕೋರಿದ್ದಾರೆ.

'ಬೆದರಿಕೆಗೆ ಮಣಿಯುವುದಿಲ್ಲ'

'ಆಯುಕ್ತರು ಕ್ರಮ ಜರುಗಿಸುವಂತೆ ಸೂಚಿಸುವ ಮೂಲಕ ಹೋರಾಟಕ್ಕೆ ಇಳಿದಿರುವ ಅಧಿಕಾರಿಗಳು ಮತ್ತು ನೌಕರರನ್ನು ಬೆದರಿಸುವ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ಎಲ್ಲ ವೃಂದ ಸಂಘಗಳು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟದ ಅಧ್ಯಕ್ಷ ರಾಜು ವಾರದ ತಿಳಿಸಿದ್ದಾರೆ.

'ಬೇಡಿಕೆ ಈಡೇರುವವರೆಗೂ ಹೋರಾಟ ಮುಂದುವರಿಯಲಿದೆ. ಬೆದರಿಕೆಗೆ ನಾವು ಮಣಿಯುವುದಿಲ್ಲ' ಎಂದೂ ಅವರು ಹೇಳಿದ್ದಾರೆ.

'ವಿಮಾ ಪರಿಹಾರಕ್ಕೆ ಕಂಪನಿಯೇ ಹೊಣೆ'

ಒಂದನೇ ಪುಟದಿಂದ...

'ವಾಹನ ಮಾಲೀಕರು ತಮ್ಮ ವಾಹನವನ್ನು ರಸ್ತೆಗಿಳಿಸುವ ವೇಳೆ ಪರವಾನಗಿ ಮತ್ತು ಫಿಟ್ನೆಸ್ ಸರ್ಟಿಫಿಕೇಟ್ ಹೊಂದಿರಲಿಲ್ಲ. ಇದು ವಾಹನ ಮಾಲೀಕ ಅನುಸರಿಸಬೇಕಾಗಿದ್ದ ಮೂಲಭೂತ ನಿಯಮ. ಆದರೆ ಈ ಪ್ರಕರಣದಲ್ಲಿ ಇದನ್ನು ಉಲ್ಲಂಘಿಸಲಾಗಿದೆ. ಆದ್ದರಿಂದ, ವಿಮಾ ಕಂಪನಿಯನ್ನು ಸಂಪೂರ್ಣ ಜವಾಬ್ದಾರಿಯಿಂದ ಬಿಡುಗಡೆ ಮಾಡಬೇಕು. ಮಾಲೀಕರೇ ಪರಿಹಾರ ಪಾವತಿಸಲು ನಿರ್ದೇಶಿಸಬೇಕು' ಎಂಬ ವಿಮಾ ಕಂಪನಿಯ ವಾದವನ್ನು ಪೀಠ ತಿರಸ್ಕರಿಸಿದೆ. 'ಸ್ವರಣ್ ಸಿಂಗ್ ಮತ್ತು ಯಲ್ಲವ್ವ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಉಲ್ಲೇಖಿಸಿರುವಂತೆ ಇದೊಂದು ಮೂಲಭೂತ ನಿಯಮದ ಉಲ್ಲಂಘನೆ ಆಗಿದ್ದರೂ ವಿಮಾ ಕಂಪನಿ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಅವಕಾಶ ಇರುವುದಿಲ್ಲ. ಹೀಗಾಗಿ, ವಿಮಾ ಕಂಪನಿಯು ಪರಿಹಾರದ ಮೊತ್ತವನ್ನು ಈ ಆದೇಶ ತಲುಪಿದ ಎಂಟು ವಾರಗಳ ಒಳಗಾಗಿ ಪಾವತಿಸಬೇಕು' ಎಂದು ನ್ಯಾಯಪೀಠ ವಿವರಿಸಿದೆ.

ಪ್ರಕರಣವೇನು?: ಕಟ್ಟಡ ಕಾರ್ಮಿಕ ನಂದೀಶಪ್ಪ (55) ಹೊಸಕೋಟೆ-ಚಿಕ್ಕ ತಿರುಪತಿ ಮಾರ್ಗದಲ್ಲಿ ಬೈಸಿಕಲ್‌ನಲ್ಲಿ ಹೋಗುತ್ತಿದ್ದ ವೇಳೆ ಅಪಘಾತ ನಡೆದಿತ್ತು. ಇದಾದ ಏಳು ದಿನಗಳ ಬಳಿಕ ನಂದೀಶಪ್ಪ ಮೃತಪಟ್ಟಿದ್ದರು. ತಲೆಗೆ ತೀವ್ರ ಸ್ವರೂಪದ ಪೆಟ್ಟಾಗಿದ್ದ ನಂದೀಶಪ್ಪ ಅವರಿಗೆ, ಏಳು ದಿನಗಳಲ್ಲಿ ಹಲವು ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗಿತ್ತು. ಈ ಸಂಬಂಧ ಪ್ರಕರಣದಲ್ಲಿ ನ್ಯಾಯಮಂಡಳಿ ₹13.88 ಲಕ್ಷ ಪರಿಹಾರ ನೀಡಲು ಆದೇಶಿಸಿತ್ತು.

'ಪರಿಹಾರದ ಮೊತ್ತ ಹೆಚ್ಚಳ ಮಾಡುವಂತೆ ನಿರ್ದೇಶಿಸಬೇಕು' ಎಂದು ಮೃತ ನಂದೀಶಪ್ಪ ಅವರ ಪತ್ನಿ ಕೋರಿದ್ದರು. ಇದೇ ವೇಳೆ ವಿಮಾ ಕಂಪನಿಯು, 'ಬೆಂಗಳೂರಿನ ಲಘು ವ್ಯಾಜ್ಯಗಳು ಮತ್ತು ಮೋಟಾರು ಅಪಘಾತ ಕ್ಲೇಮ್ ನ್ಯಾಯಮಂಡಳಿ ನೀಡಿರುವ ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಿತ್ತು.

ಭಾಗಶಃ ಪುರಸ್ಕರಿಸಿರುವ ಪೀಠ, ಪರಿಹಾರದ ಮೊತ್ತ ₹13.44 ಲಕ್ಷವನ್ನು ₹13.88 ಲಕ್ಷಕ್ಕೆ ಹೆಚ್ಚಳ ಮಾಡಿದ್ದು, ಶೇ 6ರಷ್ಟು ವಾರ್ಷಿಕ ಬಡ್ಡಿ ಸೇರಿಸಿ ಪಾವತಿ ಮಾಡುವಂತೆ ಆದೇಶಿಸಿದೆ.

ಮುಡಾ: ಮಾಹಿತಿ ಕೇಳಿದ ಇ.ಡಿ.?

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ದೂರಿಗೆ ಸಂಬಂಧಿಸಿ ಅಗತ್ಯ ದಾಖಲೆಗಳನ್ನು ನೀಡುವಂತೆ ಜಾರಿ ನಿರ್ದೇಶನಾಲಯವು ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೂಚಿಸಿದೆ ಎನ್ನಲಾಗಿದೆ.

'ಇ.ಡಿ. ಬೆಂಗಳೂರು ಕಚೇರಿಯಿಂದ ಮುಡಾ ಕಚೇರಿಗೆ ಪತ್ರ ರವಾನೆಯಾಗಿದ್ದು, ಲೋಕಾಯುಕ್ತದಲ್ಲಿ ಸಿದ್ದರಾಮಯ್ಯ ಸೇರಿದಂತೆ ನಾಲ್ವರು ಆರೋಪಿಗಳ ವಿರುದ್ಧ ದಾಖಲಾದ ಎಫ್‌ಐಆರ್‌ಗೆ ಸಂಬಂಧಿಸಿ ಎಲ್ಲ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಒದಗಿಸುವಂತೆ ಕೇಳಿದೆ' ಎಂದು ಮೂಲಗಳು ತಿಳಿಸಿವೆ. ಆದರೆ ಮುಡಾ ಅಧಿಕಾರಿಗಳು ಇದನ್ನು ಖಚಿತಪಡಿಸಿಲ್ಲ.

ಮುಡಾ ವ್ಯಾಪ್ತಿಯಲ್ಲಿ 'ಸೆಟ್ಲ್‌ಮೆಂಟ್ ಡೀಡ್' ಹೆಸರಿನಲ್ಲಿ ನಡೆದಿರುವ ನಿವೇಶನಗಳ ಹಂಚಿಕೆ ಮತ್ತು ನೋಂದಣಿ ಬಗ್ಗೆಯೂ ಜಾರಿ ನಿರ್ದೇಶನಾಲಯಕ್ಕೆ ದೂರು ಸಲ್ಲಿಕೆಯಾಗಿದ್ದು, ಈ ಪ್ರಕರಣವನ್ನೂ ಇ.ಡಿ. ಅಧಿಕಾರಿಗಳು ಪ್ರತ್ಯೇಕವಾಗಿ ಪರಿಶೀಲಿಸುವ ಸಾಧ್ಯತೆ ಇದೆ.

RASHTROTTHANA PARISHAT
RASHTROTTHANA VIDYA KENDRA
GROUP OF CBSE SCHOOLS
Keshava Shilpa, Kempegowdanagar, Bengaluru– 560 004, www.rvkcbse.in

JOB VACANCY

1	Principal: Post Graduate, B.Ed. with 10+ years of teaching experience in core subject. Minimum 5 years of experience as Principal in CBSE School is preferred
2	Administrator: · Proven experience in administrative roles, Strong organisational skills with excellent communication. Qualification: Graduation / Post Graduation with minimum 05 years of experience as a school administrator.
3	PGT: Postgraduate in the relevant subject with B.Ed. Preference will be given to experienced person who can prepare students for KCET/COMED K/IIT-JEE/NEET. Subjects: Physics, Chemistry, Math, Biology& Computer Science
4	TGT: English / Kannada / Hindi / Sanskrit / Maths / Science / Soc. Science, Computer Science, Post Graduate / Graduate in the relevant subjects with B.Ed.
5	PRT: English / Kannada / Hindi / Sanskrit / Maths / Science / Soc. Science, Computer Science Graduate in the relevant subjects with B.Ed. / D.Ed.
6	PPT: Kindergarten Teachers, Montessori Teachers: NTT / Montessori Diploma
7	PET: M. Pd /B.Pd., (Preference will be given to Ladies)
8	Performing Arts Teachers: Karate, Dance, Yoga, Vocal Music, Tabala, Keyboard, Proficient Certificate with experience in the respective subjects
9	Visual Art: B.F.A / B.V. A
10	Swimming Coach & Life Guard: Certificate in relevant area (Preference will be given to Ladies)
11	Computer Instructor: BCA / MCA
12	Librarian: M.L &I. SC. / B.L. &I. SC.
13	Counsellor: M.Sc. in Child & Adult Psychology
14	Special Educator: Certificate from Rehabilitation Council of India
15	Wellness Staff (Staff Nurse): Diploma in Nursing

Preferences will be given to post graduates and experienced teachers with creative and technology aided teaching. Remuneration is not a constraint for the deserving candidates.

Please scan the QR code below to begin your application process. After scanning, select your respective school location and complete your job application for the required position.
https://tinyurl.com/963849at

ದಾಂಡಿಯಾ ನೃತ್ಯ...

ಕಲಬುರಗಿಯ ಬಿಜಾಸ್ಪುರ ರಾಯಲ್ ಟ್ರೀನಲ್ಲಿ ನವರಾತ್ರಿ ಉತ್ಸವ ಅಂಗವಾಗಿ ಮಂಗಳವಾರ ಯುವತಿಯರು ದಾಂಡಿಯಾ ನೃತ್ಯ ಮಾಡಿ ಸಂಭ್ರಮಿಸಿದರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕರಾವಳಿಯಲ್ಲಿ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಭಾಗದ ಕೆಲವೆಡೆ ಬುಧವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ಇಲಾಖೆಯು 'ಯೆಲ್ಲೊ ಅಲರ್ಟ್' ನೀಡಿದೆ. ಈ ಜಿಲ್ಲೆಗಳ ಕೆಲವೆಡೆ ಭಾರಿ ಮಳೆಯಾಗುವ ಸಂಭವವಿದ್ದು, ಉತ್ತರ ಕನ್ನಡ ಜಿಲ್ಲೆಯ ಹಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಹಲವೆಡೆ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಗರಿಷ್ಠ ಉಷ್ಣಾಂಶ 30 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಇದೇ 13ರವರೆಗೂ ಕರಾವಳಿ ಮತ್ತು ದಕ್ಷಿಣ ಒಳನಾಡಿನ ಕೆಲವು ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಗುಂಡ್ಲುಪೇಟೆಯಲ್ಲಿ ಉತ್ತಮ ಮಳೆ: ಗುಂಡ್ಲುಪೇಟೆ ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಮಂಗಳವಾರ ಮಧ್ಯಾಹ್ನ ಉತ್ತಮ ಮಳೆ ಸುರಿದಿದೆ. ಹುರುಳಿ, ಅಲಸಂದೆ ಸೇರಿದಂತೆ ಮಳೆಯಾಶ್ರಿತ ಬೆಳೆಗಳಿಗೆ ಅನುಕೂಲವಾಗಿದೆ. ತಗ್ಗು ಪ್ರದೇಶದಲ್ಲಿ ಮಳೆ ನಿಂತು ವಾಹನ ಸಂಚಾರಕ್ಕೆ ತೊಂದರೆ ಉಂಟಾಗಿದೆ.

Garuda Wheels, Hoskote, Ph: 9035040171; **Whitefield Yamaha, Whitefield,** Ph: 9606061054; **Mahadevapura,** Ph: 9148086668; **Motoworld: Bommanahalli,** Ph: 080-69643030; **Chandapura,** Ph: 080-69643030; **Bangalore Wheels: Rajajinagar,** Ph: 9964156618; **Vijayanagar,** Ph: 9611920002; **Malathahalli,** Ph: 9916610017; **Kengeri,** Ph: 9916610022; **Perfect Riders: Lalbagh Road,** Ph: 8497816000; **Jayanagar,** Ph: 8497816000; **Pacer Yamaha: Hebbal,** Ph: 6360237411; **Kalyan Nagar,** Ph: 9902607629; **RR Nagar,** Ph: 7624818307; **Vidyaranyapura,** Ph: 9036690334; **Vinayak Motors: Domlur,** Ph: 9591072222; **Kormangala,** Ph: 9035961010; **Laxmi International, Bannerghatta Road,** Ph: 9739364819; **Chandan Motors, Banashankari,** Ph: 9606861911; **Geetha Motors: Nelamangala,** Ph: 7619628882, **Peenya,** Ph: 8951954565; **Panache Enterprises: Indiranagar,** Ph: 9844011961; **Marathahalli,** Ph: 9844011961; **I Yamaha Automotives, K R Puram,** Ph: 8088448844; **Srijaya Motors, Yalahanka,** Ph: 7406622213, 7406622218; **Sree Geetha Motors, Tumkur,** Ph: 6364885726; **Sri RV Advent Ride, Kolar,** Ph: 9071374827; **Xtreme Motors, Chikaballapur,** Ph: 9353279001; **Yamaha Bike Corner: Varthur: Touch Yamaha,** Ph: 9986547353; **Anekal: Anekal Yamaha Motors,** Ph: 9972909455; **Devanahalli: Nandi Bikes,** Ph: 9739030606; **Magadi: Sri Narashima Motors,** Ph: 9482090890; **Tiptur: Jenukallu Yamaha,** Ph: 7892862641; **Mulbagal: Sri RV Advent Ride,** Ph: 9071374830; **Kunigal: Manjunathaswamy Yamaha,** Ph: 7411979755; **Chintamani: Xtreme Motors,** Ph: 9353279001; **Attibele: Moto World,** Ph: 8884452700; **Dommasandra: Moto World,** Ph: 8884452899.

ಹರ್ಮನ್‌ಪ್ರೀತ್ ಕೌರ್ ಬಳಗಕ್ಕೆ ಬ್ಯಾಟಿಂಗ್ ತೊಡಕು ಸರಿಪಡಿಸುವ ಗುರಿ

ಭಾರತಕ್ಕೆ ಇಂದು ಲಂಕಾ ಸವಾಲು

ದುಬೈ (ಪಿಟಿಐ): ಮಿಶ್ರಫಲದೊಡನೆ ಅಭಿಯಾನ ಆರಂಭಿಸಿರುವ ಭಾರತ ತಂಡ ಬುಧವಾರ ಟಿ20 ಮಹಿಳಾ ವಿಶ್ವಕಪ್ ‘ಎ’ ಗುಂಪಿನ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಎದುರಿಸಲಿದೆ. ಬ್ಯಾಟಿಂಗ್ ವಿಭಾಗದ ದೋಷಗಳನ್ನು ಸರಿಪಡಿಸಿಕೊಳ್ಳುವ ಜೊತೆಗೆ ನಿವ್ವಳ ರನ್ ದರವನ್ನು ಸುಧಾರಿಸಿಕೊಳ್ಳುವ ಸವಾಲು ಭಾರತದ ಮುಂದಿದೆ.

ಈ ಬಾರಿ ಚುಟುಕು ವಿಶ್ವಕಪ್‌ನಲ್ಲಿ ಭಾರತದ ಆರಂಭ ಸ್ಫೂರ್ತಿಯುತ ವಾಗಿಲ್ಲ. ನ್ಯೂಜಿಲೆಂಡ್ ಎದುರು ಮೊದಲ ಪಂದ್ಯವನ್ನು 58 ರನ್‌ಗಳಿಂದ ಸೋತ ನಂತರ, ಬದ್ಧ ಎದುರಾಳಿ ಪಾಕಿಸ್ತಾನ ವಿರುದ್ಧ 105 ರನ್‌ಗಳ ಸಾಧಾರಣ ಗುರಿಯನ್ನು ತಲುಪಲು 18.5 ಓವರುಗಳು ಬೇಕಾದವು.

ಬ್ಯಾಟಿಂಗ್ ವಿಭಾಗದ ವೈಫಲ್ಯ ಚಿಂತೆಗೆ ಕಾರಣವಾಗಿದೆ. ಅದರಲ್ಲೂ, ಬಿರುಸಿನ ಆರಂಭ ನೀಡುವ ಶಫಾಲಿ ವರ್ಮಾ ಮತ್ತು ಉಪನಾಯಕಿ ಸ್ಮೃತಿ ಮಂದಾನ ಅವರ ಸಂಯೋಜನೆಯಲ್ಲಿ ಭದ್ರ ಅಡಿಪಾಯ ದೊರೆಯುತ್ತಿಲ್ಲ. ಶಫಾಲಿ ಎರಡು ಪಂದ್ಯಗಳಲ್ಲಿ ಬರೇ 34 ರನ್ ಗಳಿಸಿದ್ದಾರೆ. ಅನುಭವಿ ಮಂದಾನ ಸಹ ಕೇವಲ 12 ಮತ್ತು 7 ರನ್ ಗಳಿಸಿದ್ದಾರೆ. ಹೀಗಾಗಿ ನಂತರದ ಬ್ಯಾಟರ್‌ಗಳ ಮೇಲೆ ಒತ್ತಡ ಹೆಚ್ಚುತ್ತಿದೆ.

ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಲಂಕಾ ವಿರುದ್ಧ ಆಡುವುದು ಅನುಮಾನ. ಇದು ಒತ್ತಡ ಮತ್ತಷ್ಟು ಹೆಚ್ಚಿಸಿದೆ. ಕತ್ತುನೋವಿನಿಂದಾಗಿ ಅವರು ಪಾಕಿಸ್ತಾನ ವಿರುದ್ಧ 29 ರನ್ ಗಳಿಸಿ

ಶಫಾಲಿ ವರ್ಮಾ
ಎಪಿ/ಪಿಟಿಐ ಚಿತ್ರ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ನಿವೃತ್ತರಾಗಿದ್ದರು. ಹೀಗಾಗಿ ಅನುಭವಿ ಬ್ಯಾಟರ್‌ಗಳಾದ ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ ಮತ್ತು ರಿಚಾ ಘೋಷ್ ಹೊಣೆಯರಿತು ಆಡಬೇಕಾಗಿದೆ.

ಮಧ್ಯಮ ವೇಗಿ ಅರುಂಧತಿ ರೆಡ್ಡಿ, ಪಾಕ್ ವಿರುದ್ಧ 19 ರನ್ನಿಗೆ 3 ವಿಕೆಟ್ ಪಡೆದು ಮಿಂಚಿದ್ದರು. ಆದರೆ ಅವರಿಗೆ ರೇಣುಕಾ ಸಿಂಗ್ ಮತ್ತು ಪೂಜಾ ವಸ್ತ್ರಾಕರ್ ಅವರಿಂದ ಬೆಂಬಲ ದೊರೆಯಬೇಕಾಗಿದೆ. ಸ್ಪಿನ್ ವಿಭಾಗ ದೀಪ್ತಿ ಶರ್ಮಾ ಅವರನ್ನು ಬಲವಾಗಿ ನೆಚ್ಚಿಕೊಂಡಿದೆ. ಆದರೆ ಅವರು ಉತ್ತಮ ಲಯದಲ್ಲಿಲ್ಲ. ಯುವ ಆಫ್ ಸ್ಪಿನ್ನರ್ ಶ್ರೇಯಾಂಕ ಪಾಟೀಲ ಮತ್ತು ಲೆಗ್ ಸ್ಪಿನ್ನರ್ ಆಶಾ ಶೋಭನಾ ಸ್ವಲ್ಪ ಮಟ್ಟಿಗೆ ಯಶಸ್ಸು ಪಡೆದಿದ್ದಾರೆ.

ಈ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದರಷ್ಟೇ, ಗುಂಪಿನ ಕೊನೆಯ ಪಂದ್ಯದಲ್ಲಿ ಆಸ್ಟ್ರೇಲಿಯಾದಂಥ ಪ್ರಬಲ ತಂಡವನ್ನು ವಿಶ್ವಾಸದಿಂದ ಎದುರಿಸಬಹುದು.

ಚಮಾರಿ ಆಟಪಟ್ಟು

ಶ್ರೀಲಂಕಾ ಮೊದಲ ಎರಡು ಪಂದ್ಯ ಸೋತಿರಬಹುದು. ಆದರೆ ದ್ವೀಪ ರಾಷ್ಟ್ರದ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಆಗಸ್ಟ್‌ನಲ್ಲಿ ನಡೆದ ಏಷ್ಯಾ ಕಪ್ ಫೈನಲ್‌ನಲ್ಲಿ ಲಂಕಾ ತಂಡ, ಭಾರತಕ್ಕೆ ಆಘಾತ ನೀಡಿತ್ತು.

‘ಲಂಕಾ ತಂಡವು ಹಿಂದಿನಂತೆ, ಈಗ ನಾಯಕಿ ಚಮಾರಿ ಆಟಪಟ್ಟು ಅವರನ್ನು ಮಾತ್ರ ಅವಲಂಬಿಸಿಲ್ಲ’ ಎಂದು ಭಾರತದ ಆರಂಭ ಆಟಗಾರ್ತಿ ಶಫಾಲಿ ಒಪ್ಪಿಕೊಂಡರು.

‘ಹಿಂದೆ ಚಮಾರಿ ಅವರೇ ಹೆಚ್ಚಿನ ರನ್ ಗಳಿಸಬೇಕಿತ್ತು, ವಿಕೆಟ್ ಪಡೆಯಬೇಕಿತ್ತು. ಆದರೆ ಏಷ್ಯಾ ಕಪ್‌ನಲ್ಲಿ ಇಡೀ ತಂಡ ಉತ್ತಮ ಪ್ರದರ್ಶನ ನೀಡಿತ್ತು’ ಎಂದರು.

‘ಚಮಾರಿ ಅವರ ವಿಕೆಟ್ ಬೇಗನೇ ಪಡೆಯುವುದು ಬಹಳ ಮುಖ್ಯ’ ಎಂದು ವೇಗದ ಬೌಲರ್ ರೇಣುಕಾ ಸಿಂಗ್ ಹೇಳಿದರು.

ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್ ಆ್ಯಪ್

12ನೇ ಸ್ಥಾನಕ್ಕೇರಿದ ಹರ್ಮನ್‌ಪ್ರೀತ್

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಮಂಗಳವಾರ ಪ್ರಕಟವಾದ ಐಸಿಸಿ ಮಹಿಳಾ ಟಿ20 ರ್‍ಯಾಂಕಿಂಗ್ ಪಟ್ಟಿಯ ಬ್ಯಾಟರ್‌ಗಳ ವಿಭಾಗದಲ್ಲಿ ನಾಲ್ಕು ಸ್ಥಾನ ಬಡ್ತಿ ಕಂಡು 12ನೇ ಸ್ಥಾನಕ್ಕೇರಿದ್ದಾರೆ.

ಹರ್ಮನ್‌ಪ್ರೀತ್ ಜೊತೆ ಶ್ರೀಲಂಕಾದ ಹರ್ಷಿತಾ ಸಮರವಿಕ್ರಮ (610 ಪಾಯಿಂಟ್ಸ್) ಅವರು 12ನೇ ಸ್ಥಾನ ಹಂಚಿಕೊಂಡಿದ್ದಾರೆ.

ಅನುಭವಿ ಆಟಗಾರ್ತಿ ಸ್ಮೃತಿ ಮಂದಾನ ಒಂದು ಸ್ಥಾನ ಕೆಳಗಿಳಿದು ಐದನೇ ಸ್ಥಾನದಲ್ಲಿದ್ದಾರೆ. ಜೆಮಿಮಾ ರಾಡ್ರಿಗಸ್ ಕೂಡ ಹಿಂಬಡ್ತಿ ಪಡೆದು 20ನೇ ಸ್ಥಾನಕ್ಕಿಳಿದಿದ್ದಾರೆ. ಬೆತ್ ಮೂನಿ (761) ಅಗ್ರಸ್ಥಾನದಲ್ಲಿದ್ದಾರೆ.

ಬೌಲರ್‌ಗಳ ಪಟ್ಟಿಯಲ್ಲಿ ಕನ್ನಡತಿ, ಆಫ್ ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಅವರು 9 ಸ್ಥಾನ ಮೇಲೇರಿ 29ನೇ ಸ್ಥಾನದಲ್ಲಿದ್ದಾರೆ.

ಅನುಭವಿ ಆಫ್ ಸ್ಪಿನ್ನರ್ ದೀಪ್ತಿ ಶರ್ಮಾ ನಾಲ್ಕನೇ ಸ್ಥಾನಕ್ಕೆ ಸರಿದಿದ್ದಾರೆ.

ಹರ್ಮನ್‌ಪ್ರೀತ್ ಕೌರ್

ವೇಗದ ಬೌಲರ್ ರೇಣುಕಾ ಸಿಂಗ್ ಠಾಕೂರ್ ಐದನೇ ಸ್ಥಾನ ಉಳಿಸಿ ಕೊಂಡಿದ್ದಾರೆ.

ಸಾ ದಿ ಯಾ ಇಕ್ಬಾಲ್ ಅಲ್ಪಕಾಲ ಅಗ್ರಸ್ಥಾನಕ್ಕೇರಿದ್ದು, ಈ ಗೌರವಕ್ಕೆ ಪಾತ್ರರಾದ ಮೊದಲ ಪಾಕ್ ಆಟಗಾರ್ತಿ ಎಂಬ ಗೌರವಕ್ಕೆ ಪಾತ್ರರಾಗಿದ್ದರು. ಅವರು ದೀರ್ಘಕಾಲ ಅಗ್ರಸ್ಥಾನದಲ್ಲಿದ್ದ ಇಂಗ್ಲೆಂಡ್‌ನ ಸೋಫಿ ಎಕ್ಲೆಸ್ಟೋನ್ ಅವರನ್ನು ಹಿಂದೆಹಾಕಿದ್ದರು. ಟಿ20 ವಿಶ್ವಕಪ್ ‘ಎ’ ಗುಂಪಿನಲ್ಲಿ ಲಂಕಾ ವಿರುದ್ಧ 17 ರನ್ನಿಗೆ 3 ವಿಕೆಟ್ ಪಡೆದು ಅಗ್ರಸ್ಥಾನಕ್ಕೇರಿದ್ದ ಅವರು, ಬಾಂಗ್ಲಾ ವಿರುದ್ಧ ವಿಕೆಟ್ ಪಡೆಯಲು ವಿಫಲರಾದರು. ಇನ್ನೊಂದೆಡೆ ದಕ್ಷಿಣ ಆಫ್ರಿಕಾ ವಿರುದ್ಧ 15 ರನ್ನಗೆ 2 ವಿಕೆಟ್ ಪಡೆದ ಎಕ್ಲೆಸ್ಟೋನ್ ಪಂದ್ಯದ ಆಟಗಾರ್ತಿ ಗೌರವದ ಜೊತೆಗೆ ಅಗ್ರ ಕ್ರಮಾಂಕ (762 ಪಾಯಿಂಟ್ಸ್) ಮರಳಿ ಪಡೆದರು.

ಸಹದೇವ್ ಆರೋಪ ತಳ್ಳಿಹಾಕಿದ ಉಷಾ

ಪಿ.ಟಿ.ಉಷಾ

ನವದೆಹಲಿ (ಪಿಟಿಐ): ನಿಯಮ ಅನುಸರಿಸದೇ ರಿಯಲನ್ಸ್ ಇಂಡಸ್ಟ್ರೀಸ್ ಜೊತೆ ಮಾಡಿಕೊಂಡ ಪ್ರಾಯೋಜಕತ್ವ ಒಪ್ಪಂದದಿಂದ ಭಾರತ ಒಲಿಂಪಿಕ್ ಸಂಸ್ಥೆ (ಐಒಎ)ಗೆ ₹24 ಕೋಟಿ ನಷ್ಟವಾಗಿದೆ ಎಂದು ಸಿಎಜಿ ವರದಿಯಲ್ಲಿ ಸಂಸ್ಥೆಯ ಖಜಾಂಚಿ ಸಹದೇವ್ ಯಾದವ್ ಅವರು ಮಾಡಿರುವ ಆರೋಪವನ್ನು ಅಧ್ಯಕ್ಷೆ ಪಿ.ಟಿ.ಉಷಾ ಮಂಗಳವಾರ ತಳ್ಳಿಹಾಕಿದ್ದಾರೆ.

‘ಇದು ತಮ್ಮ ವ್ಯಕ್ತಿತ್ವಕ್ಕೆ ಕಳಂಕ ತರಲು ರೂಪಿಸಿದ ಸಂಚು ಆಗಿದೆ. ತಪ್ಪುದಾರಿಗೆಳೆಯುವ ಇಂಥ ಮಾಹಿತಿ ನೀಡಿದ ಯಾರೇ ಆಗಲಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ’ ಉಷಾ ಹೇಳಿಕೆಯಲ್ಲಿ ಎಚ್ಚರಿಸಿದ್ದಾರೆ.

‘ಐಒಎ ಎಕ್ಸಿಕ್ಯೂಟಿವ್ ಕೌನ್ಸಿಲ್ ಗಮನಕ್ಕೆ ತಾರದೇ ಉಷಾ ಈ ಒಪ್ಪಂದ ಮಾಡಿಕೊಂಡಿದ್ದಾರೆ ಎಂದು ಸಿಎಜಿ ವರದಿಯಲ್ಲಿ ಸಹದೇವ್ ಯಾದವ್ ಹೇಳಿದ್ದು, ಇದನ್ನು ಉಷಾ ನಿರಾಕರಿಸಿದ್ದಾರೆ. ತಮ್ಮ ವ್ಯಕ್ತಿತ್ವಕ್ಕೆ ಕಳಂಕ ಹಚ್ಚುವ ಮತ್ತು ಐಒಎ ವಿಶ್ವಾಸಕ್ಕೆ ಭಂಗ ತರುವ ಯತ್ನ ಇದು ಎಂದು ಉಷಾ ಹೇಳಿದ್ದಾರೆ’ ಎಂದು ಐಒಎ ಪ್ರಕಟಣೆ ತಿಳಿಸಿದೆ.

‘ವಾಸ್ತವವೆಂದರೆ, ಈ ಒಪ್ಪಂದದ ಪ್ರಸ್ತಾವವನ್ನು 2023ರ ಸೆಪ್ಟೆಂಬರ್ 9ರಂದು ಎಕ್ಸಿಕ್ಯೂಟಿವ್ ಕೌನ್ಸಿಲ್‌ನ ಎಲ್ಲ ಸದಸ್ಯರಿಗೆ ನೀಡಲಾಗಿತ್ತು. ನಂತರ ಅಕ್ಟೋಬರ್ 5ರಂದು ಹಂಗಾಮಿ ಸಿಇಒ ಅವರ ಮುಂದಿಡಲಾಗಿತ್ತು. ಒಪ್ಪಂದದ ಚರ್ಚೆಯಾಗುವಾಗ ಪ್ರಾಯೋಜಕತ್ವ ಸಮಿತಿಯ ಪ್ರತಿನಿಧಿಯಾಗಿ ರೋಹಿತ್ ರಾಜಪಾಲ್ (ಟೆನಿಸ್ ಆಟಗಾರ) ಹಾಜರಿದ್ದರು’ ಎಂದೂ ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಈ ಒಪ್ಪಂದದ ಭಾಗವಾಗಿ ರಿಲಯನ್ಸ್‌ಗೆ, ಕ್ರೀಡೆಗಳ ಸಮಯದಲ್ಲಿ ಇಂಡಿಯಾ ಹೌಸ್ ನಿರ್ಮಾಣಕ್ಕೆ ಅಧಿಕಾರ ದೊರಕಿತ್ತು. ಒಪ್ಪಂದ ಮಾಡಿಕೊಳ್ಳುವಾಗ ಅಗತ್ಯವಿರುವ ಎಲ್ಲ ಪ್ರಕ್ರಿಯೆಗಳನ್ನು ಅನುಸರಿಸಲಾಗಿದೆ ಎಂದೂ ಉಷಾ ಹೇಳಿಕೊಂಡಿದ್ದಾರೆ.

EXCLUSIVE LINEN CLUB SHOWROOM

Maharaja Signal, Koramangala Ph: 080-68319495 | 100 Feet Rd., Indiranagar Ph: 080-41121392 | Banashankari Ph: 8048520789 | Kodigehalli Main Road, Ph: 9686766505 | Jayanagar 5th Block, Ph: 080-42058308 | J P Nagar 3rd Phase, Ph: 080-42126230 | Kalyan Nagar, Ph: 080-49795533 | Magadi Main road, Byadarahalli, Ph: 080-29916591 | MG Road, Near Joyalukas Ph: 080-41475443 | Malleswaram, Ph: 080-23566677 | Nagarbhavi 2nd Stage, Ph: 080-29912343 | Basaveshwar Nagar, Ph: 080-41573683 | B.V.K. Iyengar Road, Ph: 080-40993705 | KR Puram, Ph: 9606200369 | Kodathi Gate, Sarjapura Road Ph: 9108565471

LINEN FABRICS | LINEN ETHNIC WEAR | LINEN SHIRTS | LINEN TROUSERS | LINEN JACKETS | BESPOKE TAILORING

#Cashback Offer available on all Honda two-wheeler models for EMI transactions made using HDFC Bank credit cards and IDFC FIRST Bank credit cards through Pine Labs machines only. #Customers can avail 5% Instant cashback, up to a maximum of Rs. 5000. #Valid on one transaction per card/order during the offer period. #Cashback offer valid until 30th November 2024. #The scheme is available in select outlets only. **Approval of the loan is at the sole discretion of the financiers, and additional documentation may be required. **The interest rates, down payment, and tenure options are based on the financier's assessment of the applicant's credit profile. **The offers/features may be modified or withdrawn at any time without prior intimation. Product shown in the picture may vary from actual product available in the market. Accessories shown in the picture are not part of standard equipment. *Source: Cumulative Sales figure of Brand Activa from June 2001 to June 2024 as per HMSI internal data. CBR [Click, Book, Relax] facility available at selected dealerships only.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

ಜಿ.ಪರಮೇಶ್ವರ ಅಧ್ಯಕ್ಷ, ಪ್ರಿಯಾಂಕ್ ಉಪಾಧ್ಯಕ್ಷ

ಸುಳ್ಳು ಸುದ್ದಿ ತಡೆಗೆ ಉನ್ನತ ಮಟ್ಟದ ಸಮಿತಿ ರಚನೆ

• ಭರತ್ ಜೋಶಿ

ಬೆಂಗಳೂರು: ರಾಜ್ಯದಲ್ಲಿ ಸುಳ್ಳು ಸುದ್ದಿಗಳನ್ನು ಮಟ್ಟ ಹಾಕಲು ರಾಜ್ಯ ಸರ್ಕಾರ ಉನ್ನತ ಮಟ್ಟದ 'ಫ್ಯಾಕ್ಟ್ ಚೆಕ್' ಸಮಿತಿಯೊಂದನ್ನು ರಚಿಸಿದೆ.

ಈ ಸಮಿತಿಗೆ ಗೃಹ ಸಚಿವ ಜಿ.ಪರಮೇಶ್ವರ ಅಧ್ಯಕ್ಷರಾಗಿದ್ದು, ಐಟಿ/ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಉಪಾಧ್ಯಕ್ಷರಾಗಿದ್ದಾರೆ ಎಂದು ಸರ್ಕಾರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ರಾಜ್ಯ ಸರ್ಕಾರದ 'ಫ್ಯಾಕ್ಟ್ ಚೆಕ್' ಸಮಿತಿಯಲ್ಲಿ ಕಾನೂನು ಮತ್ತು ಗೃಹ ಇಲಾಖೆಯ ಪ್ರತಿನಿಧಿಗಳೂ ಇದ್ದಾರೆ. ಈ ಸಮಿತಿಯು ಸುಳ್ಳು ಸುದ್ದಿಗಳನ್ನು ಯಾವ ರೀತಿ ತಡೆಯಬೇಕು ಎಂಬ ಕಾರ್ಯ ವಿಧಾನವನ್ನು ಅಭಿವೃದ್ಧಿಪಡಿಸಲಿದೆ ಎಂದು ಮೂಲಗಳು ತಿಳಿಸಿವೆ.

ಲೋಕಸಭಾ ಚುನಾವಣೆ ವೇಳೆ ಸುಳ್ಳು ಸುದ್ದಿಯನ್ನು ತಡೆಯಲೆಂದು ಸಿದ್ದರಾಮಯ್ಯ ಸರ್ಕಾರವು ಸುಳ್ಳು ಮಾಹಿತಿ ತಡೆ ಘಟಕವನ್ನು ಸ್ಥಾಪಿಸಿತ್ತು. satya.karnataka.gov.in ವೆಬ್‌ಸೈಟ್ ಮೂಲಕ 90 ದಿನಗಳವರೆಗೆ ಕಾರ್ಯ ನಿರ್ವಹಿಸಿತ್ತು. ಈ ಅವಧಿಯಲ್ಲಿ ಅಂತರ್ಜಾಲದಲ್ಲಿ ಪ್ರತಿದಿನ 64 ಸಾವಿರ ಲೇಖನಗಳನ್ನು ಪರಿಶೀಲಿಸುತ್ತಿತ್ತು. ಅದನ್ನು ಆಧರಿಸಿ 18 ಎಫ್‌ಐಆರ್ ದಾಖಲಿಸಲಾಗಿತ್ತು. 537 ಫ್ಯಾಕ್ಟ್‌ಚೆಕ್ ಮಾಡಿತ್ತು. 500 ಲೇಖನಗಳನ್ನು ಬೆದರಿಕೆ ಎಂದು ಪರಿಗಣಿಸಲಾಗಿತ್ತು. ಚುನಾವಣೆ ವೇಳೆ ಆಗಿದ್ದರಿಂದ ಅದು ಪೂರ್ಣ ಪ್ರಮಾಣದಲ್ಲಿ ಕಾರ್ಯವಿಧಾನ ರೂಪುಗೊಂಡಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಕೇಂದ್ರದ ಘಟಕಕ್ಕೆ ಹೈಕೋರ್ಟ್ ತಡೆ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಇದೇ ಮಾದರಿಯ ಫ್ಯಾಕ್ಟ್–ಚೆಕ್ ಘಟಕವನ್ನು ಸ್ಥಾಪಿಸಿತ್ತು. ಬಾಂಬೆ ಹೈಕೋರ್ಟ್ ಕಳೆದ ವಾರವಷ್ಟೇ ಅದನ್ನು ರದ್ದು ಮಾಡಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಸುಳ್ಳು ಸುದ್ದಿಗಳನ್ನು ತಡೆಯಲು ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ನಿಯಮ 2023 ರ ಅಡಿ ಫ್ಯಾಕ್ಟ್ ಚೆಕ್ ಘಟಕ ಸ್ಥಾಪಿಸಿತ್ತು.

ಬಾಂಬೆ ಹೈಕೋರ್ಟ್ ತೀರ್ಪಿನ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಪ್ರಶ್ನಿಸಿದಾಗ, 'ನ್ಯಾಯಾಲಯದ ತೀರ್ಪು ನಮ್ಮ ಸರ್ಕಾರದ ಪ್ರಯತ್ನದ ಮೇಲೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರುವುದಿಲ್ಲ. ಕೇಂದ್ರ ಸರ್ಕಾರ ಕಾನೂನು ಬದಲಿಸಿ ಫ್ಯಾಕ್ಟ್ ಚೆಕ್ ಘಟಕ ಮಾಡಲು ಹೊರಟಿತ್ತು. ನಮ್ಮ ಸರ್ಕಾರ ಈಗ ಇರುವ ಕಾನೂನಿನ ಅಡಿಯಲ್ಲೇ ಮಾಡುತ್ತಿದೆ' ಎಂದು ವಿವರಿಸಿದರು.

ತಾಜ್‌ಮಹಲ್ ವೀಕ್ಷಿಸಿದ ಮಾಲ್ದೀವ್ಸ್ ಅಧ್ಯಕ್ಷ

ಮಾಲ್ದೀವ್ಸ್‌ನ ಅಧ್ಯಕ್ಷ ಮೊಹಮ್ಮದ್ ಮುಯಿಜು ಮತ್ತು ಅವರ ಪತ್ನಿ ಸಾಜಿದಾ ಮೊಹಮ್ಮದ್ ಮಂಗಳವಾರ ತಾಜ್ ಮಹಲ್‌ಗೆ ಭೇಟಿ ನೀಡಿದರು – ಪಿಟಿಐ ಚಿತ್ರ

ಆಗ್ರಾ(ಪಿಟಿಐ): ವಿಶ್ವವಿಖ್ಯಾತ ತಾಜ್ ಮಹಲ್‌ಗೆ ಮಂಗಳವಾರ ಭೇಟಿ ನೀಡಿದ ಮಾಲ್ದೀವ್ಸ್‌ನ ಅಧ್ಯಕ್ಷ ಮೊಹಮ್ಮದ್ ಮುಯಿಜು ಮತ್ತು ಅವರ ಪತ್ನಿ ಸಾಜಿದಾ ಮೊಹಮ್ಮದ್, ಅಲ್ಲಿನ ವಾಸ್ತುಶಿಲ್ಪದ ಬಗ್ಗೆ ಅಚ್ಚರಿ ವ್ಯಕ್ತಪಡಿಸಿದರು.

'ಈ ಪ್ರವಾಸಿ ತಾಣದ ಸೌಂದರ್ಯವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಇಲ್ಲಿನ ಕಲಾತ್ಮಕತೆಯು ಪ್ರೀತಿ ಮತ್ತು ವಾಸ್ತುಶಿಲ್ಪದ ಶ್ರೇಷ್ಠತೆಗೆ ಉದಾಹರಣೆಯಾಗಿದೆ' ಎಂದು ಮುಯಿಜು ಅವರು ಪ್ರವಾಸಿಗರ ಪುಸ್ತಕದಲ್ಲಿ ಬರೆದಿದ್ದಾರೆ.

ನಾಲ್ಕು ದಿನಗಳ ಭಾರತ ಪ್ರವಾಸದಲ್ಲಿರುವ ಮುಯಿಜು ಮತ್ತು ಅವರ ಪತ್ನಿಯನ್ನು ಉತ್ತರಪ್ರದೇಶದ ಸಚಿವ ಯೋಗೇಂದ್ರ ಉಪಾಧ್ಯಾಯ ಅವರು ಆಗ್ರಾ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು.

'ಮುಯಿಜು ಮತ್ತು ಅವರೊಂದಿಗಿದ್ದ ತಂಡವು ತಾಜ್‌ಮಹಲ್‌ನ ಇತಿಹಾಸ ಮತ್ತು ವೈಶಿಷ್ಟ್ಯತೆಗಳನ್ನು ಬಹಳ ಆಸಕ್ತಿಯಿಂದ ತಿಳಿದುಕೊಂಡರು' ಎಂದು ಸಚಿವ ಉಪಾಧ್ಯಾಯ ಅವರು ತಿಳಿಸಿದ್ದಾರೆ. ಮುಯಿಜು ಭೇಟಿ ಕಾರಣಕ್ಕೆ ಮಂಗಳವಾರ ಬೆಳಿಗ್ಗೆ 8 ಗಂಟೆಯಿಂದ 10 ಗಂಟೆಯವರೆಗೆ ತಾಜ್‌ಮಹಲ್‌ಗೆ ಸಾರ್ವಜನಿಕರು ಪ್ರವೇಶಿಸದಂತೆ ನಿರ್ಬಂಧ ಹೇರಲಾಗಿತ್ತು.

ಕರಕುಶಲ ಗ್ರಾಮವಾಗಿರುವ ಶಿಲ್ಪಗ್ರಾಮಕ್ಕೂ ಮುಯಿಜು ಭೇಟಿ ನೀಡಿದರು.

ಕಲಾವಿದ ಕಾರ್ತಿಕ್ ವಿರುದ್ಧ ಜಾತಿ ನಿಂದನೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಮನೋರಂಜನಾ ವಾಹಿನಿಯೊಂದು ಇತ್ತೀಚೆಗೆ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಲಾವಿದರೊಬ್ಬರು ಭೋವಿ ಸಮುದಾಯಕ್ಕೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿ ದೂರು ನೀಡಲಾಗಿದ್ದು, ನಾಲ್ವರ ವಿರುದ್ಧ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹಾಸ್ಯ ಕಲಾವಿದ ಕಾರ್ತಿಕ್ ಅಲಿಯಾಸ್ ಹುಲಿ ಕಾರ್ತಿಕ್, ಸಂಭಾಷಣೆಕಾರ, ಕಾರ್ಯಕ್ರಮದ ನಿರ್ದೇಶಕ ಹಾಗೂ ನಿರ್ಮಾಪಕರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಸೆ.20ರಿಂದ 22ರ ವರೆಗೆ ಪ್ರತಿದಿನ ಸಂಜೆ 7 ಗಂಟೆಗೆ ಕಾರ್ಯಕ್ರಮ ಪ್ರಸಾರವಾಗಿತ್ತು. ಈ ಕಾರ್ಯಕ್ರಮದಲ್ಲಿ ಭೋವಿ ಸಮುದಾಯಕ್ಕೆ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಕೆ.ಆರ್. ಪುರ ಸಮೀಪದ ದೇವಸಂದ್ರದ ನಿವಾಸಿ ಎಸ್.ಲೋಕೇಶ್ ಅವರು ದೂರು ನೀಡಿದ್ದರು. ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿದ್ಯುತ್ ತಂತಿ ತಗುಲಿ 3 ಕರಡಿ ಸಾವು

ಹಾಸನ: ಅರಸೀಕೆರೆ ತಾಲ್ಲೂಕಿನ ಕಲ್ಲುಸಾದರಹಳ್ಳಿಯಲ್ಲಿ ಮಂಗಳವಾರ ಬೆಳಗಿನ ಜಾವ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ 6 ವರ್ಷದ ಗಂಡು ಮತ್ತು ಹೆಣ್ಣು ಕರಡಿ ಹಾಗೂ ಒಂದು ವರ್ಷದ ಮರಿ ಕರಡಿ ಮೃತಪಟ್ಟವು.

ಭಾರಿ ಮಳೆ-ಗಾಳಿಗೆ ಜಮೀನಿನಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯ ಸಮೀಪದಲ್ಲೇ ಆಹಾರ ಅರಸಿ ಬರುತ್ತಿದ್ದ ವೇಳೆ ದುರ್ಘಟನೆ ನಡೆದಿದೆ.

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–560001.
ದೂರವಾಣಿ: 080–22867172 / 22866302 ಫ್ಯಾಕ್ಸ್: 080–22863576 /22861665
ಇ–ಮೇಲ್: sedmatech@gmail.com Website: www.municipaladmn.gov.in

ಸಂಖ್ಯೆ : 1350363DMA/TECH/INDC(TDR)/01//2024 ದಿನಾಂಕ : 08.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಇಂದಿರಾ ಕ್ಯಾಂಟೀನ್ ಯೋಜನೆಯಡಿ ಅಡುಗೆ ಉಪಕರಣ ಹಾಗೂ ಪೀಠೋಪಕರಣಗಳನ್ನು ಖರೀದಿಸಲು ಮೂರು ಕಂದಾಯ ವಿಭಾಗವಾರು ಈ ಕೆಳಕಂಡಂತೆ ಟೆಂಡರ್ ಕರೆಯಲು ಉದ್ದೇಶಿಸಲಾಗಿದೆ.

ಕ್ರ ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	Supply, Installation and Commissioning of Kitchen & Canteen Equipments to Indira Canteens in Urban Local Bodies Bangalore Urban, Bangalore Rural, Chikkaballapura, Kolar, Ramanagara, Tumkur, Chitradurga, Davanagere & Shivamogga Districts in Karnataka State (Package 1) (Indent No. DMA/2024-25/IND3680).	1708.88
2.	Supply, installation and Commissioning of Kitchen & Canteen Equipments to Indira Canteens in Urban Local Bodies Dharwad, Gadag, Haveri, Belagavi, Uttara Kannada, Bagalkote & Vijayapura Districts in Karnataka State (Package 3) (Indent No. DMA/2024-25/IND3685).	3476.55
3.	Supply, Installation and Commissioning of Kitchen & Canteen Equipments to Indira Canteens in Urban Local Bodies Ballari, Koppal, Raichur, Vijayanagar, Kalaburgi, Bidar & Yadgiri Districts in Karnataka State (Package 4) (Indent No. DMA/2024-25/IND3683).	1772.74

ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ ಪ್ರಚಾರಪಡಿಸಲಾಗಿದ್ದು, ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಆಸಕ್ತ ಬಿಡ್ / ಏಜೇನ್ಸಿದಾರರು ಭಾಗವಹಿಸಲು ಕೋರಲಾಗಿದೆ. ಯಾವುದೇ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರವೇ ಪಡೆಯುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.

DIPR/CP/2438/Zen/2024-25

ಕರ್ನಾಟಕ ಸರ್ಕಾರ

ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ. ಚಿಕ್ಕಮಗಳೂರು ಜಿಲ್ಲೆ

ಪ್ರಕಟಣೆ ಸಂಖ್ಯೆ: ಅಸಂಕಇ/ಹೊ.ಸಂ.ಸಿ.ಟೆ/ಸಿಆರ್–28/2024–25 ದಿನಾಂಕ : 07.10.2024

ಟೆಂಡರ್ ಪ್ರಕಟಣೆ

ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ನಿರ್ವಹಿಸಲಾಗುತ್ತಿರುವ ವಿದ್ಯಾರ್ಥಿನಿಲಯಗಳು/ ವಸತಿ ಶಾಲೆಗಳು ಹಾಗೂ ಜಿಲ್ಲಾ ಕಛೇರಿ/ತಾಲ್ಲೂಕು ಮಾಹಿತಿ ಕೇಂದ್ರಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಹೊರ ಸಂಪನ್ಮೂಲ ಏಜೆನ್ಸಿಯಿಂದ ಮಾನವ ಸೇವೆಯನ್ನು 2024–25 ನೇ ಸಾಲಿಗೆ ತಾತ್ಕಾಲಿಕವಾಗಿ ಪಡೆಯುವ ಸಲುವಾಗಿ ಟೆಂಡರನ್ನು Online System (www.kppp.karnataka.gov.in) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. 1) ಟೆಂಡರ್ ಇಟ್ಟ ಮೊತ್ತ ರೂ.124.00 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ.1.86 ಲಕ್ಷಗಳು 2) ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:07/10/2024. 3) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಹ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:21/10/2024. ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಜ್ಯೋತಿನಗರ, ಚಿಕ್ಕಮಗಳೂರು (ದೂರವಾಣಿ ಸಂಖ್ಯೆ:08262–295848) ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/–ಜಿಲ್ಲಾ ಅಧಿಕಾರಿ,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೊದಲನೇ ಮಹಡಿ,
ಮಹಾತ್ಮ ಗಾಂಧಿ ಕ್ರೀಡಾಂಗಣ, ಕುವೆಂಪುನಗರ, ತುಮಕೂರು.
E-mail ID;dcpo.tumkur@gmail.com Telephone No-0816-2956699

ಸಂ:ಜಿಮರಘ/ತು/ಹೊ.ಗು.ಸಿಬ್ಬಂದಿ/2024–25 ದಿನಾಂಕ: 30.09.2024

ಇ–ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ–1098, ಬಾಲಕಿಯರ ಬಾಲಮಂದಿರ, ಬಾಲಕರ ಬಾಲಮಂದಿರ, ಬಾಲನ್ಯಾಯ ಮಂಡಳಿ, ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಲು ವಿವಿಧ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ಸೇವೆ ಪಡೆಯಲು ಇ–ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್‌ನ ಅಂದಾಜು ಮೌಲ್ಯ: ರೂ.80.50ಲಕ್ಷ. **ಇ.ಎಂ.ಡಿ ಬಾಬ್ತು 1.60ಲಕ್ಷ**, ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭಿಕ ದಿನಾಂಕ:25.09.2024 ಆಸಕ್ತರು ದಿನಾಂಕ: 24.10.2024 ರೊಳಗಾಗಿ ಅವಶ್ಯಕ ದಾಖಲಾತಿಗಳನ್ನು https://kppp.karnataka.gov.in, ಮೂಲಕ ಅಪ್‌ಲೋಡ್ ಮಾಡಲು ತಿಳಿಸಿದೆ, ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಡಕ, ಮೊದಲನೇ ಮಹಡಿ, ಮಹಾತ್ಮಗಾಂಧಿ ಕ್ರೀಡಾಂಗಣ, ಕುವೆಂಪು ನಗರ ತುಮಕೂರು ದೂರವಾಣಿ ಸಂ: 0816–2956699 ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/356/KSMCA/2024-25

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯ ಮಂಡ್ಯ
ಜಿಲ್ಲಾಧಿಕಾರಿಗಳ ಆವರಣ.
ದೂ:08232–225073/228808 ಫ್ಯಾಕ್ಸ್ ಸಂ : 08232–223033
Emall:jdamandya@yahoo.com

ಸಂಖ್ಯೆ: ಜಂಕೃನಿಮಂ/ಸಿ–1/ಹೊರಗುತ್ತಿಗೆ/ಸಿಬ್ಬಂದಿ/2024–25
ದಿನಾಂಕ : 07.10.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕೃಷಿ ಇಲಾಖೆ, ಮಂಡ್ಯ ಜಿಲ್ಲೆಯ ವಿವಿಧ ಕಛೇರಿಗಳಿಗೆ ವಿವಿಧ ಯೋಜನೆಗಳಡಿ 2024–25ನೇ ಸಾಲಿಗೆ ಅವಶ್ಯಕವಾಗಿರುವ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಸುವ ಸಂಬಂಧ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು KPPP ತಂತ್ರಾಂಶದ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಹೊರಗುತ್ತಿಗೆ ಸೇವೆ ಸರಬರಾಜು ಸಂಸ್ಥೆಯವರು KPPP ತಂತ್ರಾಂಶದ ಮುಖಾಂತರ **ದಿನಾಂಕ:07.10.2024 ರಿಂದ ದಿನಾಂಕ:21.10.2024 ರವರೆಗೆ** ಆನ್‌ಲೈನ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in ಅನ್ನು ವೀಕ್ಷಿಸಬಹುದಾಗಿದೆ.

ಸಹಿ/–ಜಂಟಿ ಕೃಷಿ ನಿರ್ದೇಶಕರು, ಮಂಡ್ಯ ಜಿಲ್ಲೆ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/358/2024–25

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ–1/ಟೆಂಡರ–08/2024–25/2181 ದಿನಾಂಕ: 05–10–2024

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ–3) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 15–10–2024 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 16–10–2024 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 18–10–2024 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 19–10–2024 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕಶೀರ್ಷಿಕೆ 3054-Flood Damage During 2024-25 ವರ್ಷ

ಇಂಡೆಂಟ್: (1) PWD/2024-25/RD/WORK_INDENT14980

(ಕೆಡಬ್ಲ್ಯೂ–3) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ https://kppp.karnataka.gov.in ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/ADK/KSMCA/405/24-25 dt.08.10.2024

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910 ಫ್ಯಾಕ್ಸ್: 080–25536105
ಇ–ಮೇಲ್: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–692/2024–25 ದಿನಾಂಕ: 08.10.2024

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ)

ಇದೇ ದಿನಪತ್ರಿಕೆಯಲ್ಲಿ ದಿನಾಂಕ 24.09.2024 ರಂದು ಪ್ರಕಟಿಸಲಾಗಿದ್ದ ಇದೇ ಅಧಿಸೂಚನೆ ಸಂಖ್ಯೆಯ ಟೆಂಡರ್ ಅನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಸೇವಾದಾರರನ್ನು ಗುರುತಿಸಲು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl. No.	Name of the service	Quantity	EMD (Rs.)
01	Providing Hoarding service to KMF for a period of 3 months	Single job work as detailed in tender document	71,000/-

ಟೆಂಡರ್ ಪ್ರಾರಂಭವಾಗುವ ದಿನಾಂಕ : 08.10.2024 ರಿಂದ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 15.10.2024 ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 22.10.2024 ರ ಸಂಜೆ 5.00 ಗಂಟೆ ಒಳಗಾಗಿ. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ : 24.10.2024 ರಂದು ಬೆಳಿಗ್ಗೆ 11.00 ಗಂಟೆಗೆ. ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ.

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಮುಖ್ಯ ಚುನಾವಣಾಧಿಕಾರಿಯವರ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080–2224212, ಇ–ಮೇಲ್ : ceo.karnataka@gmail.com

ಸಂಖ್ಯೆ: DPARELE/2024-25/PREQUAL_TENDER_NUMBER_1 ದಿನಾಂಕ: 08.10.2024

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಕರ್ನಾಟಕ ಸಾರ್ವತ್ರಿಕ ವಿಧಾನಸಭಾ ಚುನಾವಣೆ–2023 ಮತ್ತು ಸಾರ್ವತ್ರಿಕ ಲೋಕಸಭಾ ಚುನಾವಣೆ–2024ರ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಮತದಾರರ ಮೂಲ ಜ್ಞಾನ, ವರ್ತನೆ, ಅಭ್ಯಾಸಗಳ (ಸಮೀಕ್ಷೆಗಳ) Knowledge, Attitude, Practices Endline Surveyಯ ಕುರಿತು ಅಧ್ಯಯನ ನಡೆಸಿ ಅಂತಿಮ ವರದಿ ಸಲ್ಲಿಸುವ ಸಂಬಂಧ ಇ–ಟೆಂಡರ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಈ ಸಂಬಂಧ ಅಧಿಸೂಚನೆಯನ್ನು ಮೇಲೆ ತಿಳಿಸಲಾಗಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಆಸಕ್ತ ಸಂಸ್ಥೆಗಳು / ಬಿಡ್‌ದಾರರು ಬಿಡ್ ಅನ್ನು **ದಿನಾಂಕ: 18.10.2024ರ ಸಂಜೆ 05:00 ಗಂಟೆಯೊಳಗಾಗಿ** ಸಲ್ಲಿಸುವಂತೆ ಪ್ರಕಟಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–22224212ನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ಸರ್ಕಾರದ ಅಧೀನ ಕಾರ್ಯದರ್ಶಿ

ವಾಸಾಸಂಇ/ವಾಪ್ರ/ಜಿಎ/2435/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಅರಣ್ಯ ಸಂರಕ್ಷಣಾಧಿಕಾರಿ ರವರ ಕಚೇರಿ,
ಅನೆಕ್ಸ್ –3 ಬಿಲ್ಡಿಂಗ್, ಎನ್.ಆರ್.ಚೌಕ, ಬಿಬಿಎಂಪಿ ಕೇಂದ್ರ ಕಚೇರಿ, ಬೆಂಗಳೂರು.

ಸಂಖ್ಯೆ: ಉಅಸಂ/ಟೆಂಡರ್/ಬಿಬಿ01/2024–25 ದಿನಾಂಕ: 09.10.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, (ಈ ದಾಖಲೆಗಳಲ್ಲಿ ಮಾಲೀಕರು ಎಂದು ಉಲ್ಲೇಖ), ಇವರು ಕೆಟಿಪಿಪಿ ನಿಯಮಗಳು 2000ರ ಅನುಸಾರ ಅನುಷ್ಠಾನಗೊಳಿಸಲು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಅನುಭವವುಳ್ಳ ವ್ಯಕ್ತಿ/ಏಜೆನ್ಸಿಗಳು/ಸಂಸ್ಥೆಗಳಿಂದ (ಈ ದಾಖಲೆಗಳಲ್ಲಿ ಗುತ್ತಿಗೆದಾರರು ಎಂದು ಉಲ್ಲೇಖ) ಉದ್ಯಾನವನಗಳ ನಿರ್ವಹಣೆಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿ ಹೆಸರು
1	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮರಗಳ ಉದ್ಯಾನವನಗಳ ಅಭಿವೃದ್ಧಿ (ಜಿಎಸ್‌ಟಿ ಹೊರತುಪಡಿಸಿ). **ಮೊತ್ತ:** ರೂ.9,84,00,000/–. **ಇಎಂಡಿ:** ರೂ.14,76,000/–. **ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿ:** 6 ತಿಂಗಳು. **ಪ್ರವರ್ಗ:** ಜಿಎಂ

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಪ್ರಕಟಣೆ ದಿನಾಂಕ: **09–10–2024**. 2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ **18.10.2024ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 3) ಪೂರ್ವಭಾವಿ ಸಭೆ ದಿನಾಂಕ: **23–10–2024 ಬೆಳಿಗ್ಗೆ 11.30 ಗಂಟೆಗೆ**. 4) ಟೆಂಡರ್ ಮುಕ್ತಾಯದ ದಿನಾಂಕ: **29–10–2024 ಸಂಜೆ 04.30 ಗಂಟೆಗೆ**. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **04–11–2024 ಸಂಜೆ 04.30 ಗಂಟೆಗೆ**. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆ ನಂತರ**.

ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಕಚೇರಿಯನ್ನು ಎಲ್ಲಾ ದಿವಸಗಳಂದು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಪಡೆಯಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೃಬೆಂಮಪಾ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕ.ವಿ.ನಿ.ಆ/ಉ.ನಿ(ಪಿ)/ಬಂಡವಾಳ ಯುಕ್ತತೆ/ಕ–1/2024–25/759 ದಿನಾಂಕ: 08.10.2024

ದರಖಾಸ್ತು ಪ್ರಕಟಣೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು ರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಸಲಹೆಗಾರರು / ಸಂಸ್ಥೆಗಳಿಂದ **ಬೆಸ್ಕಾಂನ ಬಂಡವಾಳ ಹೂಡಿಕೆಗಳ ಯುಕ್ತತೆ (ಪ್ರೂಡೆನ್ಸ್)ಯ** ಪರಿಶೀಲನೆಗಾಗಿ ಟೆಂಡರ್ ಕರೆಯಲಾಗಿದೆ.

ಒಪ್ಪಂದದ ನಿಯಮ ಮತ್ತು ಷರತ್ತುಗಳು, ಬಿಡ್ಡರ್‌ಗಳ ಅರ್ಹತಾ ಅವಶ್ಯಕತೆ, ಮಾನದಂಡಗಳು ಮತ್ತು ಸೇವೆಗಳ ವ್ಯಾಪ್ತಿ ಒಳಗೊಂಡ **ಬಿಡ್ ಡಾಕ್ಯುಮೆಂಟ್‌ಗಳ** ವಿದ್ಯುನ್ಮಾನ ಪ್ರತಿಗಳ ವಿವರಗಳನ್ನು ದಿನಾಂಕ: **09.10.2024ರ ಮಧ್ಯಾಹ್ನ 12.30 ಘಂಟೆಯಿಂದ** ಅಂತರ್ಜಾಲ ತಾಣದಲ್ಲಿ https://kppp.karnataka.gov.in ಲಭ್ಯವಿರಿಸಲಾಗಿರುತ್ತದೆ. ಈ ಟೆಂಡರ್‌ನಲ್ಲಿ ಭಾಗವಹಿಸಲು **23.10.2024 ಬೆಳಿಗ್ಗೆ 11.00 ಘಂಟೆಯವರೆಗೆ** ಸಮಯವಿರುತ್ತದೆ.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಆಯೋಗದ ದೂರವಾಣಿ ಸಂಖ್ಯೆ: 080–22268677 / 78 / 79 Extn.No.211 ಮೂಲಕ ಪಡೆಯಬಹುದು.

ಸಹಿ/– ಉಪನಿರ್ದೇಶಕರು (ಆಡಳಿತ)
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

DIPR/CP/2434/2024-25

KMF ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ.,

ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ ಬಿ ರಸ್ತೆ, ವಿದ್ಯಾಗಿರಿ ಅಂಚೆ, ಧಾರವಾಡ–580004
☎:-0836-2467603, 2468380 E-mail : dharwarnin@gmail.com

ಐಎಫ್‌ಟಿ ಸಂಖ್ಯೆ:–KMF/2024-25/IND1011 ದಿನಾಂಕ:–07-10-2024

ಇ–ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ., (ಧಾಮುಲ್) ಧಾರವಾಡವು **"Supply, Installation, Testing and Commissioning of Inbed Coils, refractory and insulation for 8 TPH Coal Fired Boiler on Turnkey basis"** ಕೆಲಸಕ್ಕಾಗಿ ಮೂಲ ಉತ್ಪಾದಕರಿಂದ/ ಅಧಿಕೃತ ಡೀಲರ್ / ಅರ್ಹ ಪೂರೈಕೆದಾರರಿಂದ ಇ–ಟೆಂಡರ ಆಹ್ವಾನಿಸಲಾಗಿರುತ್ತದೆ. ಟೆಂಡರುದಾರರು ಟೆಂಡರ ಸಲ್ಲಿಸುವ ಪೂರ್ವದಲ್ಲಿ ತಮ್ಮ ಸ್ವಂತ ವೆಚ್ಚದಲ್ಲಿ ಸ್ಥಳ ಪರಿವೀಕ್ಷಿಸಿ ಟೆಂಡರ ಸಲ್ಲಿಸುವುದಾಗಿದೆ.

ಇ–ಟೆಂಡರ ಪ್ರೊಸೆಸಿಂಗ್ ಶುಲ್ಕ (ಮರು ಪಾವತಿಸಲಾಗದ) ಮತ್ತು ಇಎಂಡಿ (ಗಳಿಕೆ ಠೇವಣಿ) ಮೊತ್ತ ರೂ. 60,000/– ವನ್ನು ಇ–ಪೋರ್ಟಲ್ ನಿಯಮಾನುಸಾರ ಟೆಂಡರ ದಾಖಲಾತಿಯಲ್ಲಿ ನಮೂದಿಸಿದಂತೆ ಪಾವತಿಸಬಹುದಾಗಿದೆ. ಟೆಂಡರ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಲ್ಲಿ ಲಾಗ್ ಇನ್ ಆಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಅಥವಾ ಸಹಾಯವಾಣಿ ಸಂಖ್ಯೆ:– 080–46010000 / 68948777, ಇ–ಮೇಲ್:-support@eprochelpdsk.comರ ಮೂಲಕ ಸಂಪರ್ಕಿಸಬಹುದು ಮತ್ತು ಉಳಿದ ಮಾಹಿತಿಯನ್ನು ಟೆಂಡರ ದಾಖಲಾತಿಯಲ್ಲಿ ನೋಡಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.

1	ಇ–ಪೋರ್ಟಲ್ ಜಾಲತಾಣದಿಂದ ಟೆಂಡರ ದಾಖಲಾತಿ ಲಭ್ಯವಾಗುವ ದಿನಾಂಕ	ದಿ:– 08.10.2024 ರಿಂದ ದಿ:– 11.11.2024 ರ ಸಂಜೆ 4 ಗಂಟೆಗಿಂತ ಮೊದಲು
2	ಇ–ಟೆಂಡರ ಸಲ್ಲಿಸುವ ಕೊನೆಯ ದಿನಾಂಕ & ವೇಳೆ	ದಿ:– 11.11.2024, ರಂದು ಸಂಜೆ 4.00 ರ ವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	ದಿ:– 12.11.2024, ರಂದು ಸಂಜೆ 04.30 ರ ನಂತರ
4	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	ದಿ:– 15.11.2024, ರಂದು ಬೆಳಿಗ್ಗೆ 11.00 ರ ನಂತರ

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

VTPC KARNATAKA ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ(ವಿ.ಟಿ.ಪಿ.ಸಿ)

(ರಾಜ್ಯ ಸರ್ಕಾರದ ರಫ್ತು ಉತ್ತೇಜನ ಸಂಸ್ಥೆ)
ವಿಟಿಪಿಸಿ ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು –560001 ದೂ: 080–22860644/ 9483534444, ಇ–ಮೇಲ್: vtpckarnataka@gmail.com

ಸಂಖ್ಯೆ: ವಿಟಿಪಿಸಿ/ಸನಿ/ಐಐಟಿಎಫ್–2024/2024–25 ದಿನಾಂಕ: 07.10.2024

ನವದೆಹಲಿಯ ಭಾರತ್ ಮಂಡಪಂನಲ್ಲಿ ಐಐಟಿಎಫ್ –2024ರಲ್ಲಿ "ಕರ್ನಾಟಕ ಪೆವಿಲಿಯನ್" ನಿರ್ಮಾಣಕ್ಕಾಗಿ ಇ-ಟೆಂಡರ್ ಆಹ್ವಾನ

ನವದೆಹಲಿಯ ಭಾರತ್ ಮಂಡಪಂನಲ್ಲಿ ದಿನಾಂಕ: 14.11.2024 ರಿಂದ 27.11.2024 ರವರೆಗೆ ನಡೆಯಲಿರುವ ಐಐಟಿಎಫ್–2024ರಲ್ಲಿ ಕರ್ನಾಟಕ ಪೆವಿಲಿಯನ್ ನಿರ್ಮಿಸಲು ಗುತ್ತಿಗೆದಾರರನ್ನು ಆಯ್ಕೆ ಮಾಡಲು ಇ-ಟೆಂಡರ್ ಆಹ್ವಾನಿಸಿದೆ. ವಿವರವಾದ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್: https://kppp.karnataka.gov.in/ ನಿಂದ ಪಡೆದುಕೊಳ್ಳಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25.10.2024, ಸಂಜೆ 5.30 ಗಂಟೆ.

ಸಹಿ/- ನಿರ್ದೇಶಕರು (ರಫ್ತು) ಹಾಗೂ ವ್ಯವಸ್ಥಾಪಕ ನಿರ್ದೇಶಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ದಕ್ಷಿಣ–ದಕ್ಷಿಣ ವಲಯ ಕಚೇರಿ,
9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 11.

ಸಂಖ್ಯೆ: ಕಾಪಾಅ(ದ)/ಕೆಪಿಪಿ/ಇ–ಪೋರ್ಟಲ್/10/2024–25 ದಿನಾಂಕ: 08.10.2024

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಈ ಕೆಳಕಂಡ ಕಾಮಗಾರಿಗೆ ಅರ್ಹ ಟೆಂಡರುದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ಚಿಕ್ಕಪೇಟೆ ಕ್ಷೇತ್ರದಲ್ಲಿ ವಿಲ್ಸನ್ ಗಾರ್ಡನ್ ಚಿತಾಗಾರದ ಯಾಂತ್ರೀಕೃತ ಕಾಮಗಾರಿಗಳನ್ನು ಸುಧಾರಣೆ ಮಾಡುವುದು. **ಟೆಂಡರಿಗಿಟ್ಟ ಅಂದಾಜು ಮೊತ್ತ ₹.57,40,000.00, ಇಎಂಡಿ: ₹.1,14,800/–**
2	ಚಿಕ್ಕಪೇಟೆ ಕ್ಷೇತ್ರದಲ್ಲಿ ವಿಲ್ಸನ್ ಗಾರ್ಡನ್ ಚಿತಾಗಾರದ ಸಿವಿಲ್ ಕಾಮಗಾರಿಗಳನ್ನು ಸುಧಾರಣೆ ಮಾಡುವುದು. **ಟೆಂಡರಿಗಿಟ್ಟ ಅಂದಾಜು ಮೊತ್ತ ₹.68,88,000.00, ಇಎಂಡಿ: ₹.1,37,760/–**
3	ವಾರ್ಡ್ ಸಂಖ್ಯೆ–163, ಜಯನಗರ 2ನೇ ಬ್ಲಾಕ್‌ನಲ್ಲಿ ದಕ್ಷಿಣ ವಲಯ ಅಭಿಯಂತರ ಇಲಾಖೆ ಕಚೇರಿಗಳನ್ನು ನವೀಕರಣ ಮಾಡುವುದು. **ಟೆಂಡರಿಗಿಟ್ಟ ಅಂದಾಜು ಮೊತ್ತ ₹.61,50,000.00, ಇಎಂಡಿ: ₹.1,23,000/–**

ಟೆಂಡರ್ ವೇಳಾಪಟ್ಟಿ: (1). ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 09.11.2024ರ ಮಧ್ಯಾಹ್ನ 3:00 ಗಂಟೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 29.10.2024ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 09.11.2024ರ ಮಧ್ಯಾಹ್ನ 3:00 ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 11.11.2024ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ಅಥವಾ ದಿನಾಂಕ 13.11.2024ರ ಸಂಜೆ 5:00 ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಯೋಜನೆ ದಕ್ಷಿಣ, ದಕ್ಷಿಣ ವಲಯ

ಮಹಾನಗರ ಪಾಲಿಕೆ, ಕಲಬುರಗಿ

ದೂ. 08472/ 278675 ಫ್ಯಾಕ್ಸ : 08472 / 260776 ಇ ಮೇಲ್– itstaff_ulb_gulbarga@yahoo.com

No: KMP/EE/TS-02/ 15th FC/SFC D.W/08/2024-25 ದಿನಾಂಕ: 07.10.2024

:: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ : ಕಲಬುರಗಿ ಮಹಾನಗರ ಪಾಲಿಕೆಯಿಂದ 2024–25ನೇ ಸಾಲಿನ 15ನೇ ಹಣಕಾಸು, 2020–21 ರಿಂದ 2022–23ನೇ ಸಾಲಿನ 15ನೇ ಹಣಕಾಸು ಉಳಿತಾಯ ಮೊತ್ತದ ಕ್ರಿಯಾ ಯೋಜನೆ ಮತ್ತು 2023–24ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಯೋಜನೆಯ ಮೊತ್ತದ ಅನುದಾನದಲ್ಲಿ ಅನುಮೋದನೆಗೊಂಡ ಒಟ್ಟು (16) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ–1, 2&3 ರ ಮೂಲಕ 15 ದಿನಗಳ ಟೆಂಡರ್‌ನ್ನು ದ್ವಿ ಲಕೋಟೆಯಲ್ಲಿ (Two Cover) ಟೆಂಡರವನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಕನಿಷ್ಠ ಮೊತ್ತ **ರೂ. 2.50 ಲಕ್ಷಗಳು** ಹಾಗೂ ಗರಿಷ್ಠ ಮೊತ್ತ **ರೂ. 150.00 ಲಕ್ಷಗಳು**. 3) ಗುತ್ತಿಗೆದಾರರ ಅರ್ಹತೆ ವಿವರ: 3&4ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್–2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಕನಿಷ್ಠ ರೂ. 2,700.00 ಗಳು ಹಾಗೂ ಗರಿಷ್ಠ ರೂ. 1,90,600.00 ಗಳು. 5) ಪೂರ್ವಭಾವಿ ಸಭೆ ದಿನಾಂಕ: **28.10.2024 ರಂದು ಬೆಳಿಗ್ಗೆ 11:00 ಗಂಟೆಗೆ.** 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **28.10.2024 ರಂದು ಸಾಯಂಕಾಲ 4:30 ಗಂಟೆಗೆ.** 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **29.10.2024 ರಂದು ಸಾಯಂಕಾಲ 04:35 ಗಂಟೆಗೆ.** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **30.10.2024 ರಂದು ಬೆಳಿಗ್ಗೆ 11:30 ಗಂಟೆಗೆ** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ : ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ **http://www.kalaburagicity.mrc.gov.in/**

Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/499/ಕೆ.ಎಸ್.ಎಂ.ಸಿ.&ಎ/2024–25

ಪೊಲೀಸ್ ಇಲಾಖೆ

ಪೊಲೀಸ್ ಮಹಾ ನಿರ್ದೇಶಕರವರ ಕಛೇರಿ, ಸಿ.ಐ.ಡಿ. ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು,
ಕಾರ್ಲ್‌ಟನ್ ಭವನ, ಅರಮನೆ ರಸ್ತೆ, ಬೆಂಗಳೂರು–560 001.

ಸಂಖ್ಯೆ: 08/ಸಂಗ್ರಹ–1/ಸಿಸಿಡಿ&ಸಿಐಡಿಅಪ್‌ಗ್ರೇಡೇಷನ್/ಸಿಐಡಿ/2023–24(Vol-II) ದಿನಾಂಕ: 08.10.2024

ಇ–ಖರೀದಿ ನೋಟೀಸ್

ಸಿಐಡಿ ಕಛೇರಿಗೆ ಅವಶ್ಯವಿರುವ ಕೆಳಕಂಡ ಸಾಫ್ಟ್‌ವೇರ್ / ಪರಿಕರಗಳನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ (www.eproc.karnataka.gov.in) ಇ–ಟೆಂಡರ್ ಪ್ರಕ್ರಿಯೆ ಮೂಲಕ ಖರೀದಿಸಲು ಟೆಂಡರ್‌ಗೆ ಅರ್ಜಿಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

Sl. No.	Tender No.	Name of the Item / Component	Qty	Approximate Cost in Rs.	Last Date for Bid submission
1	KSP/2024-25/IND0181	Upgradation of Network and Providing IT Infrastructure to CID (License for 03 Years)	01 No.	45,00,000/-	28.10.2024 at 17.00 Hours
2	KSP/2024-25/SE0036	Digitization & Archiving (License for 03 Years)	01 No.	1,00,00,000/-	
3	KSP/2024-25/IND0180	Upgradation of Case Management System software (License for 03 Years)	01 No.	45,00,000/-	

ಮೇಲಿನ ಸಾಫ್ಟ್‌ವೇರ್ / ಪರಿಕರಗಳನ್ನು ಸರಬರಾಜು ಮಾಡಲು ಇಚ್ಚಿಸುವವರು ಇ–ಖರೀದಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬೇಕು. ಇ–ಖರೀದಿಯ ಬಗ್ಗೆ ತರಬೇತಿಯ ಕಾರ್ಯಕ್ರಮವನ್ನು ಇ–ಖರೀದಿ ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸಲಾಗುತ್ತಿದ್ದು, ಎಲ್ಲಾ ಸರಬರಾಜುದಾರರು ದೂರವಾಣಿ ಸಂಖ್ಯೆ 080–46010000, 080–68948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಖರೀದಿ ಫ್ಲಾಟ್‌ಫಾರಂನಲ್ಲಿ ನೊಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ https://eproc.karnataka.gov.in ಅಥವಾ ಹೆಲ್ಪ್‌ಲೈನ್ ಸಂಖ್ಯೆ: 080–46010000, 080–68948777 ಗಳಿಗೆ ಸಂಪರ್ಕಿಸತಕ್ಕದ್ದು.

ಸಹಿ/–
ಪೊಲೀಸ್ ಮಹಾ ನಿರ್ದೇಶಕರ ಪರವಾಗಿ
ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು

ವಾಸಸಂಇ/ಸಿಪಿ/ಎಎಎ/2397/2024–25

ಜಮ್ಮು–ಕಾಶ್ಮೀರ, ಹರಿಯಾಣದಲ್ಲಿನ ಸೋಲಿನಿಂದ 'ಇಂಡಿಯಾ' ಕೂಟದಲ್ಲಿ ಕುಗ್ಗಿದ ಪ್ರಭಾವ

ಕಾಂಗ್ರೆಸ್ ಮುಂದಿವೆ ಹಲವು ಸವಾಲು

• ಶೆಮಿನ್ ಜಾಯ್

ನವದೆಹಲಿ: ಒಂದು ದಶಕದ ಚುನಾವಣಾ ಹಿನ್ನಡೆಯ ನಂತರ ಲೋಕಸಭಾ ಚುನಾವಣೆಯ ಫಲಿತಾಂಶದಿಂದ ಕಾಂಗ್ರೆಸ್ ಆತ್ಮವಿಶ್ವಾಸ ಮರಳಿ ಪಡೆದಿತ್ತು. ಆದರೆ, ನಾಲ್ಕು ತಿಂಗಳ ನಂತರ ನಡೆದಿರುವ ಎರಡು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶವು ಪಕ್ಷಕ್ಕೆ ಸಂಭ್ರಮವನ್ನೇನೂ ತಂದಿಲ್ಲ. ಹರಿಯಾಣದಲ್ಲಿ ಮತ್ತೆ ಅಧಿಕಾರಕ್ಕೇರುವ ಅವಕಾಶವನ್ನು ಪಕ್ಷ ಕೈಚೆಲ್ಲಿದ್ದರೆ, ಜಮ್ಮು–ಕಾಶ್ಮೀರದಲ್ಲಿ ಮಿತ್ರಪಕ್ಷದ ಮೂಲಕ ಅಧಿಕಾರಕ್ಕೇರುವ ಹಾದಿಯಲ್ಲಿದ್ದರೂ, ಚುನಾವಣೆಯಲ್ಲಿ ಗಮನಾರ್ಹ ಸಾಧನೆ ಮಾಡುವಲ್ಲಿ ವಿಫಲವಾಗಿದೆ.

ಕಳೆದ ಲೋಕಸಭಾ ಚುನಾವಣೆಯ ಸಾಧನೆಯಿಂದ ಕಾಂಗ್ರೆಸ್, ಮಿತ್ರಪಕ್ಷಗಳಲ್ಲಿ ಗೌರವದ ಸ್ಥಾನ ಗಳಿಸಿತ್ತು. ಆದರೆ, ಈ ಫಲಿತಾಂಶವು 'ಇಂಡಿಯಾ' ಕೂಟದಲ್ಲಿ ಪಕ್ಷದ ಪ್ರಭಾವವನ್ನು ಕುಗ್ಗಿಸಿದೆ. ಇದು ಮುಂಬರುವ ಮಹಾರಾಷ್ಟ್ರ ಮತ್ತು ಜಾರ್ಖಂಡ್ ಚುನಾವಣೆಗಳ ಮೇಲೆ ಪರಿಣಾಮ ಬೀರಲಿದ್ದು, ಹೆಚ್ಚು ಹೊಂದಾಣಿಕೆ ಮಾಡಿಕೊಳ್ಳುವಂತೆ 'ಹಿರಿಯಣ್ಣ'ನನ್ನು ಒತ್ತಾಯಿಸಲು ಮಿತ್ರಪಕ್ಷಗಳಿಗೆ ಇದು ಅವಕಾಶ ಒದಗಿಸಿದೆ.

ಉತ್ತರ ಪ್ರದೇಶದಲ್ಲಿ 10 ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದ್ದು, ಅವುಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಪಕ್ಷಕ್ಕೆ ಬಿಟ್ಟುಕೊಡುವಂತೆ ಸಮಾಜವಾದಿ ಪಕ್ಷವನ್ನು ಒತ್ತಾಯಿಸುವ ಅವಕಾಶವನ್ನು ಕಾಂಗ್ರೆಸ್ ಕಳೆದುಕೊಳ್ಳುತ್ತದೆ. ಕಾಂಗ್ರೆಸ್ ಬಿಜೆಪಿಯೊಂದಿಗೆ ಏಕಾಂಗಿಯಾಗಿ ಸೆಣಸಲಾರದು ಎನ್ನುವ ನಿರೂಪಣೆ ವಾಸ್ತವವಲ್ಲ ಎನ್ನುವುದನ್ನೂ, ಲೋಕಸಭಾಚುನಾವಣೆಫಲಿತಾಂಶಅಪವಾದವಲ್ಲ ಎನ್ನುವುದನ್ನೂ ಸಾಬೀತುಪಡಿಸುವುದು ಪಕ್ಷಕ್ಕೆ ಸವಾಲಾಗಲಿದೆ. ಸಂಸತ್‌ನಲ್ಲಿ ಕಳೆದ ಕೆಲವು ತಿಂಗಳಲ್ಲಿ ವಿಪಕ್ಷವು ಮೇಲುಗೈ ಸಾಧಿಸಿದ್ದು, ಅದು ಹಾಗೆಯೇ ಮುಂದುವರಿಯುವುದನ್ನು ಕಾಂಗ್ರೆಸ್ ಖಾತರಿಪಡಿಸಿಕೊಳ್ಳಬೇಕಾಗಿದೆ.

ಪಕ್ಷವು ಲೋಕಸಭಾ ಚುನಾವಣೆಯ ಫಲಿತಾಂಶದ ನಿರೂಪಣೆಯನ್ನು ಬಲಪಡಿಸುವಲ್ಲಿ ಮತ್ತು ಜನರ ಆ ವಿಶ್ವಾಸವನ್ನು ಉಳಿಸಿಕೊಂಡು, ಅದರ ಲಾಭ ಪಡೆಯುವಲ್ಲಿ ವಿಫಲವಾಗಿದೆ; ಗುಂಪುಗಾರಿಕೆ, ಅಭ್ಯರ್ಥಿ ಆಯ್ಕೆಯಲ್ಲಿನ ಗೊಂದಲ ಮತ್ತು ಆಂತರಿಕ ಕಿತ್ತಾಟವನ್ನು ತಡೆಯದೇ ಹೋದದ್ದು ಪಕ್ಷಕ್ಕೆ ದುಬಾರಿಯಾಗಿ ಪರಿಣಮಿಸಿದೆ.

ಜಮ್ಮು–ಕಾಶ್ಮೀರದಲ್ಲಿ ಕಾಂಗ್ರೆಸ್ ಆರು ಸ್ಥಾನಗಳಿಗೆ ಕುಸಿದಿದ್ದು, ಬಿಜೆಪಿ ಪ್ರಮುಖ ವಿರೋಧಿಯಾಗಿದ್ದ ಜಮ್ಮು ಪ್ರಾಂತ್ಯದಲ್ಲಿ ಕೇವಲ ಒಂದು ಸ್ಥಾನ ಗಳಿಸಿದೆ. ಎನ್‌ಸಿ ಜತೆ ಜಗಳ ಮಾಡಿಕೊಂಡಿದ್ದ ಪಕ್ಷವು ಕಾಶ್ಮೀರ ಕಣಿವೆಯ ಆರು ಸ್ಥಾನಗಳಿಗೆ ಹೊಂದಾಣಿಕೆಯ ಹೋರಾಟ ನಡೆಸಿತ್ತು. ರಾಹುಲ್ ಗಾಂಧಿ ಅವರ ಭಾರತ್ ಜೋಡೊ ಯಾತ್ರೆಯ ಮೇಲೆ ಪಕ್ಷವು ಭರವಸೆ ಹೊಂದಿತ್ತು. ಬಿಜೆಪಿಯಂತೆ ಕಾಂಗ್ರೆಸ್ ಕೂಡ 370ನೇ ವಿಧಿಯಂತಹ ವಿವಾದಾತ್ಮಕ ಅಂಶಗಳ ಬಗ್ಗೆ ಚುನಾವಣೆಯಲ್ಲಿ ಪ್ರಸ್ತಾಪಿಸಲಿಲ್ಲ. ಪಕ್ಷೇತರರನ್ನು ಮತ್ತು ಬಿಜೆಪಿಗೆ ಹತ್ತಿರ ಇರುವ ಮತ್ತು ಅದರ ಬದಲಿಯಂತೆ ಇರುವ ಪಕ್ಷಗಳನ್ನು ತಿರಸ್ಕರಿಸಿರುವ ಕಣಿವೆಯ ಮತದಾರರು, ನ್ಯಾಷನಲ್ ಕಾನ್ಫರೆನ್ಸ್ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದಾರೆ.

ಜಮ್ಮು–ಕಾಶ್ಮೀರದಲ್ಲಿ ಕಾಂಗ್ರೆಸ್ ಕಿರಿಯ ಮಿತ್ರ ಪಕ್ಷವಾಗಿದ್ದರೆ, ಹರಿಯಾಣದಲ್ಲಿ ಹಿರಿಯ ಮಿತ್ರ ಪಕ್ಷವಾಗಿತ್ತು. ಆದರೆ, 'ಇಂಡಿಯಾ' ಕೂಟದ ಮಿತ್ರ-ಪಕ್ಷಗಳನ್ನು ಜತೆಗೆ ಸೇರಿಸಿಕೊಳ್ಳುವ ವಿಚಾರದಲ್ಲಿ ಎಡವಿತು; ಸಿಪಿಎಂಗೆ ಒಂದು ಸ್ಥಾನ ನೀಡಿತು. ಎಎಪಿ ಮತ್ತು ಸಿಪಿಐ ಮಾತುಕತೆಗೆ ಬಂದರೂ, ಆ ಪಕ್ಷಗಳಿಗೆ ರಾಜ್ಯದಲ್ಲಿ ನೆಲೆ ಇಲ್ಲ ಎನ್ನುವ ಕಾರಣ ನೀಡಿ ಪಕ್ಷವು ಮೊಂಡುತನ ಪ್ರದರ್ಶಿಸಿತು.

ಜಾಟ್ ಸಮುದಾಯದ ಭೂಪಿಂದರ್ ಹೂಡಾ ಬಣದವರು 70ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಮೂಲಕ ಮೇಲುಗೈ ಸಾಧಿಸಿದರೆ, ದಲಿತ ಸಮುದಾಯದ ಕುಮಾರಿ ಸೆಲ್ಜಾ ಬಣವನ್ನು ಕಡೆಗಣಿಸಲಾಗಿತ್ತು. ವರಿಷ್ಠರ ಮೇಲೆ ಮುನಿಸಿಕೊಂಡಿದ್ದ ಕುಮಾರಿ ಸೆಲ್ಜಾ ಆರಂಭದಲ್ಲಿ ಪ್ರಚಾರಕ್ಕೆ ಬಾರದೇ ಇದ್ದುದು ಪಕ್ಷಕ್ಕೆ ಹೊಡೆತ ನೀಡಿತು. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜತೆಗಿದ್ದ ದಲಿತರು ಈ ಚುನಾವಣೆಯಲ್ಲಿ ಬಿಜೆಪಿಯತ್ತ ವಾಲಿದರು.

'ಒಬ್ಬ ವ್ಯಕ್ತಿ, ಒಂದು ಜಾತಿ'ಗೆ ಸೋಲು: ಹೂಡಾಗೆ ಪಾಠ

ಫಲಿತಾಂಶವು ಹೂಡಾ ಅವರಿಗೂ ಒಂದು ಪಾಠವಾಗಿದ್ದು, 'ಒಬ್ಬ ವ್ಯಕ್ತಿ, ಒಂದು ಜಾತಿ' ಪ್ರಾಬಲ್ಯವು ಕೆಲಸಕ್ಕೆ ಬಾರದು ಎನ್ನುವ ಸಂದೇಶ ರವಾನಿಸಿದೆ. ಬಿಜೆಪಿ ಪ್ರಾಬಲ್ಯ ಸಾಧಿಸಿದರೆ ತಮ್ಮ ಸಾಂವಿಧಾನಿಕ ಹಕ್ಕುಗಳನ್ನು ನಿರ್ಬಂಧಿಸಲಾಗುತ್ತದೆ ಎನ್ನುವ ಭಯದಿಂದ ಮತದಾರರು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಇದೇ ರೀತಿ ಸೋಲಿಸಿದ್ದರು.

ಪಕ್ಷದಲ್ಲಿ ತೀವ್ರಗೊಂಡಿದ್ದ ಗುಂಪುಗಾರಿಕೆ ಮತ್ತು ಚುನಾವಣಾ ನಿರೂಪಣೆ ರೂಪಿಸುವುದು ಸೇರಿದಂತೆ ಹಲವು ವಿಚಾರಗಳಲ್ಲಿ ಪಕ್ಷದಲ್ಲಿ ಹೊಂದಾಣಿಕೆ ಇಲ್ಲದಿರುವ ಬಗ್ಗೆ ರಾಹುಲ್ ಗಾಂಧಿ ಅವರು ಬೇಸತ್ತಿದ್ದರು ಎನ್ನಲಾಗುತ್ತಿದೆ. ಇದೇನೇ ಇದ್ದರೂ, ಅವರು ಜವಾಬ್ದಾರಿಯಿಂದ ನುಣುಚಿಕೊಳ್ಳುವಂತಿಲ್ಲ. ಹೂಡಾ ಸೇರಿದಂತೆ ಸ್ಥಳೀಯ ನಾಯಕರನ್ನು ನಿಯಂತ್ರಿಸಲು ಅವರು ಮುಂದಾಗಲಿಲ್ಲ. ಫಲಿತಾಂಶದಲ್ಲಿ ಹಿನ್ನಡೆ-ಯಾಗಿರುವುದು ಒಂದು ಕಡೆ ಆದರೆ, ಇದು ಅವರ ವಿರೋಧ ಪಕ್ಷದ ನಾಯಕನ ಸ್ಥಾನದ ಮೇಲೆ ಪರಿಣಾಮ ಬೀರುವುದೇ ಎನ್ನುವ ಪ್ರಶ್ನೆಯೂ ಹುಟ್ಟಿಕೊಂಡಿದೆ.

ಚುನಾವಣಾ ಅಖಾಡದಲ್ಲಿ ವಿನೇಶ್ ಫೋಗಟ್‌ಗೆ ಗೆಲುವು

ವಿನೇಶ್ ಫೋಗಟ್

ಚಂಡೀಗಢ (ಪಿಟಿಐ): ಕಾಂಗ್ರೆಸ್ ಅಭ್ಯರ್ಥಿ, ಕುಸ್ತಿಪಟು ವಿನೇಶ್ ಫೋಗಟ್ ಅವರು ಹರಿಯಾಣದ ಜುಲಾನಾ ವಿಧಾನಸಭೆ ಕ್ಷೇತ್ರದಲ್ಲಿ ಚೊಚ್ಚಲ ಗೆಲುವು ಸಾಧಿಸಿದ್ದಾರೆ.

ಫೋಗಟ್ ಅವರು ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಯೋಗೇಶ್ ಕುಮಾರ್ ಅವರನ್ನು 6,015 ಮತಗಳ ಅಂತರದಿಂದ ಸೋಲಿಸಿದ್ದಾರೆ. ಫೋಗಟ್ ಅವರು 65,080 ಮತಗಳನ್ನು ಪಡೆದಿದ್ದರೆ, ಬಿಜೆಯ ಯೋಗೇಶ್ ಕುಮಾರ್ 59,065 ಮತಗಳನ್ನು ಪಡೆದಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಚುನಾವಣಾ ಫಲಿತಾಂಶದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿನೇಶ್ ಫೋಗಟ್, 'ಇದು ಹೋರಾಟ ಮತ್ತು ಸತ್ಯಕ್ಕೆ ಸಂದ ಜಯ. ಜನರ ಪ್ರೀತಿ ಮತ್ತು ವಿಶ್ವಾಸವನ್ನು ಉಳಿಸಿಕೊಳ್ಳುತ್ತೇನೆ' ಎಂದು ಹೇಳಿದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 50 ಕೆ.ಜಿ ವಿಭಾಗದ ಕುಸ್ತಿಯಲ್ಲಿ ಫೈನಲ್ ತಲುಪಿದ್ದ ಫೋಗಟ್ ಅವರು 100 ಗ್ರಾಂ ಹೆಚ್ಚು ತೂಕ ಹೊಂದಿದ್ದಾರೆ ಎಂಬ ಕಾರಣಕ್ಕೆ ಅನರ್ಹ-ಗೊಂಡಿದ್ದರು. ನಂತರ ರಾಜಕೀಯದತ್ತ ಮುಖ ಮಾಡಿದ್ದ ಅವರು, ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆ-ಯಾಗಿದ್ದರು.

ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಮಾಜಿ ಸಂಸದ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಕೆಲ ಮಹಿಳಾ ಕುಸ್ತಿಪಟುಗಳು ಲೈಂಗಿಕ ಕಿರುಕುಳದ ಆರೋಪ ಮಾಡಿದ್ದರು. ಆಗ, ಸಿಂಗ್ ವಿರುದ್ಧ ನಡೆದಿದ್ದ ಪ್ರತಿಭಟನೆಗಳಲ್ಲಿ ಫೋಗಟ್ ಪಾಲ್ಗೊಂಡಿದ್ದರು.

'ಫಲಿತಾಂಶ ಒಪ್ಪಿಕೊಳ್ಳುವುದಿಲ್ಲ'

ನವದೆಹಲಿ (ಪಿಟಿಐ): 'ಹರಿಯಾಣದಲ್ಲಿ ನಮ್ಮ ಗೆಲುವನ್ನು ಕಿತ್ತುಕೊಳ್ಳಲಾಗಿದೆ... ಜನರು ಬದಲಾ-ವಣೆಯನ್ನು ಬಯಸಿದ್ದರು. ಈ ಫಲಿತಾಂಶವು ಅವರ ಇಚ್ಛೆಗೆ ವಿರುದ್ಧವಾಗಿ ಬಂದಿದೆ. ಹರಿಯಾಣದ ಅಧ್ಯಾಯ ಇನ್ನೂ ಮುಗಿದಿಲ್ಲ. ನಾವು ಈ ಫಲಿತಾಂಶವನ್ನು ಒಪ್ಪಿಕೊಳ್ಳುವುದಿಲ್ಲ' ಎಂದು ಫಲಿತಾಂಶದ ಕುರಿತು ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಮತ್ತು ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಪಕ್ಷದ ಪ್ರಧಾನ ಕಚೇರಿಯಲ್ಲಿ ಮಾಧ್ಯಮಗೋಷ್ಠಿ ನಡೆಸಿ, ಚುನಾವಣಾ ಆಯೋಗದ ಕುರಿತು ಆಕ್ರೋಶ ವ್ಯಕ್ತ-ಪಡಿಸಿದರು.

'ಮತಎಣಿಕೆ ಪ್ರಕ್ರಿಯೆ ಹಾಗೂ ಇವಿಎಂಗಳ ಕಾರ್ಯವಿಧಾನದ ಕುರಿತು ಇಂದಿನ ಫಲಿತಾಂಶವು ಹಲವು 'ಗಂಭೀರ ವಿಷಯ'ಗಳನ್ನು ಮುಂದಿಟ್ಟಿವೆ. ಮತಎಣಿಕೆಗೂ ಮೊದಲೇ ಹಲವು ಇವಿಎಂಗಳಲ್ಲಿ ಶೇ 99ರಷ್ಟು ಬ್ಯಾಟರಿ ಚಾರ್ಜ್ ಇತ್ತು. ಎಲ್ಲೆಲ್ಲಿ ಶೇ 99ರಷ್ಟು ಚಾರ್ಜ್ ಇದೆಯೊ ಅಲ್ಲಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಶೇ 60 ಅಥವಾ ಶೇ 70ರಷ್ಟು ಬ್ಯಾಟರಿ ಚಾರ್ಜ್ ಇದ್ದ ಇವಿಎಂಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ' ಎಂದು ಪವನ್ ಖೇರಾ ದೂರಿದರು.

'ಕೆಲವು ಜಿಲ್ಲೆಗಳ ಸುಮಾರು 14 ಕ್ಷೇತ್ರಗಳಲ್ಲಿ ಇವಿಎಂಗಳನ್ನು ತಿರುಚಲಾಗಿದೆ. ಮತಎಣಿಕೆ ಆರಂಭವಾಗುತ್ತಿದ್ದಂತೆಯೇ ನಮ್ಮ ಅಭ್ಯರ್ಥಿಗಳು ನಮಗೆ ಮಾಹಿತಿ ನೀಡುತ್ತಿದ್ದರು. ಸಂಜೆಯವರೆಗೂ ನಮಗೆ ದೂರುಗಳು ಬರುತ್ತಲೇ ಇವೆ' ಎಂದರು.

ಜಮ್ಮು–ಕಾಶ್ಮೀರದಲ್ಲಿ ನಮ್ಮ ಕೂಟದ ಗೆಲುವು ಬಿಜೆಪಿಯ ಜನವಿರೋಧಿ ನೀತಿಗಳ ವಿರುದ್ಧದ ಜನಾದೇಶವಾಗಿದೆ. ಹರಿಯಾಣದಲ್ಲಿ ಕಾಂಗ್ರೆಸ್ ಪಕ್ಷದ ಸೋಲು ಅನಿರೀಕ್ಷಿತವಾಗಿತ್ತು

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ

ಹರಿಯಾಣದಲ್ಲಿ ಪರಿಸ್ಥಿತಿ ಹಿಂದಿನಂತೆ ಇರುವುದಿಲ್ಲ. 10 ವರ್ಷದ ನಂತರ ಪಕ್ಷವನ್ನು ಅಧಿಕಾರಕ್ಕೆ ತರುವ ಪ್ರಯತ್ನಗಳನ್ನು ನಿಷ್ಫಲಗೊಳಿಸಿದವರನ್ನು ಪಕ್ಷದ ಹೈಕಮಾಂಡ್ ಖಂಡಿತ ಪತ್ತೆ ಹಚ್ಚುತ್ತದೆ

ಕುಮಾರಿ ಸೆಲ್ಜಾ, ಕಾಂಗ್ರೆಸ್ ನಾಯಕಿ

ಹರಿಯಾಣದಲ್ಲಿ 3 ಗುಂಪುಗಳಿಂದಾಗಿ ಹಿನ್ನಡೆಯಾಗಿದೆ. ಭೂಪಿಂದರ್ ಸಿಂಗ್ ಹೂಡಾ, ಕುಮಾರಿ ಸೆಲ್ಜಾ, ರಣದೀಪ್ ಸುರ್ಜೇವಾಲಾ ನಡುವೆ ಹೊಂದಾಣಿಕೆ ಆಗಲಿಲ್ಲ

ನಸೀರ್ ಅಹಮದ್, ಸಿದ್ದರಾಮಯ್ಯ ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ

'ಹರಿಯಾಣದಲ್ಲಿ ಇಂದು ಲೋಕತಂತ್ರವಲ್ಲ, ತಂತ್ರ ಗೆದ್ದಿದೆ. ನಮ್ಮ ಅಭ್ಯರ್ಥಿಗಳು ನಮಗೆ ನೀಡಿರುವ ದೂರುಗಳನ್ನು ಕ್ರೋಢೀಕರಿಸಿಕೊಂಡು, ಎರಡು ಮೂರು ದಿನಗಳಲ್ಲಿ ಚುನಾವಣಾ ಆಯೋಗದ ಮುಂದೆ ಹೋಗಲಿದ್ದೇವೆ' ಎಂದು ಜೈರಾಮ್ ರಮೇಶ್ ಹೇಳಿದರು.

ಹ್ಯಾಟ್ರಿಕ್ ಗೆಲುವಿನಲ್ಲಿ ಸೈನಿ ಕೈಚಳಕ

ಹರಿಯಾಣದ ಕುರುಕ್ಷೇತ್ರ ಜಿಲ್ಲೆಯ ಲಾಡ್ವಾ ವಿಧಾನಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿದ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಅವರನ್ನು ಬೆಂಬಲಿಗರು ಮಂಗಳವಾರ ಅಭಿನಂದಿಸಿದರು — ಪಿಟಿಐ ಚಿತ್ರ

ಚಂಡೀಗಢ (ಪಿಟಿಐ): ಹರಿಯಾಣ ವಿಧಾನಸಭೆಗೆ ಚುನಾವಣೆ ನಡೆಯುವುದಕ್ಕೆ ಕೆಲವು ತಿಂಗಳ ಮೊದಲು ಬಿಜೆಪಿ ವರಿಷ್ಠರು ಹರಿಯಾಣದ ಪ್ರಬಲ ನಾಯಕ ಮನೋಹರ ಲಾಲ್ ಖಟ್ಟರ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದರು. ಅವರ ಸ್ಥಾನಕ್ಕೆ ಒಬಿಸಿ ಸಮುದಾಯಕ್ಕೆ ಸೇರಿದ, ತಾನು ಪ್ರಬಲ ಎಂದು ಬಿಂಬಿಸಿಕೊಳ್ಳದ ನಾಯಕ ನಾಯಬ್ ಸಿಂಗ್ ಸೈನಿ ಅವರನ್ನು ತರಲಾಯಿತು. ವರಿಷ್ಠರ ಈ ತೀರ್ಮಾನವು ಹಲವರಲ್ಲಿ ಆಶ್ಚರ್ಯ ಮೂಡಿಸಿತ್ತು.

ಬಿಜೆಪಿ ತೆಗೆದುಕೊಂಡಿದ್ದ ತೀರ್ಮಾನವು ಫಲ ನೀಡಿದೆ. ಲೋಕಸಭಾ ಚುನಾವಣೆಯಲ್ಲಿ ಹರಿಯಾಣದಲ್ಲಿ ಬಿಜೆಪಿಯ ಸಾಧನೆ ನಿರಾಶಾದಾಯಕವಾಗಿ ಇತ್ತಾದರೂ, ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಸೈನಿ ಅವರು ಪಕ್ಷವನ್ನು ಗೆಲುವಿನತ್ತ ಒಯ್ದಿದ್ದಾರೆ. ಮತದಾನೋತ್ತರ ಸಮೀಕ್ಷೆಗಳ ಫಲಿತಾಂಶಗಳು ತಲೆಕೆಳಗಾಗಿವೆ.

ಹರಿಯಾಣ ರಾಜ್ಯದ ಬಿಜೆಪಿ ಘಟಕದ ಅಧ್ಯಕ್ಷರಾಗಿದ್ದ ಸೈನಿ ಅವರಿಗೆ ಮುಖ್ಯಮಂತ್ರಿ ಸ್ಥಾನಕ್ಕೆ ಪದೋನ್ನತಿ ನೀಡಿದಾಗ ಅಲ್ಲಿ ಪಕ್ಷವು ಆಡಳಿತ ವಿರೋಧಿ ಅಲೆಯನ್ನು ಎದುರಿಸುತ್ತಿತ್ತು. ಖಟ್ಟರ್ ಅವರು ಒಂಬತ್ತೂವರೆ ವರ್ಷಗಳಿಂದ ಆಡಳಿತದಲ್ಲಿ ಇದ್ದರು. ಅಲ್ಲದೆ, ವಿರೋಧ ಪಕ್ಷಗಳು ರೈತರ ಸಮಸ್ಯೆಗಳು, ನಿರುದ್ಯೋಗ, ಕಾನೂನು ಮತ್ತು ಸುವ್ಯವಸ್ಥೆ, ಅಗ್ನಿಪಥ ಯೋಜನೆಯನ್ನು ಮುಂದಿಟ್ಟುಕೊಂಡು ಆಡಳಿತ ಪಕ್ಷದ ಮೇಲೆ ನಿರಂತರವಾಗಿ ವಾಗ್ಬಾಣ ಎಸೆಯುತ್ತಿದ್ದವು.

ಸೈನಿ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಲೋಕಸಭಾ ಚುನಾವಣೆ ಘೋಷಣೆ ಆಯಿತು, ನೀತಿ ಸಂಹಿತೆ ಜಾರಿಗೆ ಬಂತು. ನಂತರ, ವಿಧಾನಸಭಾ ಚುನಾವಣೆ ಘೋಷಣೆಯಾಗಿ, ಇನ್ನೊಂದು ಸುತ್ತಿನ ನೀತಿ ಸಂಹಿತೆ ಜಾರಿಗೆ ಬಂತು. ಅಂದರೆ, ಸಾರ್ವಜನಿಕರಲ್ಲಿ ಸರ್ಕಾರದ ಬಗ್ಗೆ ಮೂಡಿದ್ದ ಭಾವನೆಯನ್ನು ಬದಲಾಯಿಸಲು ಸೈನಿ ಅವರಿಗೆ ಇದ್ದ ಕಾಲಾವಕಾಶ ಎರಡು ತಿಂಗಳು ಮಾತ್ರ. ಸಮಯ ವ್ಯರ್ಥ ಮಾಡದೆ ಕೆಲಸ ಶುರು ಮಾಡಿದ ಸೈನಿ, ಸಂಪುಟದ ಮೂಲಕ ಕೆಲವು ಪ್ರಮುಖ ತೀರ್ಮಾನಗಳನ್ನು ಕೈಗೊಂಡರು.

ಹರಿಯಾಣ ಅಗ್ನಿವೀರ ನೀತಿ –2024ಕ್ಕೆ ಒಪ್ಪಿಗೆ ನೀಡುವುದು, ಕನಿಷ್ಠ ಬೆಂಬಲ ಬೆಲೆ ನೀಡಿ ಹೆಚ್ಚುವರಿಯಾಗಿ 10 ಬೆಳೆಗಳನ್ನು ಖರೀದಿಸುವುದು ಪ್ರಮುಖ ತೀರ್ಮಾನಗಳ ಪೈಕಿ ಒಂದಾಗಿದ್ದವು.

ಬಿಜೆಪಿ ಕೂಡ ಅಡುಗೆ ಅನಿಲವನ್ನು ಸಿಲಿಂಡರ್‌ಗೆ ₹500ಕ್ಕೆ ಪೂರೈಸುವುದಾಗಿ ಭರವಸೆ ನೀಡಿತು. ಮಹಿಳೆಯರಿಗೆ ತಿಂಗಳಿಗೆ ₹2,100 ನೆರವು, ಯುವಕರಿಗೆ ಎರಡು ಲಕ್ಷ ಸರ್ಕಾರಿ ಉದ್ಯೋಗ, ಹರಿಯಾಣದ ಅಗ್ನಿವೀರರಿಗೆ ಸರ್ಕಾರದಲ್ಲಿ ನೌಕರಿ ನೀಡುವ ಖಾತರಿಯ ಭರವಸೆಯನ್ನೂ ಪಕ್ಷ ನೀಡಿತು.

ನಾಯಬ್ ಕುರಿತು

ಹರಿಯಾಣದ ಅಂಬಾಲಾ ಜಿಲ್ಲೆಯ ಮಿರ್ಜಾಪುರ ಮಾಜರಾ ಗ್ರಾಮದಲ್ಲಿ 1970ರ ಜನವರಿ 25ರಂದು ಜನಿಸಿದ ನಾಯಬ್ ಸಿಂಗ್ ಸೈನಿ ಅವರು ಮನೋಹರ ಲಾಲ್ ಖಟ್ಟರ್ ನೇತೃತ್ವದ ಸಂಪುಟದಲ್ಲಿ 2014ರಿಂದ 2019ರವರೆಗೆ ಸಚಿವರಾಗಿ ಕೆಲಸ ಮಾಡಿದ್ದರು.

ಮೂರು ದಶಕಗಳಲ್ಲಿ ಸೈನಿ ಅವರು ಬಿಜೆಪಿಯಲ್ಲಿ ತಳಮಟ್ಟದಿಂದ ಮೇಲೆ ಬಂದಿದ್ದಾರೆ. ಹಿಂದೆ ಬಿಜೆಪಿಯ ಜಿಲ್ಲಾ ಅಧ್ಯಕ್ಷ ಹುದ್ದೆಯನ್ನು ನಿರ್ವಹಿಸಿದ್ದ ಅವರು ನಂತರ ಪಕ್ಷದ ರಾಜ್ಯ ಘಟಕದ ಕಿಸಾನ್ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೂಡ ಆಗಿದ್ದರು. ಬಿಜೆಪಿ ಯುವ ವಿಭಾಗದ ಅಂಬಾಲಾ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ, ಜಿಲ್ಲಾ ಅಧ್ಯಕ್ಷರಾಗಿ ಅವರು ಕೆಲಸ ಮಾಡಿದ್ದಾರೆ. 2014ರಲ್ಲಿ ನಾರಾಯಣಗಢ ಕ್ಷೇತ್ರದಿಂದ ಹರಿಯಾಣ ವಿಧಾನಸಭೆಗೆ ಆಯ್ಕೆ-ಯಾಗಿದ್ದರು. ನಂತರ 2019ರಲ್ಲಿ ಕುರುಕ್ಷೇತ್ರ ಕ್ಷೇತ್ರದಿಂದ ಸ್ಪರ್ಧಿಸಿ ಲೋಕಸಭೆ ಪ್ರವೇಶಿಸಿದ್ದರು.

ಮತ್ತೆ ಸುಳ್ಳಾದ ಮತಗಟ್ಟೆ ಸಮೀಕ್ಷೆಗಳು

ನವದೆಹಲಿ (ಪಿಟಿಐ): ಹರಿಯಾಣ ಮತ್ತು ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯ ಮತಗಟ್ಟೆ ಸಮೀಕ್ಷೆಗಳು ಮತದಾರರ ನಾಡಿಮಿಡಿತವನ್ನು ಸ್ಪಷ್ಟವಾಗಿ ಅರಿಯಲು ವಿಫಲವಾಗಿವೆ.

90 ಸದಸ್ಯ ಬಲದ ಹರಿಯಾಣ ವಿಧಾನಸಭೆಯಲ್ಲಿ ಕಾಂಗ್ರೆಸ್ 50ಕ್ಕೂ ಹೆಚ್ಚು ಸ್ಥಾನಗಳಿಸಲಿದೆ ಎಂದು ಎಲ್ಲ ಮತಗಟ್ಟೆ ಸಮೀಕ್ಷೆಗಳು ಹೇಳಿದ್ದವು. ಬಿಜೆಪಿಯು 30 ಸ್ಥಾನಗಳನ್ನು ದಾಟುವುದು ಕಷ್ಟ ಎಂದು ಭವಿಷ್ಯ ನುಡಿದಿದ್ದವು.

ಸಿ–ವೋಟರ್–ಇಂಡಿಯಾ ಟುಡೇ ಸಮೀಕ್ಷೆಯು ಕಾಂಗ್ರೆಸ್‌ಗೆ 50ರಿಂದ 58 ಸ್ಥಾನಗಳು ಬರಬಹುದು ಎಂದು ಹೇಳಿತ್ತು. ಬಿಜೆಪಿ 20ರಿಂದ 28 ಸ್ಥಾನ ಗಳಿಸಬಹುದು ಎಂದಿತ್ತು. ರಿಪಬ್ಲಿಕ್ ಭಾರತ್–ಮ್ಯಾಟ್ರಿಜ್ ಸಮೀಕ್ಷೆಯು 55ರಿಂದ 62 ಸ್ಥಾನಗಳು ಕಾಂಗ್ರೆಸ್‌ಗೆ ಮತ್ತು 18ರಿಂದ 24 ಸ್ಥಾನಗಳು ಬಿಜೆಪಿಗೆ ಸಿಗಬಹುದು ಎಂದಿತ್ತು.

ಚುನಾವಣಾ ಫಲಿತಾಂಶ ಇದಕ್ಕೆ ವ್ಯತಿರಿಕ್ತವಾಗಿ ಬಂದಿದ್ದು, ಬಿಜೆಪಿ 48 ಕ್ಷೇತ್ರಗಳಲ್ಲಿ ಗೆದ್ದಿದ್ದರೆ, ಕಾಂಗ್ರೆಸ್ 37 ಸ್ಥಾನಗಳಲ್ಲಷ್ಟೇ ಗೆಲುವು ಸಾಧಿಸಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಎನ್‌ಸಿ–ಕಾಂಗ್ರೆಸ್ ಮೈತ್ರಿ 40ರಿಂದ 48 ಸ್ಥಾನಗಳನ್ನು ಗೆಲ್ಲಲಿದೆ ಎಂದು ಸಿ–ವೋಟರ್–ಇಂಡಿಯಾ ಟುಡೇ ಮತಗಟ್ಟೆ ಸಮೀಕ್ಷೆ ಹೇಳಿತ್ತು. ಈ ಪೈಕಿ ಪ್ರಾದೇಶಿಕ ಪಕ್ಷವಾದ ಎನ್‌ಸಿ 33 ಸ್ಥಾನಗಳನ್ನು ಗಳಿಸಲಿದೆ ಎಂದಿತ್ತು. ಬಿಜೆಪಿಯು 27ರಿಂದ 32 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಬಹುದು ಎಂದೂ ಹೇಳಿತ್ತು.

ಈ ಬಾರಿಯ ಲೋಕಸಭಾ ಚುನಾವಣೆಯ ಸಂದರ್ಭದಲ್ಲೂ ಮತಗಟ್ಟೆ ಸಮೀಕ್ಷೆಗಳ ಭವಿಷ್ಯ ಸುಳ್ಳಾಗಿದ್ದವು. ಬಿಜೆಪಿ 350ಕ್ಕೂ ಅಧಿಕ ಸ್ಥಾನಗಳನ್ನು ಗಳಿಸುವುದರ ಮೂಲಕ ಜಯಭೇರಿ ಬಾರಿಸಲಿದೆ ಎಂದು ಬಹುತೇಕ ಎಲ್ಲ ಮತಗಟ್ಟೆ ಸಮೀಕ್ಷೆಗಳು ಭವಿಷ್ಯ ನುಡಿದಿದ್ದವು. ಆದರೆ, 240 ಸ್ಥಾನಗಳನ್ನಷ್ಟೇ ಅದಕ್ಕೆ ಸಾಧ್ಯವಾಗಿತ್ತು. ಎನ್‌ಡಿಎ ಮೈತ್ರಿ ಕೂಟ ಒಟ್ಟಾಗಿ 293 ಸ್ಥಾನ ಗಳಿಸಿತ್ತು.

ದೇವಿಲಾಲ್ ಕುಟುಂಬದ ಆರು ಮಂದಿಗೆ ಸೋಲಿನ ಕಹಿ

ನವದೆಹಲಿ: ಹರಿಯಾಣದಲ್ಲಿ ಈ ಬಾರಿ ರಾಜಕೀಯ ಹಿನ್ನೆಲೆಯ ಪ್ರಭಾವಿ ಕುಟುಂಬಗಳ ಅಭ್ಯರ್ಥಿಗಳಿಗೆ ಮತದಾರರು ಸೋಲಿನ ರುಚಿ ತೋರಿಸಿದ್ದಾರೆ. ದಿವಂಗತ ದೇವಿಲಾಲ್ ಕುಟುಂಬದ ಎಂಟು ಅಭ್ಯರ್ಥಿಗಳ ಪೈಕಿ ಆರು ಮಂದಿ ಸೋಲು ಕಂಡಿದ್ದಾರೆ. ಮಾಜಿ ಉಪಮುಖ್ಯಮಂತ್ರಿ ಮತ್ತು ಜೆಜೆಪಿಯ ಮುಂಚೂಣಿಯ ನಾಯಕ ದುಷ್ಯಂತ್ ಚೌಟಾಲಾ ಅವರು ಅತ್ಯಂತ ಹೀನಾಯ ಸೋಲು ಕಂಡಿದ್ದು, ಠೇವಣಿ ಕಳೆದುಕೊಂಡಿದ್ದಾರೆ.

ದೇವಿಲಾಲ್ ಅವರ ಮರಿ ಮೊಮ್ಮಗ ಮತ್ತು ಓಂ ಪ್ರಕಾಶ್ ಚೌಟಾಲಾ ಅವರ ಮೊಮ್ಮಗನಾದ ದುಷ್ಯಂತ್ ಅವರು ತಮ್ಮ ಕುಟುಂಬದ ಭದ್ರಕೋಟೆ ಉಚ್ಚನ ಕಲಾನ್ ಕ್ಷೇತ್ರದಲ್ಲಿ ಈ ಬಾರಿ ಕೇವಲ 7,950 ಮತಗಳನ್ನು ಪಡೆದಿದ್ದಾರೆ. ಹಿರಿಯ ನಾಯಕ ಬೀರೇಂದ್ರ ಸಿಂಗ್ ಅವರ ಪುತ್ರ, ಕಾಂಗ್ರೆಸ್‌ನ ಬ್ರಿಜೇಂದ್ರ ಸಿಂಗ್ ಅವರು ಉಚ್ಚನ ಕಾಲನ್ ಕ್ಷೇತ್ರದಲ್ಲಿ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ.

ದುಷ್ಯಂತ್ ಚೌಟಾಲಾ ಅವರ ಸಹೋದರ ದಿಗ್ವಿಜಯ್ ಸಿಂಗ್ ಚೌಟಾಲಾ ಮತ್ತು ದೇವಿಲಾಲ್ ಅವರ ಇನ್ನೊಬ್ಬ ಮೊಮ್ಮಗ ಕಾಂಗ್ರೆಸ್‌ನ ಅಮಿತ್ ಸಿಹಾಗ್ ಅವರು ತಮ್ಮ ಸೋದರಸಂಬಂಧಿ ಐಎನ್‌ಎಲ್‌ಡಿಯ ಆದಿತ್ಯ ದೇವಿಲಾಲ್ ವಿರುದ್ಧ ಡಬ್ವಾಲಿಯಲ್ಲಿ ಸೋತಿದ್ದಾರೆ. ಇನ್ನು, ಆದಿತ್ಯ ಅವರ ತಂದೆ ಅಭಯ್ ಚೌಟಾಲಾ ಅವರನ್ನು ಎಲ್ಲೆನಾಬಾದ್‌ನಲ್ಲಿ ಕಾಂಗ್ರೆಸ್‌ನ ಭರತ್ ಸಿಂಗ್ ಬೇನಿವಾಲ್ ಅವರು 15,000 ಮತಗಳಿಂದ ಸೋಲಿಸಿದ್ದಾರೆ.

ದೇವಿಲಾಲ್ ಅವರ ಮತ್ತೊಬ್ಬ ಮೊಮ್ಮಗ ಅರ್ಜುನ್ ಚೌಟಾಲಾ ತಮ್ಮ ಚಿಕ್ಕಪ್ಪ ರಂಜಿತ್ ಚೌಟಾಲಾರನ್ನು ಸೋಲಿಸಿದ್ದಾರೆ. ದೇವಿಲಾಲ್ ಅವರ ಸೊಸೆ ಸುನೈನಾ ಚೌಟಾಲಾ ಕೂಡ ಫತೇಹಾಬಾದ್‌ನಲ್ಲಿ ಸೋಲು ಕಂಡಿದ್ದಾರೆ.

ಆದಿತ್ಯ ಮತ್ತು ಅರ್ಜುನ್ ಅವರನ್ನು ಹೊರತುಪಡಿಸಿ, ಕಣದಲ್ಲಿದ್ದ ದೇವಿಲಾಲ್ ಅವರ ಎಲ್ಲ ವಂಶಸ್ಥರು ಚುನಾವಣೆಯಲ್ಲಿ ಸೋಲುಂಡಿದ್ದಾರೆ. ಹರಿಯಾಣದ ಮತ್ತೊಬ್ಬ ಮುತ್ಸದ್ದಿ, ದಿವಂಗತ ಭಜನ್ ಲಾಲ್ ಅವರ ಮೊಮ್ಮಗ, ಕುಲದೀಪ್ ಬಿಷ್ಣೋಯ್ ಅವರ ಪುತ್ರ ಭವ್ಯ ಬಿಷ್ಣೋಯ್ ಅವರ ತಮ್ಮ ಭದ್ರಕೋಟೆ ಆದಂಪುರದಲ್ಲೇ ನೆಲಕಚ್ಚಿದ್ದಾರೆ.

ಪಿಡಿಪಿ ಹೀನಾಯ ಪ್ರದರ್ಶನ

ಮೆಹಬೂಬಾ ಮುಫ್ತಿ ನೇತೃತ್ವದ ಪಿಡಿಪಿಯು ಈ ಬಾರಿ ದಯನೀಯವಾಗಿ ಸೋಲುಕಂಡಿದೆ. ಮುಫ್ತಿ ಕುಟುಂಬದ ಭದ್ರಕೋಟೆಯಾಗಿರುವ ಅನಂತನಾಗ್ ಜಿಲ್ಲೆಯ ಶ್ರೀಗುಫ್ವಾರಾ–ಬಿಜಬೆಹರಾ ವಿಧಾನಸಭಾ ಕ್ಷೇತ್ರದಲ್ಲಿ, ಅವರ ಮಗಳು ಇಲ್ತಿಜಾ ಮುಫ್ತಿ ಅವರು ಸೋಲು ಅನುಭವಿಸಿದ್ದಾರೆ. ಇದು ಇಲ್ತಿಜಾ ಅವರ ಮೊದಲ ಚುನಾವಣೆಯಾಗಿತ್ತು. 'ಹೊಸ ಸರ್ಕಾರದ ವ್ಯವಹಾರಗಳಲ್ಲಿ ಕೇಂದ್ರ ಸರ್ಕಾರ ಮೂಗುತೂರಿಸದೆ, ಜಮ್ಮು ಮತ್ತು ಕಾಶ್ಮೀರ ಜನರ ಇಚ್ಛೆಯನ್ನು ಗೌರವಿಸಬೇಕು' ಎಂದು ಮೆಹಬೂಬಾ ಮುಫ್ತಿ ಹೇಳಿದ್ದಾರೆ.

ಖಾತೆ ತೆರೆದ ಎಎಪಿ

ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿಯು ಜಮ್ಮು–ಕಾಶ್ಮೀರ ವಿಧಾನಸಭೆ ಚುನಾವಣೆಯಲ್ಲಿ ಒಂದು ಸ್ಥಾನವನ್ನು ಪಡೆಯುವ ಮೂಲಕ ರಾಜ್ಯದಲ್ಲಿ ಖಾತೆ ತೆರೆದಿದೆ. ಈ ಹಿಂದೆ ಬಿಜೆಪಿ ತೆಕ್ಕೆಯಲ್ಲಿದ್ದ ದೋಡಾ ಕ್ಷೇತ್ರದಲ್ಲಿ ಎಎಪಿಯ ಮೆಹರಾಜ್ ಮಲ್ಲಿಕ್ ಅವರು ಗೆಲುವು ದಾಖಲಿಸಿದ್ದಾರೆ. ಈ ಮೂಲಕ ಜಮ್ಮು–ಕಾಶ್ಮೀರವು ಎಎಪಿ ಶಾಸಕರಿರುವ ಐದನೇ ರಾಜ್ಯವಾಗಿದೆ. ಈಗಾಗಲೇ ದೆಹಲಿ. ಪಂಜಾಬ್, ಗುಜರಾತ್ ಮತ್ತು ಗೋವಾದಲ್ಲಿ ಎಎಪಿ ಶಾಸಕರನ್ನು ಹೊಂದಿದೆ.

ಸಾವಿತ್ರಿ ಜಿಂದಾಲ್ ಗೆಲುವು

ದೇಶದ ಅತಿ ಶ್ರೀಮಂತ ಮಹಿಳೆ ಸಾವಿತ್ರಿ ಜಿಂದಾಲ್ ಅವರು ಹಿಸಾರ್ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದು ಗೆಲುವು ಸಾಧಿಸಿದ್ದಾರೆ.

ಬಿಜೆಪಿ ಟಿಕೆಟ್ ಪಡೆಯಲು ಭಾರಿ ಕಸರತ್ತು ನಡೆಸಿದ ಬಳಿಕವೂ ವಿಫಲವಾಗಿದ್ದ ಜಿಂದಾಲ್, 18 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ರಾಮ್ ನಿವಾಸ್ ರಾರಾ ಅವರನ್ನು ಪರಾಭವಗೊಳಿಸಿದ್ದಾರೆ. ಬಿಜೆಪಿಯಿಂದ ಸ್ಪರ್ಧಿಸಿದ್ದ ಸಚಿವ ಕಮಲ್ ಗುಪ್ತಾ ಅವರು ಕೇವಲ 17 ಸಾವಿರ ಮತ ಗಳಿಸಲಷ್ಟೇ ಶಕ್ತರಾಗಿದ್ದಾರೆ.

ಜಮ್ಮು–ಕಾಶ್ಮೀರ

ಗೆದ್ದ ಪ್ರಮುಖರು

ಒಮರ್ ಅಬ್ದುಲ್ಲಾ (ಎನ್‌ಸಿ)
ಮೊಹಮ್ಮದ್ ಯೂಸುಫ್ (ಸಿಪಿಎಂ)
ಸಜ್ಜದ್ ಲೋನ್ (ಪೀಪಲ್ಸ್ ಕಾನ್ಫರೆನ್ಸ್)
ತಾರೀಖ್ ಕರ್ರಾ (ಕಾಂಗ್ರೆಸ್)

ಸೋತ ಪ್ರಮುಖರು

ಇಲ್ತಿಜಾ ಮುಫ್ತಿ (ಪಿಡಿಪಿ)
ತಾರಾ ಚಂದ್ (ಕಾಂಗ್ರೆಸ್)
ವಕಾರ್ ರಸೂಲ್ (ಕಾಂಗ್ರೆಸ್)
ರವೀಂದರ್ ರೈನಾ (ಬಿಜೆಪಿ)

ಇಲ್ತಿಜಾ ಮುಫ್ತಿ

ಹರಿಯಾಣ

ಗೆದ್ದ ಪ್ರಮುಖರು

ಆದಿತ್ಯ ಸುರ್ಜೇವಾಲಾ (ಕಾಂಗ್ರೆಸ್)
ಅನಿಲ್ ವಿಜ್ (ಬಿಜೆಪಿ)
ಅರ್ಜುನ್ ಚೌಟಾಲಾ (ಐಎನ್‌ಎಲ್‌ಡಿ)
ಭೂಪಿಂದರ್ ಹೂಡಾ (ಕಾಂಗ್ರೆಸ್)

ಸೋತ ಪ್ರಮುಖರು

ದುಶ್ಯಂತ್ ಚೌಟಾಲಾ (ಜೆಜೆಪಿ)
ಅಭಯ್ ಚೌಟಾಲಾ (ಐಎನ್‌ಎಲ್‌ಡಿ)
ಗೋಪಾಲ್ ಕಂಡ (ಎಚ್‌ಎಲ್‌ಪಿ)
ಕ್ಯಾ.ಅಭಿಮನ್ಯು (ಬಿಜೆಪಿ)


ಭೂಪಿಂದರ್ ಹೂಡಾ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನಾಲ್ಕು ತಿಂಗಳ ಹಿಂದೆ ಹೀನಾಯ ಸೋಲು ಕಂಡಿದ್ದ ನಾಯಕ ಸಿ.ಎಂ ಆಗಲು ಸಜ್ಜು

ಒಮರ್ ನೇತೃತ್ವದ ಎನ್‌ಸಿಗೆ ಗೆಲುವಿನ ಮಾಲೆ

ಪ್ರಜಾವಾಣಿ ವಾರ್ತೆ

ನ್ಯಾಷನಲ್ ಕಾನ್ಫರೆನ್ಸ್ ಅಭೂತಪೂರ್ವ ಗೆಲುವು ಸಾಧಿಸಿರುವುದಕ್ಕೆ ಶ್ರೀನಗರದಲ್ಲಿ ಬೆಂಬಲಿಗರು ಸಂಭ್ರಮಿಸಿದರು

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ಮತದಾರರು ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಜಮ್ಮು ಮತ್ತು ಕಾಶ್ಮೀರ ನ್ಯಾಷನಲ್ ಕಾನ್ಫರೆನ್ಸ್ (ಎನ್) ಪರವಾಗಿ ಸ್ಪಷ್ಟ ಜನಾದೇಶ ನೀಡಿದ್ದು, ಬಿಜೆಪಿಯೊಂದಿಗೆ ಒಳಒಪ್ಪಂದ ಮಾಡಿಕೊಂಡಿದ್ದವು ಎನ್ನಲಾದ ಸಣ್ಣ ಪಕ್ಷಗಳನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ.

90 ಸದಸ್ಯ ಬಲದ ವಿಧಾನಸಭೆಯಲ್ಲಿ 42 ಸ್ಥಾನಗಳನ್ನು ಗೆಲ್ಲುವ ಮೂಲಕ ನ್ಯಾಷನಲ್ ಕಾನ್ಫರೆನ್ಸ್ ಗೆಲುವಿನ ನಗೆ ಬೀರಿದೆ. 29 ಕ್ಷೇತ್ರ-ಗಳಲ್ಲಿ ಗೆದ್ದಿರುವ ಬಿಜೆಪಿಯು ಎರಡನೇ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಕಾಂಗ್ರೆಸ್ ಮತ್ತು ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿಗಳಿಗೆ (ಪಿಡಿಪಿ) ಭಾರಿ ಹಿನ್ನಡೆಯಾಗಿದ್ದು, ಕ್ರಮವಾಗಿ ಆರು ಮತ್ತು ಮೂರು ಸ್ಥಾನಗಳಲ್ಲಷ್ಟೇ ಜಯಗಳಿಸಿವೆ.

1996ರ ಚುನಾವಣೆಯ ಬಳಿಕ ಯಾವುದೇ ಪಕ್ಷ ಜಮ್ಮು ಮತ್ತು ಕಾಶ್ಮೀರದಲ್ಲಿ 40ಕ್ಕಿಂತ ಹೆಚ್ಚು ಸ್ಥಾನಗಳನ್ನು ಗಳಿಸಿರುವುದು ಇದೇ ಮೊದಲು.

ಸಣ್ಣ ಪಕ್ಷಗಳಾದ ಬಾರಾಮುಲ್ಲಾ ಸಂಸದ ಎಂಜಿನಿಯರ್ ರಶೀದ್ ಅವಾಮಿ ಇತ್ತೆಹಾದ್ ಪಾರ್ಟಿ (ಎಐಪಿ), ಸಜ್ಜದ್ ಲೋನ್ ಅವರ ಪೀಪಲ್ಸ್ ಕಾನ್ಫರೆನ್ಸ್. ಅಲ್ತಾಫ್ ಬುಖಾರಿ ಅವರ ಅಪ್ನಿ ಪಾರ್ಟಿ (ಎಪಿ) ಮತ್ತು ಗುಲಾಂ ನಬಿ ಆಜಾದ್ ನೇತೃತ್ವದ ಡಿಪಿಎಪಿಗಳು ಉತ್ತಮ ಪ್ರದರ್ಶನ ತೋರಲು ವಿಫಲವಾಗಿವೆ. ಕಾಶ್ಮೀರದ ಮತದಾರರು ಈ ಪಕ್ಷಗಳನ್ನು ತಿರಸ್ಕರಿಸಿದ್ದಾರೆ. ಎಪಿ, ಡಿಪಿಎಪಿಗಳು ಖಾತೆ ತೆರೆಯಲು ವಿಫಲವಾಗಿದ್ದು, ಎಐಪಿ ಮತ್ತು ಪಿಸಿ ಪಕ್ಷಗಳು ತಲಾ ಒಂದೊಂದು ಸ್ಥಾನ ಗಳಿಸಲಷ್ಟೇ ಶಕ್ತವಾಗಿವೆ.

ಕಾಶ್ಮೀರ ಭಾಗದ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಸ್ವತಂತ್ರ ಅಭ್ಯರ್ಥಿಗಳು ಹಾಗೂ ಸಣ್ಣ ಪಕ್ಷಗಳು ಬಿಜೆಪಿಯೊಂದಿಗೆ ಒಳ ಒಪ್ಪಂದ ಮಾಡಿಕೊಂಡಿದ್ದವು ಎಂದು ಎನ್‌ಸಿ ಆರೋಪಿಸಿತ್ತು.

ಪ್ರಧಾನಿ ಮೋದಿ ಮತ್ತು ಗೃಹಸಚಿವ ಅಮಿತ್ ಶಾ ಅವರು ಎನ್‌ಸಿಯನ್ನು ಗುರಿಯಾಗಿಸಿಕೊಂಡೇ ಪ್ರಚಾರ ನಡೆಸಿದ್ದರು. ಇದು ಬಿಜೆಪಿ ವಿರೋಧಿ ಮತಗಳು ಎನ್‌ಸಿ ಪರವಾಗಿ ಕ್ರೋಡೀಕರಣಗೊಳ್ಳುವಂತೆ ಮಾಡಿದೆ.

ಸಂವಿಧಾನದ ವಿಧಿ 370ರ ಅಡಿಯಲ್ಲಿ ನೀಡಲಾಗಿದ್ದ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ತೆರವುಗೊಳಿಸಿದ ನಂತರ ಕಾಶ್ಮೀರ-ದಾದ್ಯಂತ ಜನರಲ್ಲಿ ಬಿಜೆಪಿ ವಿರೋಧಿ ಭಾವನೆ ಪ್ರಬಲವಾಗಿ ಮೂಡಿರುವುದು ಎನ್‌ಸಿಯ ಯಶಸ್ಸಿಗೆ ಮತ್ತು ಸಣ್ಣ ಪಕ್ಷಗಳ ಸೋಲಿಗೆ ಕಾರಣ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಒಮರ್ ಅಬ್ದುಲ್ಲಾಗೆ ಎರಡೂ ಕ್ಷೇತ್ರಗಳಲ್ಲಿ ಜಯ: ಲೋಕಸಭಾ ಚುನಾವಣೆಯಲ್ಲಿ ಬಾರಾಮುಲ್ಲಾ ಕ್ಷೇತ್ರದಿಂದ ಎರಡು ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಸೋತಿದ್ದ ಒಮರ್ ಅವರು ಗಂದೆರ್‌ಬಲ್ ಮತ್ತು ಬಡ್‌ಗಾಮ್ ಎರಡೂ ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದ್ದಾರೆ.

ಪಕ್ಷದ ಗೆಲುವನ್ನು ಸಂಭ್ರಮಿಸಿ ಮಾತನಾಡಿರುವ ಒಮರ್ ಅಬ್ದುಲ್ಲಾ, 'ಒಂದು ಕಾಲದಲ್ಲಿ ಎನ್‌ಸಿಯನ್ನು ಕಡೆಗಣಿಸಲು ಯತ್ನಿಸಿದವರು, ಈಗ ಅಪ್ರಸ್ತುತರಾಗಿದ್ದಾರೆ' ಎಂದು ಹೇಳಿದ್ದಾರೆ. ಪಕ್ಷದ ಮೇಲೆ ಜನರು ಇಟ್ಟಿರುವ ನಂಬಿಕೆಯನ್ನು ಉಳಿಸಲು ಮುಂದಿನ ಐದು ವರ್ಷಗಳಲ್ಲಿ ಗಮನ ಹರಿಸುವುದಾಗಿ ಅವರು ತಿಳಿಸಿದ್ದಾರೆ.

ಒಮರ್ ಮುಂದೆ ಸವಾಲು

ಜಮ್ಮು ಮತ್ತು ಕಾಶ್ಮೀರದ ರಾಜಕಾರಣದ ಪ್ರಭಾವಿ ಅಬ್ದುಲ್ಲಾ ಕುಟುಂಬದ ಕುಡಿಯಾಗಿರುವ, 54 ವರ್ಷದ ಒಮರ್ ಅಬ್ದುಲ್ಲಾ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಹುದ್ದೆಗೇರಲು ಸಜ್ಜಾಗಿ ನಿಂತಿದ್ದಾರೆ.

ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎರಡೂ ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದ್ದು ಮಾತ್ರವಲ್ಲದೇ, ತಮ್ಮ ಪಕ್ಷ ನ್ಯಾಷನಲ್ ಕಾನ್ಫರೆನ್ಸ್‌ನ (ಎನ್‌ಸಿ) ಗಮನಾರ್ಹ ಸಾಧನೆಯ ರೂವಾರಿಯೂ ಆಗಿದ್ದಾರೆ.

ಮೂರು ಬಾರಿ (1998, 1999 ಮತ್ತು 2004) ಲೋಕಸಭೆಗೆ ಆಯ್ಕೆಯಾಗಿದ್ದರು. 2008ರಲ್ಲಿ ಎನ್‌ಸಿ–ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ ಮುಖ್ಯ-ಮಂತ್ರಿಯಾದರು.

ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ಈಗ ಯಾವುದೇ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲು ಲೆಫ್ಟಿನೆಂಟ್ ಜನರಲ್ ಅವರ ಒಪ್ಪಿಗೆ ಅಗತ್ಯ. ಹೀಗಿರುವಾಗ, ಮುಖ್ಯ-ಮಂತ್ರಿಯಾಗಲು ಸಿದ್ಧತೆ ನಡೆಸಿರುವ ಒಮರ್ ಅವರು ಕೇಂದ್ರಾಡಳಿತ ಪ್ರದೇಶದ ಆಡಳಿತ ನಡೆಸುವಾಗ ಎದುರಾಗುವ ಸವಾಲುಗಳನ್ನು ಹೇಗೆ ಎದುರಿಸಲಿದ್ದಾರೆ ಎಂಬುದು ಕುತೂಹಲ ಕೆರಳಿಸಿದೆ.

ಪ್ರಜಾತಂತ್ರದ ಗೆಲುವು

ಹರಿಯಾಣದಲ್ಲಿ ಬಿಜೆಪಿಯ ಗೆಲುವು ಪ್ರಜಾತಂತ್ರದ ಗೆಲುವು. ಜನರ ಈ ತೀರ್ಪನ್ನು ಕಾಂಗ್ರೆಸ್ ತಿರಸ್ಕರಿಸುವುದಾದರೆ, ಅದು ಪ್ರಜಾತಂತ್ರ ಮತ್ತು ಸಂವಿಧಾನವನ್ನು ತಿರಸ್ಕರಿಸಿದಂತೆ. ಅರಾಜಕತೆಯನ್ನು ಹರಡುವ ಮೂಲಕ ಕಾಂಗ್ರೆಸ್ ದೇಶವನ್ನು ದುರ್ಬಲಗೊಳಿಸಲು ಯತ್ನಿಸುತ್ತಿದೆ. ಹೀಗಾಗಿ ಅದು ಸಮಾಜದ ಬೇರೆ ಬೇರೆ ವರ್ಗಗಳನ್ನು ಎತ್ತಿಕಟ್ಟುತ್ತಿದೆ. ರೈತರನ್ನು ಎತ್ತಿಕಟ್ಟಲು ಕಾಂಗ್ರೆಸ್ ಹೇಗೆ ಯತ್ನಿಸಿತು ಎಂಬುದನ್ನು ದೇಶ ಕಂಡಿದೆ. ಹರಿಯಾಣದ ರೈತರು ಕಾಂಗ್ರೆಸ್ಸಿಗೆ ತಕ್ಕ ಉತ್ತರ ನೀಡಿದ್ದಾರೆ.

ಹರಿಯಾಣದ ಯಶಸ್ಸಿಗೆ ನಾಯಬ್ ಸಿಂಗ್ ಸೈನಿ ಮತ್ತು ಜೆ.ಪಿ. ನಡ್ಡಾ ಅವರು ಕಾರಣ. ಬಿಜೆಪಿ ಕೈಗೊಂಡ ಅಭಿವೃದ್ಧಿ ಕೆಲಸಗಳ ಕಾರಣದಿಂದಾಗಿ ಜನರು ಪಕ್ಷವನ್ನು ಅಧಿಕಾರಕ್ಕೆ ಮರಳಿ ತಂದಿದ್ದಾರೆ. ಆದರೆ, ಕಾಂಗ್ರೆಸ್ಸನ್ನು ಒಮ್ಮೆ ಅಧಿಕಾರದಿಂದ ಕಿತ್ತೊಗೆದ ನಂತರ ಜನರು, ಆ ಪಕ್ಷಕ್ಕೆ ಮತ್ತೆ ಅಧಿಕಾರ ಹಿಡಿಯಲು ಬಿಡುತ್ತಿಲ್ಲ.

ನರೇಂದ್ರ ಮೋದಿ, ಪ್ರಧಾನಿ

ಹರಿಯಾಣ: ಬಿಜೆಪಿಗೆ ಹ್ಯಾಟ್ರಿಕ್

ಒಂದನೇ ಪುಟದಿಂದ...

ಲೋಕಸಭಾ ಚುನಾವಣೆಯ ಫಲಿತಾಂಶದ ಬಳಿಕ ಆಕ್ರಮಣಕಾರಿಯಾಗಿದ್ದ 'ಇಂಡಿಯಾ' ಮೈತ್ರಿ-ಕೂಟವನ್ನು ಎದುರಿಸಲು ಹಾಗೂ ಸರ್ಕಾರದ ನೀತಿ ನಿರೂಪಣೆಗಳ ಬಗ್ಗೆ ಆಗಾಗ ಒಡಕು ಮಾತುಗಳನ್ನು ಆಡುತ್ತಿದ್ದ ಮಿತ್ರ ಪಕ್ಷಗಳನ್ನು ಸಂಭಾಳಿಸಲು ಬಿಜೆಪಿಗೆ ಈ ಜನಾದೇಶ 'ಟಾನಿಕ್'ನಂತಾಗಿದೆ.

ದೇಶದ ಶಕ್ತಿ ಕೇಂದ್ರ ದೆಹಲಿಗೆ ಅಂಟಿಕೊಂಡೇ ಇರುವ 'ಸಂಪದ್ಭರಿತ' ಸಣ್ಣ ರಾಜ್ಯದಲ್ಲಿ ಗೆಲ್ಲುವ ಕಾಂಗ್ರೆಸ್‌ನ ಮಹದಾಸೆ ಭಗ್ನಗೊಂಡಿದೆ. ಚುನಾವಣೆಗೆ ಮುನ್ನವೇ ಮುಖ್ಯಮಂತ್ರಿ ಗಾದಿಗಾಗಿ ಹಿರಿಯ ನಾಯಕರು ನಡೆಸಿದ್ದ ಒಳ ಜಗಳಕ್ಕೆ ಪಕ್ಷ ತಕ್ಕ ಬೆಲೆ ತೆತ್ತಿದೆ. ಸೋಲಿನ ಸರಮಾಲೆಯ ಸುಳಿಯಿಂದ ಗೆಲುವಿನ ಹಳಿಗೆ ಜಿಗಿಯುವ ಸುವರ್ಣಾವಕಾಶವೊಂ-ದನ್ನು ಪಕ್ಷ ಕೈಚೆಲ್ಲಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಬೆನ್ನೇರಿ ಅಧಿಕಾರದ ಗದ್ದುಗೆ ಹಿಡಿಯುವತ್ತ ಸಾಗಿರುವುದು ಕಾಂಗ್ರೆಸ್ ಪಾಲಿಗೆ ತೃಪ್ತಿಪಡುವ ವಿಷಯ.

ಮಹಾರಾಷ್ಟ್ರ ಹಾಗೂ ಜಾರ್ಖಂಡ್ ವಿಧಾನಸಭೆಗಳ ಚುನಾವಣೆಗಳು ಕದ ಬಡಿದಿರುವ ಈ ಹೊತ್ತಿನಲ್ಲಿ ಕಂಡುಬಂದಿರುವ ಈ ರಾಜಕೀಯ ಪಲ್ಲಟ ಕಾಂಗ್ರೆಸ್ ಪಾಲಿಗೆ ಶುಭ ಸುದ್ದಿಯಲ್ಲ. ಉಭಯ ರಾಜ್ಯಗಳಲ್ಲಿ ಪಕ್ಷದ ಚುನಾವಣಾ ಕಾರ್ಯ-ತಂತ್ರವನ್ನು ಬದಲಿಸಬೇಕಾದ ಅನಿವಾರ್ಯತೆಯ ಸಂದೇಶವನ್ನು ಹರಿಯಾಣದ ಫಲಿತಾಂಶವು ರವಾನಿಸಿದೆ. 'ಗ್ಯಾರಂಟಿ' ಹಾಗೂ 'ಜಾತಿ ಗಣತಿ'ಯನ್ನಷ್ಟೇ ನಂಬಿಕೊಂಡು ಪ್ರಚಾರ ನಡೆಸಿದ್ದ 'ಕೈ' ಪಾಳಯದ ನಾಯಕರ ಕನಸಿಗೆ ಈ ಫಲಿತಾಂಶ ತಣ್ಣೀರು ಎರಚಿದೆ.

1966ರಲ್ಲಿ ಹರಿಯಾಣ ರಾಜ್ಯ ಅಸ್ತಿತ್ವಕ್ಕೆ ಬಂದ ಬಳಿಕ ಯಾವುದೇ ಪಕ್ಷಕ್ಕೆ ಸತತ ಮೂರನೇ ಅವಧಿಗೆ ಗದ್ದುಗೆ ಏರಲು ಸಾಧ್ಯವಾಗಿರಲಿಲ್ಲ. ಇದೀಗ, ಈ ಶ್ರೇಯಕ್ಕೆ ಕೇಸರಿ ಪಾಳಯ ಪಾತ್ರವಾಗಿದೆ.

ಕೇಂದ್ರಾಡಳಿತ ಪ್ರದೇಶವಾದ ಮೇಲೆ ಕಣಿವೆ ರಾಜ್ಯದಲ್ಲಿ ಮೊದಲ ಬಾರಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮೈತ್ರಿಕೂಟ ಗೆಲುವಿನ ನಗೆ ಬೀರಿದೆ. ಸಂವಿಧಾನದ 370ನೇ ವಿಧಿಯಡಿ ರಾಜ್ಯಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸಿದ ನಿರ್ಧಾರವನ್ನೇ ಚುನಾವಣಾ ಅಸ್ತ್ರವನ್ನಾಗಿ ಮಾಡಿಕೊಂಡಿದ್ದ ಬಿಜೆಪಿಗೆ ನಿರಾಸೆಯಾಗಿದೆ. ಹಿಂದೂಗಳ ಪ್ರಾಬಲ್ಯದ ಜಮ್ಮುವಿನಲ್ಲಿ ಬಿಜೆಪಿಗೆ ಹಾಗೂ ಮುಸ್ಲಿಮರ ಬಾಹುಳ್ಯದ ಕಾಶ್ಮೀರದಲ್ಲಿ ಮೈತ್ರಿಕೂಟಕ್ಕೆ ಮತದಾರರು ಬಹುಪರಾಕ್ ಎಂದಿದ್ದಾರೆ. 'ಕಿಂಗ್ ಮೇಕರ್'ಗಳಾಗುವ ಕನಸು ಕಂಡ ಪಕ್ಷಗಳನ್ನು ಜನರು ಸಾರಾಸಗಟಾಗಿ ತಿರಸ್ಕ-ರಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,795
ಇಂದಿನ ಅಂತ್ಯ	25,013
▲	217
ದಿನದ ಗರಿಷ್ಠ	25,044

ಎನ್‌.ಆರ್‌.ಪುರ ರಬ್ಬರ್



ಆರ್‌ಎಸ್‌ಎಸ್‌-4 ₹208
ಆರ್‌ಎಸ್‌ಎಸ್‌-5 ₹204
ಗುಡ್ ಲಾಟ್ ₹195
(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹230-512
ದ್ವಿತಳಿ (ಬಿ.ವಿ) ₹300-703

ಕೆ.ಜಿ ₹450 ಬೆಲೆ • ಫೆಬ್ರುವರಿ ವೇಳೆಗೆ ಧಾರಣೆ ಇಳಿಕೆ ನಿರೀಕ್ಷೆ: ವ್ಯಾಪಾರಿಗಳ ಅನಿಸಿಕೆ

ಹಬ್ಬದ ಋತು; ಬೆಳ್ಳುಳ್ಳಿ ದರ ಏರಿಕೆ ಬಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಬ್ಬದ ಋತುವಿನಲ್ಲಿ ಗ್ರಾಹಕರಿಗೆ ಬೆಳ್ಳುಳ್ಳಿ ದರ ಏರಿಕೆಯ ಬಿಸಿ ತಟ್ಟಿದೆ. ಪ್ರಸ್ತುತ ಚಿಲ್ಲರೆ ಮಾರುಕಟ್ಟೆಗಳಲ್ಲಿ ಕೆ.ಜಿ ಬೆಳ್ಳುಳ್ಳಿ ಧಾರಣೆಯು ₹450 ದಾಟಿದೆ.

ವಿಪರೀತ ಮಳೆ, ವಾತಾವರಣದಲ್ಲಿನ ಏರುಪೇರಿನಿಂದಾಗಿ ರಾಜಸ್ಥಾನ ಮತ್ತು ಗುಜರಾತ್‌ನಿಂದ ಮಾರುಕಟ್ಟೆಗೆ ಬರುತ್ತಿದ್ದ ಬೆಳ್ಳುಳ್ಳಿ ಆವಕದಲ್ಲಿ ಕುಸಿತವಾಗಿದೆ. ಮಧ್ಯಪ್ರದೇಶದಿಂದ ಇಲ್ಲಿನ ಮಾರುಕಟ್ಟೆಗೆ ಕಡಿಮೆ ಪ್ರಮಾಣದಲ್ಲಿ ಪೂರೈಕೆಯಾಗಿದೆ. ಇದರಿಂದ ದರ ಏರಿಕೆಯಾಗಿದೆ. ಜನವರಿ, ಫೆಬ್ರುವರಿಯಲ್ಲಿ ಹೊಸ ಫಸಲು ಬರಲಿದ್ದು, ಪೂರೈಕೆ ಹೆಚ್ಚಲಿದೆ ಎಂದು ಯಶವಂತಪುರ ಎಪಿಎಂಸಿಯ ಬೆಳ್ಳುಳ್ಳಿ ವರ್ತಕ ಜುಬೇರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಎರಡು ವಾರದ ಹಿಂದೆ ಪ್ರತಿನಿತ್ಯ 6 ಸಾವಿರದಿಂದ 7 ಸಾವಿರ ಚೀಲ (ಪ್ರತಿ ಚೀಲ 50 ಕೆ.ಜಿ) ಬೆಳ್ಳುಳ್ಳಿ ಮಾರುಕಟ್ಟೆಗೆ ಆವಕ ಆಗುತ್ತಿತ್ತು. ಪ್ರಸ್ತುತ 2 ಸಾವಿರ ಚೀಲಕ್ಕೆ ಇಳಿದಿದೆ. ಸಾಲು ಸಾಲು ಹಬ್ಬಗಳು ನಡೆಯುವ ಕಾರಣ ಬೆಳ್ಳುಳ್ಳಿಗೆ ಬೇಡಿಕೆ ಹೆಚ್ಚಿದ್ದು, ಆವಕ ಕಡಿಮೆ ಇರುವುದರಿಂದ ದರವು ಏರಿಕೆಯ ಪಥದಲ್ಲಿದೆ ಎಂದು ತಿಳಿಸಿದರು.

ಯಶವಂತಪುರದ ಮಾರುಕಟ್ಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ಕೆ.ಜಿ ಬೆಳ್ಳುಳ್ಳಿ ಸಗಟು ದರ ₹360 ಇತ್ತು. ಚಿಲ್ಲರೆ ಮಾರುಕಟ್ಟೆಯಲ್ಲಿ ₹400 ದಾಟಿದೆ.

'ಬೆಳ್ಳುಳ್ಳಿ ದರ ಏರಿಕೆಯಲ್ಲಿರುವುದರಿಂದ ಹೆಚ್ಚಿನ ರೈತರು ಬೆಳ್ಳುಳ್ಳಿ ನಾಟಿ ಮಾಡಿದ್ದಾರೆ. ಈಗಾಗಲೇ ಬಿತ್ತನೆ ಮಾಡಿರುವ ಬೆಳ್ಳುಳ್ಳಿಯು ಸಂಕ್ರಾಂತಿ ವೇಳೆಗೆ ಕಟಾವಿಗೆ ಬರಲಿದ್ದು, ಫೆಬ್ರುವರಿಯಲ್ಲಿ ಕೆ.ಜಿ ದರ ₹150ಕ್ಕೆ ಇಳಿಕೆಯಾಗಬಹುದು' ಎಂದು ವರ್ತಕ ನಾಗರಾಜ್ ಹೇಳಿದ್ದಾರೆ.

ಮಧ್ಯಪ್ರದೇಶದ ಸಗಟು ಮಾರುಕಟ್ಟೆಯಲ್ಲಿ ಮಂಗಳವಾರ ಕೆ.ಜಿ ಬೆಳ್ಳುಳ್ಳಿ ₹400 ಆಗಿದೆ. ಕಳೆದ ಮೂರು ದಿನದ ವಹಿವಾಟಿನಲ್ಲಿ ಕೆ.ಜಿಗೆ ₹50 ಹೆಚ್ಚಳವಾಗಿದೆ. ಅದರಿಂದ ಅಲ್ಲಿಯೇ ಉತ್ತಮ ಬೆಲೆ ದೊರೆಯುತ್ತಿರುವುದರಿಂದ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಬೆಳ್ಳುಳ್ಳಿ ಬರುತ್ತಿಲ್ಲ. ಒಂದು ವೇಳೆ ಮಾರುಕಟ್ಟೆಗೆ ಬಂದರೂ, ಸಾಗಣೆ ವೆಚ್ಚ ಇತರೆ ಸೇರಿ ದರ ಹೆಚ್ಚಾಗಲಿದೆ ಎಂದು ಹೇಳಿದ್ದಾರೆ.

ದರ ಏರಿಕೆ: ರೈತರಿಗೆ ಸಂತಸ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಈರುಳ್ಳಿ, ಟೊಮೆಟೊ ದರ ಏರಿಕೆಯ ಬೆನ್ನಲ್ಲೆ ಬೆಳ್ಳುಳ್ಳಿ ದರವೂ ಏರಿಕೆಯತ್ತ ಸಾಗುತ್ತಿದ್ದು, ಬೆಳೆಗಾರರಿಗೆ ಖುಷಿ ತಂದಿದೆ.

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹25 ಸಾವಿರಕ್ಕೆ ತಲುಪಿದೆ. ತಾಲ್ಲೂಕಿನಾದ್ಯಂತ ರೈತರು ಬೆಳ್ಳುಳ್ಳಿಯನ್ನು ಈಗಾಗಲೇ ಕಟಾವು ಮಾಡಿದ್ದಾರೆ. ಕಣದಲ್ಲಿ ಮತ್ತು ಮನೆ ಆವರಣದಲ್ಲಿ ಗೂಡು ಮತ್ತು ಬಣವೆ ಹಾಕಿ ಒಣಗಿಸುತ್ತಿದ್ದಾರೆ.

ದಪ್ಪ ಬೆಳ್ಳುಳ್ಳಿ ದರ ಕ್ವಿಂಟಲ್‌ಗೆ ₹18 ಸಾವಿರದಿಂದ ₹25 ಸಾವಿರ, ಸಣ್ಣದು ಕ್ವಿಂಟಲ್‌ಗೆ ₹20 ಸಾವಿರದಿಂದ ₹21 ಸಾವಿರ, ಪುಡಿ ಬೆಳ್ಳುಳ್ಳಿ ಕ್ವಿಂಟಲ್‌ಗೆ ₹15 ಸಾವಿರದಿಂದ ₹19 ಸಾವಿರ ಇದೆ. ಬೇಸಿಗೆ ಬೆಳೆಯಾಗಿ ಬೆಳ್ಳುಳ್ಳಿಯನ್ನು ಬೆಳೆಯಲಾಗುತ್ತಿದ್ದು ವಿಜಯಪುರ, ಬೆಳಗಾವಿ, ಚಿತ್ರದುರ್ಗ ಹಾಗೂ ಮಹಾರಾಷ್ಟ್ರದ ಕೆಲ ಜಿಲ್ಲೆಗಳ ವ್ಯಾಪಾರಸ್ಥರು ಬಿತ್ತನೆ ಬೀಜಕ್ಕಾಗಿ ಈ ಭಾಗದಿಂದ ಬೆಳ್ಳುಳ್ಳಿ ಖರೀದಿಸಲು ಮುಂದಾಗಿದ್ದು ಬೆಳ್ಳುಳ್ಳಿಗೆ ಬೇಡಿಕೆ ಹೆಚ್ಚಾಗಲು ಕಾರಣವಾಗಿದೆ.

ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ಎಪಿಎಂಸಿ ಉಪ ಪ್ರಾಂಗಣದಲ್ಲಿ ಹರಾಜಾದ ಬೆಳ್ಳುಳ್ಳಿ ಚೀಲಗಳು

ಯಥಾಸ್ಥಿತಿ: ಹುಬ್ಬಳ್ಳಿ ಮಾರುಕಟ್ಟೆಯಲ್ಲಿ ಬೆಳ್ಳುಳ್ಳಿ ಪ್ರತಿ ಕೆ.ಜಿ.ಗೆ ₹320ರಿಂದ ₹400 ರವರೆಗೆ ಇದೆ. ಕಳೆದ ಒಂದು ತಿಂಗಳಿನಿಂದ ಇದೇ ದರ ಮುಂದುವರಿದಿದೆ ಎಂದು ಜನತಾ ಬಜಾರ್ ವ್ಯಾಪಾರಿ ತೋಟಯ್ಯ ಹಿರೇಮಠ ತಿಳಿಸಿದರು. ಉತ್ತರ ಕನ್ನಡ ಜಿಲ್ಲೆಯ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ ಬೆಳ್ಳುಳ್ಳಿ ದರವು ಸರಾಸರಿ ₹360ರಿಂದ ₹400 ಇದೆ. ಕಳೆದ ಹಲವು ವಾರಗಳಿಂದ ದರದಲ್ಲಿ ಹೆಚ್ಚಿನ ವ್ಯತ್ಯಾಸ ಆಗಿಲ್ಲ ಎಂದು ವ್ಯಾಪಾರಿಗಳು ಹೇಳುತ್ತಾರೆ. ಗದಗ ಜಿಲ್ಲೆಯಲ್ಲಿ ಮಾರಾಟವಾಗುವ ಗುಣಮಟ್ಟದ ವಿಜಯಪುರ ಬೆಳ್ಳುಳ್ಳಿ ಕೆ.ಜಿ.ಗೆ ₹280 ಇದೆ. ಬಿ ಮತ್ತು ಸಿ ಗ್ರೇಡ್ ಬೆಳ್ಳುಳ್ಳಿ ಕೆ.ಜಿ.ಗೆ ₹220ರಿಂದ ₹250 ಇದೆ.

ಹೊಸಪೇಟೆ ಮಾರುಕಟ್ಟೆಯಲ್ಲಿ ಚಿಲ್ಲರೆ ಬೆಳ್ಳುಳ್ಳಿ ದರ ಕೆ.ಜಿ.ಗೆ ₹280ರಿಂದ ₹300ರಷ್ಟಿದೆ. ಸಗಟು ಮಾರಾಟದ ಬೆಳ್ಳುಳ್ಳಿ ದರ ₹270ರಷ್ಟಿದೆ ಎಂದು ದಿನಸಿ ವ್ಯಾಪಾರಿ ಕೃಷ್ಣಮೂರ್ತಿ ತಿಳಿಸಿದರು.

10 ದಿನಗಳಲ್ಲಿ ₹100 ಏರಿಕೆ

ಮಂಗಳೂರು: ಬೆಳ್ಳುಳ್ಳಿ ದರ ಏರುಗತಿಯಲ್ಲಿ ಸಾಗಿದ್ದು, 10 ದಿನಗಳಲ್ಲಿ ಪ್ರತಿ ಕೆ.ಜಿ.ಯ ಮೇಲೆ ₹100ರಷ್ಟು ಹೆಚ್ಚಳವಾಗಿದೆ. ಉತ್ತಮ ಗುಣಮಟ್ಟದ ಬೆಳ್ಳುಳ್ಳಿ ಕೆ.ಜಿ.ಯೊಂದಕ್ಕೆ ₹250 ಇದ್ದಿದ್ದು, ಪ್ರಸ್ತುತ ₹370ರಷ್ಟಾಗಿದೆ.

ಮೂರು ಮಾದರಿಯ ಬೆಳ್ಳುಳ್ಳಿ ಮಾರುಕಟ್ಟೆಗೆ ಬರುತ್ತದೆ. ಸಣ್ಣ ಗಾತ್ರದ ಬೆಳ್ಳುಳ್ಳಿಗೆ ಸಗಟು ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹200 ರಷ್ಟು ಇತ್ತು, ಇದರ ಬೆಲೆ ಈಗ ₹300ಕ್ಕೆ ತಲುಪಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಇನ್ನೂ ಹೆಚ್ಚಿನ ದರಕ್ಕೆ ಮಾರಾಟವಾಗುತ್ತಿದೆ ಎನ್ನುತ್ತಾರೆ ಬಂದರಿನ ವ್ಯಾಪಾರಿ ರಮೇಶ್.

'ಒಂದು ತಿಂಗಳಿನಿಂದ ಬೆಳ್ಳುಳ್ಳಿ ದರ ಏರುತ್ತಲೇ ಇದೆ. ಈಗ ಮತ್ತಷ್ಟು ಹೆಚ್ಚಾಗಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹400 ತಲುಪಿದೆ. ಬೆಳೆ ಕಡಿಮೆ ಆಗಿರುವ ಕಾರಣಕ್ಕೆ ದರ ಏರಿಕೆಯಾಗಿದ್ದು, ಸದ್ಯದಲ್ಲಿ ಪೂರೈಕೆಯಲ್ಲಿ ಕೊರತೆ ಆಗಿಲ್ಲ' ಎನ್ನುತ್ತಾರೆ ಸಗಟು ವ್ಯಾಪಾರಿ ಲೋಕೇಶ್.

ಹಮ್‌ಸಫರ್ ನೀತಿಗೆ ಕೇಂದ್ರ ಸಚಿವ ಗಡ್ಕರಿ ಚಾಲನೆ

ನವದೆಹಲಿ (ಪಿಟಿಐ): ದೇಶದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸುವ 'ಹಮ್‌ಸಫರ್ ನೀತಿ'ಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಮಂಗಳವಾರ ಚಾಲನೆ ನೀಡಿದ್ದಾರೆ.

'ಹಮ್‌ಸಫರ್' ನೀತಿಯು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸ್ವಚ್ಛ ಶೌಚಾಲಯಗಳು, ಶಿಶುಪಾಲನಾ ಕೊಠಡಿಗಳು, ಗಾಲಿಕುರ್ಚಿಗಳ ಒದಗಿಸುವಿಕೆ, ಇ.ವಿ ಚಾರ್ಜಿಂಗ್ ಕೇಂದ್ರಗಳು, ಪಾರ್ಕಿಂಗ್ ಸೇರಿ ಹಲವು ಉನ್ನತ ಗುಣಮಟ್ಟದ ಸೌಲಭ್ಯ ಒದಗಿಸುತ್ತದೆ. ಈ ನೀತಿಯು ಹೆದ್ದಾರಿ ಬಳಕೆದಾರರಿಗೆ ಅನುಕೂಲಕರ, ಸುರಕ್ಷತೆಯನ್ನು ಒದಗಿಸುತ್ತದೆ. ಉದ್ಯೋಗ ಸೃಷ್ಟಿಸುವ ಜೊತೆಗೆ ಸೇವಾ ಪೂರೈಕೆದಾರರಿಗೆ ಜೀವನೋಪಾಯವನ್ನು ನೀಡಲಿದೆ.

'ಪ್ರಯಾಣಿಕರು ಮತ್ತು ಚಾಲಕರಿಗೆ ಸುರಕ್ಷತೆ ಮತ್ತು ಸೌಕರ್ಯಗಳನ್ನು ಈ ನೀತಿಯು ಕಲ್ಪಿಸಲಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಗುಣಮಟ್ಟ, ಪ್ರಮಾಣಿತ ಸೇವೆಗಳನ್ನು ಒದಗಿಸಲಾಗುವುದು' ಎಂದು ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಶಿವಮೊಗ್ಗ	
ಬೆಟ್ಟೆ	42519-54899
ಗೊರಬಲು	15009-33269
ರಾಶಿ	30610-49000
ಸರಕು	49199-82996
ಸಾಗರ	
ಬಿಳಿಗೋಟು	18111-24489
ಚಾಲಿ	25699-32809
ಕೋಕ	12632-24832
ಕೆಂಪುಗೋಟು	18219-29500
ರಾಶಿ	24319-49270
ಸಿಪ್ಪೆಗೋಟು	7999-16725
ಸಿದ್ದಾಪುರ	
ಬಿಳಿಗೋಟು	24299-27899
ಚಾಲಿ	30609-34109
ಕೋಕ	23409-26989
ಕೆಂಪುಗೋಟು	20699-20699
ರಾಶಿ	40889-45899
ತಟ್ಟಿಬೆಟ್ಟೆ	32089-45099
ಶಿರಸಿ	
ಬೆಟ್ಟೆ	27209-37001
ಬಿಳಿಗೋಟು	21260-30009
ಚಾಲಿ	32339-35018
ರಾಶಿ	40508-44791

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಕುಮಾರ್ ಎಚ್‌.ಎಸ್, ಊರು ತಿಳಿಸಿಲ್ಲ.

- **ಪ್ರಶ್ನೆ: ನಾನು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಲು ಆಸಕ್ತಿ ಇದ್ದು, ಹೇಗೆ ಹೂಡಿಕೆ ಮಾಡಬೇಕೆಂದು ತಿಳಿಸಿಕೊಡಿ.**

ಉತ್ತರ: ನಿಮ್ಮ ಪ್ರಶ್ನೆ ಸಹಜವಾದದ್ದು ಹಾಗೂ ಮೂಲಭೂತವಾಗಿ ನಿಮ್ಮ ಹೂಡಿಕೆಯ ಮೊತ್ತವನ್ನು ಕಾಲಾನುಕ್ರಮದಲ್ಲಿ ವರ್ಧಿಸುವಂತೆ ಮಾಡುವುದು ಉದ್ದೇಶವಾಗಿದೆ ಎನ್ನುವುದು ಎಲ್ಲ ಹೂಡಿಕೆಗಳ ಮೂಲ ಆಶಯ. ಹೀಗಾಗಿ, ಈ ಅಂಕಣದ ಹಿಂದಿನ ಹಾಗೂ ಮುಂದಿನ ಸಂಚಿಕೆಗಳನ್ನು ಅವಕಾಶವಿದ್ದಾಗ ಓದುವಂತೆ ಉತ್ತಮ. ಇದಲ್ಲದೆ, ನಿಮ್ಮ ಪ್ರಶ್ನೆಗೆ ಸಂಬಂಧಿಸಿ, ಮೊದಲ ಹಂತದಿಂದಲೇ ಅಗತ್ಯ ಮಾಹಿತಿ ನೀಡುವುದಕ್ಕೋಸ್ಕರ ಈ ಕೆಳಗಿನ ಸಾಮಾನ್ಯ ಮಾಹಿತಿಗಳನ್ನು ಗಮನಿಸಿ ಹೂಡಿಕೆ ಆರಂಭಿಸಿ.

- ಮೊದಲ ಹಂತದಲ್ಲಿ ಮ್ಯೂಚುವಲ್ ಫಂಡ್ ಹೌಸ್‌ಗಳ ಮಾಹಿತಿ ಪಡೆದುಕೊಳ್ಳಿ. ಅನೇಕ ವರ್ಷಗಳ ವಿಶ್ವಾಸಾರ್ಹತೆ ಇರುವ ಹಾಗೂ ಹೂಡಿಕೆದಾರರ ದೊಡ್ಡ ಮೊತ್ತದ ಆಸ್ತಿ ಮೊತ್ತ ನಿರ್ವಹಿಸುವ ಫಂಡ್‌ಗಳಿಗೆ ಮೊದಲ ಆದ್ಯತೆ ಇರಲಿ. ಅದರಲ್ಲಿ ನಿಮ್ಮ ಹೂಡಿಕೆಯನ್ನು ಏಕ ಕಂತುಗಳಲ್ಲಿ ಮಾರುಕಟ್ಟೆ ಕೆಳ ಹಂತದಲ್ಲಿದ್ದಾಗ ಅಂದರೆ ಬಿಎಸ್‌ಸಿ ಅಥವಾ ಎನ್‌ಎಸ್‌ಸಿ ಮುಖ್ಯ ಸೂಚ್ಯಂಕಗಳು ಸತತ ಶೇ 5 ಅಥವಾ ಶೇ 10ರ ಕೆಳ ಮಟ್ಟದಲ್ಲಿ ವಹಿವಾಟು ನಡೆಸುತ್ತಿದ್ದರೆ ಆ ಸಮಯ ನಿಧಾನವಾಗಿ ಹೂಡಿಕೆಗೆ ಅನುವಾಗಿ. ಮಾಸಿಕ ಕಂತುಗಳಲ್ಲೂ ಹೂಡಿಕೆಗೆ ಅವಕಾಶ ಇರುವುದನ್ನೇ ಹೆಚ್ಚಾಗಿ ಆಯ್ಕೆ ಮಾಡಿ.
- ಅಗತ್ಯವಾಗಿ ನಿಮ್ಮ ಕೆವೈಸಿ ದಾಖಲೆ ಬ್ಯಾಂಕ್ ಖಾತೆ ಮಾಹಿತಿ, ನಾಮಿನಿ ಮಾಹಿತಿ ಭರಿಸಿ ಆನ್‌ಲೈನ್ ಮೂಲಕವೂ ಖಾತೆ ತೆರೆಯಬಹುದು.
- ನಿಮ್ಮ ಹೂಡಿಕೆಯ ಕಾಲ ಮಿತಿ, ಉದ್ದೇಶ, ನೀವು ನಿರೀಕ್ಷಿಸುವ ಲಾಭ, ಮುಂದಿನ ದಿನಗಳಲ್ಲಿ ನಿಮ್ಮಲ್ಲಿ ಹೆಚ್ಚುವರಿ ಹೂಡಿಕೆಗೆ ಇರುವ ಹಣ, ಪ್ರತಿಕೂಲ ಸ್ಥಿತಿಗಳಲ್ಲಿ ನಿಮ್ಮ ಹೂಡಿಕೆ ಕೆಲವೊಮ್ಮೆ ಒಂದು ವರ್ಷಕ್ಕಿಂತ ದೀರ್ಘ ಅವಧಿ ಮಾರುಕಟ್ಟೆ ಚೇತರಿಸದಿದ್ದರೆ ಆ ಸಂದರ್ಭವನ್ನು ನಿಭಾಯಿಸುವ ಬಗ್ಗೆ ಪೂರ್ವ ಯೋಜನೆ ಸಿದ್ಧಪಡಿಸಿ.
- ನಿಮ್ಮ ಹೂಡಿಕೆಯು ಏಕ ಕಂತಿನಲ್ಲಿ ಮಾಡುವುದಿದ್ದರೆ ಹಾಗೂ 5 ವರ್ಷಕ್ಕಿಂತ ಹೆಚ್ಚಿನ ಅವಧಿಗಾಗಿದ್ದರೆ ಈಕ್ವಿಟಿ ಹೂಡಿಕೆಗಳು ಉತ್ತಮ. ಮೂರರಿಂದ ಐದು ವರ್ಷದ ಅವಧಿಗೆ ಈಕ್ವಿಟಿ ಫಂಡ್‌ಗಳು ಉತ್ತಮ. ಇವಲ್ಲದೆ ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಹೂಡಿಕೆಗೆಗಳನ್ನು (ಉದಾ: ಬ್ಯಾಂಕಿಂಗ್, ಪಿಎಸ್‌ಯು, ಎನರ್ಜಿ, ಡಿವಿಡೆಂಡ್, ಟೆಕ್ನಾಲಜಿ, ಗೋಲ್ಡ್ ಫಂಡ್ ಇತ್ಯಾದಿ) ಕೂಡಾ ಆರಿಸಬಹುದು. ಆದರೆ ಇವೆಲ್ಲಾ ಈಕ್ವಿಟಿ ಫಂಡ್ ಆಗಿದ್ದು, ಆಯಾ ಕಾಲಕ್ಕೆ ತಕ್ಕಂತೆ ಆಗುವ ಆಯಾ ಕ್ಷೇತ್ರದ ಏರಿಳಿತಕ್ಕೆ ಸಂಬಂಧಿಸಿ ಲಾಭ-ನಷ್ಟ ನಿರ್ಣಯವಾಗುತ್ತದೆ. ನಿಮ್ಮ ಹೂಡಿಕೆ ಒಂದೆರಡು ವರ್ಷದ ಮಟ್ಟಿಗಾಗಿದ್ದರೆ ಈಕ್ವಿಟಿ ಸೇವಿಂಗ್ಸ್ ಫಂಡ್ ಅಥವಾ ಹೈಬ್ರಿಡ್ ಡೈನಮಿಕ್ ಫಂಡ್ ಉತ್ತಮ ಆಯ್ಕೆಯಾಗಬಹುದು. ಕಾರಣ ಈ ಫಂಡ್‌ನಲ್ಲಿ ಈಕ್ವಿಟಿ, ಡೆಬ್ಟ್ ಪ್ರಮಾಣವನ್ನು ಮಾರುಕಟ್ಟೆ ಸ್ಥಿತಿಗೆ ಅನುಗುಣವಾಗಿ ಬದಲಾಯಿಸಲಾಗುತ್ತದೆ.
- ವಿವಿಧ ವರ್ಗದ ಹೂಡಿಕೆಗಳಿಗೆ ವಿವಿಧ ತೆರಿಗೆ ದರ ಇದೆ. ಇದು ಹೂಡಿಕೆಯ ಅವಧಿಗೆ ಹೊಂದಿಕೊಂಡು ಬದಲಾಗುತ್ತದೆ. ಇನ್ನೂ ಮುಖ್ಯವಾಗಿ, ನೀವು ಅಗತ್ಯವಾಗಿ ಇನ್ನೂ ಹೆಚ್ಚಿನ ಮಾಹಿತಿಯನ್ನು ಓದಿ ತಿಳಿದು ಹೂಡಿಕೆಗೆ ಅನುವಾಗಿ.

ಹೇಮಲತಾ, ಶಿವಮೊಗ್ಗ

- **ಪ್ರಶ್ನೆ: ನನ್ನ ಮಗ ಕಳೆದ ಒಂದೆರಡು ವರ್ಷ ಹಿಂದೆ ಓದು ಮುಗಿಸಿ ಖಾಸಗಿ ಕಂಪನಿಯಲ್ಲಿ ವೃತ್ತಿಯಲ್ಲಿದ್ದಾನೆ. ಓದಿದ್ದು ಎಂ.ಕಾಂ. ಆತನ ಪ್ರಸ್ತುತ ಮಾಸಿಕ ವೇತನ ₹40 ಸಾವಿರದ ಅಂದಾಜು. ಇದಲ್ಲದೆ, ಪಿಎಫ್, ಕಂಪನಿ ಉದ್ಯೋಗಿಗಳ ವೈದ್ಯಕೀಯ ವಿಮಾ ಇತ್ಯಾದಿ ಸೌಲಭ್ಯ ಇದೆ. ಆತ ಕಳೆದ ಕೆಲವು ತಿಂಗಳಿಂದ ಷೇರು ಮಾರುಕಟ್ಟೆಯಲ್ಲಿ ಟ್ರೇಡಿಂಗ್ ಮಾಡುತ್ತಿದ್ದು, ಲಾಭ - ನಷ್ಟ ಎರಡೂ ಕಂಡಿದ್ದಾನೆ. ಒಟ್ಟಾರೆ ₹2-3 ಲಕ್ಷಗಳ ಹೂಡಿಕೆ ಇದೆ. ಆತನ ಕೆಲವು ತಿಂಗಳ ವೇತನ-ಉಳಿತಾಯ ಇದರಲ್ಲಿ ಬಳಕೆಯಾಗಿದೆ.**
ನಾನು ನಿವೃತ್ತ ಶಿಕ್ಷಕಿಯಾಗಿರುವುದರಿಂದ ನನಗೆ ಮಾಸಿಕ ಪೆನ್ಶನ್ ಸುಮಾರು ₹25 ಸಾವಿರ ಸಿಗುತ್ತಿದೆ. ಈ ಮೊತ್ತವನ್ನೂ ಹೂಡಿಕೆ ಮಾಡುವ ಬಗ್ಗೆ ನನ್ನಲ್ಲಿ ಕೇಳಿರುತ್ತಾನೆ. ಆದರೆ, ಈ ಬಗ್ಗೆ ಹೆಚ್ಚೇನೂ ಮಾಹಿತಿ ನನಗಿಲ್ಲದ ಕಾರಣ ಈ ಬಗ್ಗೆ ನಿರ್ಧಾರ ಹೇಗೆ ಕೈಗೊಳ್ಳಬೇಕು ಎಂಬ ಬಗ್ಗೆ ಸ್ಥೂಲ ಮಾಹಿತಿ ಬೇಕಾಗಿದೆ. ಸ್ವತಃ ಆತನ ಹೂಡಿಕೆ ಊಹಿಸಿದಂತೆ ಲಾಭ ತಂದಿಲ್ಲ ಎಂಬುದನ್ನು ಆತನೇ ಖಚಿತಪಡಿಸಿದ್ದಾನೆ. ಈ ಸಂದಿಗ್ಧ ಸ್ಥಿತಿಯಲ್ಲಿ ಆತ ಯಾವ ರೀತಿ ಹೂಡಿಕೆ ಮಾಡಬಹುದು ಎಂಬುದರ ಬಗ್ಗೆ ಮಾಹಿತಿ ನೀಡಿ. ಅದೇ ರೀತಿ ನನ್ನ ದುಡ್ಡು ಆತ ಹೇಗೆ ಬಳಸಿಕೊಳ್ಳಬಹುದು.

ಉತ್ತರ: ನಿಮ್ಮ ಪ್ರಶ್ನೆಯಲ್ಲಿ ಹೇಳಿರುವ ಸಮಸ್ಯೆಯಿಂದ ತಿಳಿಯುವುದೇನೆಂದರೆ, ಅವಕಾಶ ಹಾಗೂ ಅಭದ್ರತೆ ಎರಡೂ ಒಳಗೊಂಡಿದೆ. ಯಾವತ್ತೂ ಉತ್ತಮ ಹೂಡಿಕೆಗೆ ಉತ್ತಮ ಲಾಭ ಬರುವ ಅವಕಾಶ ಇದ್ದೇ ಇದೆ. ಅದೇ ರೀತಿ ಅದನ್ನು ಸಮರ್ಥವಾಗಿ ನಿಭಾಯಿಸುವ ಚಾಕಚಕ್ಯತೆ, ಅದಕ್ಕೆ ಅಗತ್ಯ ಬೀಳುವಷ್ಟು ಸಮಯ ಎರಡನ್ನೂ ನೀಡಬೇಕಾಗುತ್ತದೆ. ಅದಿದ್ದಾಗಲೇ ಹೂಡಿಕೆ ಸರಿಯಾಗುವುದು.

ನಿಮ್ಮ ಮಗನ ವಿಚಾರದಲ್ಲಿ ಅಗತ್ಯವಾಗಿ ಪೋರ್ಟ್‌ಫೋಲಿಯೊ ಮರು ಪರಿಶೀಲನೆ ಅಗತ್ಯವಿರಬಹುದು. ಇದಕ್ಕಾಗಿ ನುರಿತ ಹೂಡಿಕೆ ಸಲಹೆಗಾರರನ್ನು ಸಂಪರ್ಕಿಸಲಿ. ಇದಕ್ಕೂ ಮೊದಲು, ಯಾವತ್ತೂ ಹೂಡಿಕೆಗೂ ಮೊದಲು ಯದ್ವಾತದ್ವಾ ಮಾರುಕಟ್ಟೆ ದರ ಕಡಿಮೆ ಇರುವ ಷೇರುಗಳಾಗಿರಲಿ, ಯಾವುದೋ ಮಾಹಿತಿ ನೋಡಿ ಹೂಡಿಕೆ ಮಾಡುವ ಅಭ್ಯಾಸ ಬದಲಾಯಿಸಬೇಕಾಗಬಹುದು. ಅಪಾಯಕಾರಿ ಮಾರುಕಟ್ಟೆ ಪರಿಸ್ಥಿತಿಯಲ್ಲೂ ಎಷ್ಟೇ ಉತ್ತಮ ಕಂಪನಿಯ ಷೇರುಗಳಾದರೂ ಒಂದಷ್ಟು ನಷ್ಟ ಕಂಡುಕೊಳ್ಳುತ್ತವೆ. ಇದಲ್ಲದೆ, ಆಯಾ ಕಂಪನಿ ಹಾಗೂ ವಲಯವಾರು ವರದಿಗಳೂ ಒಟ್ಟಾರೆ ಹೂಡಿಕೆಯ ಮೇಲೆ ಪರಿಣಾಮ ಬೀರುತ್ತವೆ.

ನಿಮ್ಮ ಮಗ ಹೇಗಿದ್ದರೂ ಆರ್ಥಿಕ ಕ್ಷೇತ್ರದಲ್ಲಿ ಅನುಭವ ಹಾಗೂ ವಿದ್ಯಾಭ್ಯಾಸ ಹೊಂದಿರುವ ಕಾರಣ ಅವರ ಆ ಕ್ಷೇತ್ರದ ಅನುಭವ ಕೇವಲ ಕಂಪನಿಯ ಕೆಲಸಕ್ಕಲ್ಲದೆ ಸ್ವಂತ ಹೂಡಿಕೆಗೂ ಬಳಸಿಕೊಳ್ಳಲಿ. ಕೇವಲ ಹೂಡಿಕೆಗಿಂತ ಯಾವ ಕಂಪನಿಗಳಲ್ಲಿ ಹಾಗೂ ಯಾವ ಕ್ಷೇತ್ರದಲ್ಲಿ ಹೂಡಿಕೆ ಮಾಡಬೇಕೆನ್ನುವ ಆಯ್ಕೆ ಮೊದಲ ಹಂತದ್ದು, ಅದನ್ನು ಪ್ರತಿ ತ್ರೈಮಾಸಿಕ ಫಲಿತಾಂಶದೊಡನೆ ಪರಾಮರ್ಶಿಸಿ ಹೂಡಿಕೆ ಮಾಡುವುದು ಎರಡನೆಯ ಹಂತ, ಪ್ರತಿ ಬಾರಿ ಯಾವ ಹಂತದಲ್ಲಿ ಲಾಭ ಗಳಿಸಿ ಹೊರ ಬರಬೇಕು ಅಥವಾ ನಷ್ಟ ಆಗುತ್ತಿರುವ ಸಮಯ ಯಾವ ಹಂತದಲ್ಲಿ ಹೊರ ಬರಬೇಕೆನ್ನುವ ಪೂರ್ವ ನಿರ್ಧರಿತ ಮಾಹಿತಿ ಇರಬೇಕು.

ಇನ್ನು ನಿಮ್ಮ ಹಣವನ್ನು ವ್ಯವಸ್ಥಿತ ಮಾಸಿಕ ಹೂಡಿಕೆಗೆ ಸೀಮಿತಗೊಳಿಸಿ. ಮೊದಲ ಆಯ್ಕೆ ಮ್ಯೂಚುವಲ್ ಫಂಡ್, ಇದು ಬೇಡವೆಂದಾದರೆ, ಷೇರುಗಳ ಎಸ್‌ಐಪಿ. ಇದರಿಂದ ಒಂದೇ ಬಾರಿ ಹೂಡಿಕೆ ಮಾಡಿ ನಷ್ಟ ಮಾಡಿಕೊಳ್ಳುವ ಅಪಾಯ ಕಡಿಮೆ ಇರುತ್ತದೆ. ಈ ವಿಚಾರವನ್ನು ಹಂತ ಹಂತದಲ್ಲಿ ಹೂಡಿಕೆ ಮಾಡುವ ಮೂಲಕ ನಿಭಾಯಿಸಿ. ಉತ್ತಮ ಕಂಪನಿಗಳ ಹುಡುಕಾಟ ಹಾಗೂ ಹೂಡಿಕೆಯ ನಂತರ ನಿಗಾ ಇರಿಸಿ ನಿರ್ಧಾರ ಕೈಗೊಳ್ಳುವುದು ನಮ್ಮ ಗೃಮೆಯ ಬಂಡವಾಳ ನಷ್ಟವಾಗದಂತೆ ನೆರವಾಗುತ್ತದೆ ಹಾಗೂ ಮುಂದೆ ಸಂಪತ್ತು ಸೃಷ್ಟಿಸಲು ಇದೇ ಮೂಲ ಬಂಡವಾಳ. ಇದಕ್ಕೆ ದೀರ್ಘ ಕಾಲದ ಹೂಡಿಕೆ ನಿರಂತರತೆ ಹಾಗೂ ನಿರ್ಧಾರಗಳಲ್ಲಿ ಸ್ಥಿರತೆಯೂ ಅಗತ್ಯ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

ಚಹಾ ರಫ್ತು ಶೇ 23ರಷ್ಟು ಏರಿಕೆ

ಕೋಲ್ಕತ್ತ (ಪಿಟಿಐ): ಪ್ರಸಕ್ತ ವರ್ಷದ ಜನವರಿ–ಜುಲೈ ಅವಧಿಯಲ್ಲಿ ದೇಶದ ಚಹಾ ರಫ್ತು ಶೇ 23ರಷ್ಟು ಏರಿಕೆಯಾಗಿದೆ ಎಂದು ಚಹಾ ಮಂಡಳಿ ಮಂಗಳವಾರ ತಿಳಿಸಿದೆ.

2023ರ ಇದೇ ಅವಧಿಯಲ್ಲಿ ಚಹಾ ರಫ್ತು 11.67 ಕೋಟಿ ಟನ್‌ನಷ್ಟಿತ್ತು. ಅದು ಈ ಬಾರಿ 14.45 ಕೋಟಿ ಟನ್‌ಗೆ ಏರಿಕೆಯಾಗಿದೆ. ಪ್ರಸ್ತುತ ಒಂದು ಕೆ.ಜಿ ಚಹಾ ಪುಡಿ ಬೆಲೆ ₹256 ಇದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹264 ಇತ್ತು ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಭಾರತ ಯುವ ತಂಡದ ಮೇಲುಗೈ

ಚೆನ್ನೈ: ಪ್ರಬುದ್ಧ ಆಟವಾಡಿದ ಸೌರಾಷ್ಟ್ರದ ವಿಕೆಟ್ ಕೀಪರ್–ಬ್ಯಾಟರ್ ಹರವಂಶ್ ಸಿಂಗ್ ಪಂಗಾಲಿಯಾ ಅವರು ಕೊನೆಯ ಆಟಗಾರನ ನೆರವಿನಿಂದ ಶತಕ ಬಾರಿಸಿದರು. ಭಾರತ ತಂಡ, 19 ವರ್ಷದೊಳಗಿನವರ ಕ್ರಿಕೆಟ್ 'ಟೆಸ್ಟ್' ಪಂದ್ಯದ ಎರಡನೇ ದಿನ ಆಸ್ಟ್ರೇಲಿಯಾ ವಿರುದ್ಧ ಮೊದಲ ಇನಿಂಗ್ಸ್‌ನಲ್ಲಿ 492 ರನ್‌ಗಳ ದೊಡ್ಡ ಮೊತ್ತ ಗಳಿಸಿತು.

ಮಂಗಳವಾರ ದಿನದಾಟ ಮುಗಿದಾಗ, ಆಸ್ಟ್ರೇಲಿಯಾ 3 ವಿಕೆಟ್‌ಗೆ 142 ರನ್ ಗಳಿಸಿತು. ಪ್ರವಾಸಿ ತಂಡ, ಭಾರತದ ಮೊತ್ತಕ್ಕಿಂತ 350 ರನ್ ಹಿಂದಿದೆ.

ಪಂಗಾಲಿಯಾ 143 ಎಸೆತಗಳಲ್ಲಿ 117 ರನ್ ಹೊಡೆದರು. ಆರು ಸಿಕ್ಸರ್, ಏಳು ಬೌಂಡರಿಗಳನ್ನು ಬಾರಿಸಿದ ಅವರು ಕೊನೆಯ ವಿಕೆಟ್‌ಗೆ ಅನ್ಮೋಲ್ ಜೀತ್ ಸಿಂಗ್ (11, 50ಎ) ಜೊತೆ 90 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ: 133.3 ಓವರುಗಳಲ್ಲಿ 492 (ಹರವಂಶ್ ಸಿಂಗ್ ಪಂಗಾಲಿಯಾ 117, ನಿತ್ಯ ಪಾಂಡ್ಯ 94, ಕೆ.ಪಿ. ಕಾರ್ತಿಕೇಯ 71, ಸೋಹಮ್ ಪಟವರ್ಧನ್ 63, ನಿಖಿಲ್ ಕುಮಾರ್ 61; ಹ್ಯಾರಿ ಹೊಕ್‌ಸ್ತ್ರ 41ಕ್ಕೆ2, ಕ್ರಿಸ್ಟಿಯನ್ ಹೋವ್ 43ಕ್ಕೆ, ಓಲಿ ಪ್ಯಾಟರ್ಸನ್ 74ಕ್ಕೆ2); ಆಸ್ಟ್ರೇಲಿಯಾ: 44 ಓವರುಗಳಲ್ಲಿ 3 ವಿಕೆಟ್‌ಗೆ 142 (ಒಲಿವರ್ ಪೀಕೆ ಬ್ಯಾಟಿಂಗ್ 62, ಅಲೆಕ್ಸ್ ಲೀ ಯಂಗ್ ಬ್ಯಾಟಿಂಗ್ 45; ಮೊಹಮದ್ ಇನಾನ್ 27ಕ್ಕೆ2).

ಮಾಳವಿಕಾ ಮುನ್ನಡೆ, ಸಿಂಧುಗೆ ನಿರಾಸೆ

ವಾಂತಾ, ಫಿನ್ಲೆಂಡ್ (ಪಿಟಿಐ): ಭಾರತದ ಯುವ ಆಟಗಾರ್ತಿ ಮಾಳವಿಕಾ ಬನ್ಸೋಡ್ ಮಂಗಳವಾರ ಇಲ್ಲಿ ಆರಂಭವಾದ ಆರ್ಕಟಿಕ್ ಓಪನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ವಿಶ್ವದ 23ನೇ ಕ್ರಮಾಂಕದ ಸುಂಗ್ ಶುವೋ ಯುನ್ ಅವರಿಗೆ ಆಘಾತ ನೀಡಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ, ಪಿ.ವಿ. ಸಿಂಧು ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.

ಫೆಬ್ರುವರಿಯಲ್ಲಿ ಅಜರ್‌ಬೈಜಾನ್ ಇಂಟರ್‌ನ್ಯಾಷನಲ್‌ನಲ್ಲಿ ಚೊಚ್ಚಲ ಪ್ರಶಸ್ತಿ ಗೆದ್ದಿರುವ 23 ವರ್ಷ ವಯಸ್ಸಿನ ಮಾಳವಿಕಾ 21-19, 24-22ರಿಂದ ಚೀನಾ ತೈಪೆಯ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು.

ಅಗ್ರ ಶ್ರೇಯಾಂಕದ ರಾಚನೋಕ್ ಇಂಟನಾನ್ (ಥಾಯ್ಲೆಂಡ್) ಮತ್ತು 2022ರ ವಿಶ್ವ ಚಾಂಪಿಯನ್ ವಾಂಗ್ ಝಿ ಯಿ (ಚೀನಾ) ನಡುವಿನ ಪಂದ್ಯದ ವಿಜೇತರನ್ನು ಮುಂದಿನ ಸುತ್ತಿನಲ್ಲಿ ಮಾಳವಿಕಾ ಎದುರಿಸಲಿದ್ದಾರೆ.

ಆರನೇ ಶ್ರೇಯಾಂಕದ ಸಿಂಧು 16-21, 10-21ರಿಂದ ಕೆನಡಾದ ಮಿಚೆಲ್ ಲಿ ಅವರಿಗೆ ಶರಣಾದರು.

ಭಾರತಕ್ಕೆ ಸರಣಿ ಗೆಲುವಿನ ಅವಕಾಶ

ಬಾಂಗ್ಲಾ ವಿರುದ್ಧ ಟಿ20 ಪಂದ್ಯ ಇಂದು • ಭರವಸೆ ಮೂಡಿಸಿದ ಯುವ ತಂಡ

ನವದೆಹಲಿ (ಪಿಟಿಐ): ಕೆಲವು ಅನುಭವಿ ಆಟಗಾರರ ಗೈರಿನಲ್ಲೂ ಭಾರತ ತಂಡ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಸದೆಬಡಿದಿತ್ತು. ಬುಧವಾರ ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲಿಇವೆರಡು ತಂಡಗಳು ಮುಖಾಮುಖಿಯಾಗುವಾಗಲೂ ಫಲಿತಾಂಶದಲ್ಲಿ ಬದಲಾವಣೆಯಾಗುವ ಸಾಧ್ಯತೆ ಕಡಿಮೆ.

ಆತಿಥೇಯ ತಂಡದ ಯುವ ಆಟಗಾರರು ಉತ್ತಮ ಪ್ರದರ್ಶನ ನೀಡಿದ್ದರಿಂದ ಪ್ರಮುಖ ಆಟಗಾರರ ಗೈರುಹಾಜರಿ ಎದ್ದುಕಾಣಲಿಲ್ಲ. ಬಾಂಗ್ಲಾದೇಶ ಯಾವುದೇ ಹಂತದಲ್ಲಿ ಪ್ರತಿರೋಧ ಒಡ್ಡುವ ರೀತಿ ಆಡಲಿಲ್ಲ.

ರಿಷಭ್ ಪಂತ್, ಅಕ್ಷರ್ ಪಟೇಲ್ ಮತ್ತು ಜಸ್‌ಪ್ರೀತ್ ಬೂಮ್ರಾ ಅಂಥ ಪ್ರಮುಖ ಆಟಗಾರರಿಗೆ ಈ ಸರಣಿಗೆ ವಿಶ್ರಾಂತಿ ನೀಡಲಾಗಿದೆ. ಆದರೆ ನಿಯಮಿತ ಓವರುಗಳ ಕ್ರಿಕೆಟ್‌ನಲ್ಲಿ ಭಾರತದ ಬ್ಯಾಟಿಂಗ್ ಆಳವಾಗಿರುವುದು, ಗ್ವಾಲಿಯರ್‌ನ ಮೊದಲ ಪಂದ್ಯದಲ್ಲಿ ಮತ್ತೆ ಸಾಬೀತಾಯಿತು. ತಂಡ ಏಳು ವಿಕೆಟ್‌ಗಳ ಅಧಿಕಾರಯುತ ಜಯದಾಖಲಿಸಿತು.

ಸಂಜು ಸ್ಯಾಮ್ಸನ್ — ಪಿಟಿಐ ಚಿತ್ರ

ಭಾನುವಾರದ ಆ ಪಂದ್ಯದಲ್ಲಿ ಗಮನಸೆಳೆದವರಲ್ಲಿ ಒಬ್ಬರು ಸಂಜು ಸ್ಯಾಮ್ಸನ್. ಸರಣಿಯ ಮೂರೂ ಪಂದ್ಯಗಳಿಗೆ ಅವರೇ ಆರಂಭ ಆಟಗಾರರಾಗಿರುತ್ತಾರೆ ಎಂದು ನಾಯಕ ಸೂರ್ಯಕುಮಾರ್ ಯಾದವ್ ಖಚಿತಪಡಿಸಿದ್ದರು. 2015ರಲ್ಲಿ ಮೊದಲ ಬಾರಿ ತಂಡಕ್ಕೆ ಪದಾರ್ಪಣೆ ಮಾಡಿದ ಅವರು ನಿಯಮಿತವಾಗಿ ಸ್ಥಾನ ಪಡೆಯುವಲ್ಲಿ ವಿಫಲರಾಗಿದ್ದಾರೆ. ಇದಕ್ಕೆ ಅಸ್ಥಿರ ಪ್ರದರ್ಶನವೂ ಕಾರಣ. ಮಧ್ಯಮ ಕ್ರಮಾಂಕದಲ್ಲಿ ಆಡುವ ಅವರು ಗ್ವಾಲಿಯರ್‌ನಲ್ಲಿ 19 ಎಸೆತಗಳಲ್ಲಿ 29 ರನ್ ಗಳಿಸಿದ್ದರು.

ಪವರ್‌ಪ್ಲೇಯಲ್ಲಿ ಆರಾಮವಾಗಿ ಆಡಿದ ಅವರು ಉತ್ತಮ ಆರಂಭವನ್ನು ದೊಡ್ಡ ಮೊತ್ತವಾಗಿ ಬೆಳೆಸಲಿಲ್ಲ. ಮೊದಲ ಆಯ್ಕೆಯ ಆರಂಭ ಆಟಗಾರರಾದ ಯಶಸ್ವಿ ಜೈಸ್ವಾಲ್ ಮತ್ತು ಶುಭಮನ್ ಗಿಲ್ ಅವರಿಗೆ ಈ ಸರಣಿಗೆ ವಿಶ್ರಾಂತಿ ನೀಡಿರುವ ಕಾರಣ ಸ್ಯಾಮ್ಸನ್ ಮತ್ತು 'ಪವರ್ ಹಿಟ್ಟರ್' ಅಭಿಷೇಕ್ ಶರ್ಮಾ ಅವರಿಗೆ ತಮ್ಮ ಸಾಮರ್ಥ್ಯ ತೋರಲು ಇದು ಸದವಕಾಶವಾಗಿದೆ.

ಪಂತ್ ಅನುಪಸ್ಥಿತಿಯಲ್ಲಿ ವಿಕೆಟ್ ಕೀಪರ್ ಆಗಿ ತಮ್ಮ ಸ್ಥಾನ ಗಟ್ಟಿಗೊಳಿಸಲೂ 29 ವರ್ಷ ವಯಸ್ಸಿನ ಸ್ಯಾಮ್ಸನ್ ಅವರಿಗೆ ಇದು ಸುವರ್ಣಾವಕಾಶ.

ಮೊದಲ ಪಂದ್ಯದಲ್ಲಿ ನಡೆಸಿದ ಸಂಯೋಜನೆಗಳು ಫಲಪ್ರದವಾದ ಕಾರಣ, ಭಾರತ ಎರಡನೇ ಪಂದ್ಯಕ್ಕೆ ಆಡುವ 11ರಲ್ಲಿ ಬದಲಾವಣೆಗಳನ್ನು ಮಾಡುವ ಸಾಧ್ಯತೆ ಕಡಿಮೆ. ಪದಾರ್ಪಣೆ ಮಾಡಿದ ಶರವೇಗಿ ಮಯಂಕ್ ಯಾದವ್ ಗಮನ ಸೆಳೆದಿದ್ದಾರೆ. ಅವರಂತೆ ಮೊದಲ ಸಲ ಅವಕಾಶ ಪಡೆದ ನಿತೀಶ್ ಕುಮಾರ್ ರೆಡ್ಡಿ ಕೂಡ ಭರವಸೆ ಮೂಡಿಸಿದ್ದಾರೆ. ಸೀಮ್ ಬೌಲಿಂಗ್ ಆಲ್‌ರೌಂಡರ್ ಆಗಿ ತಮ್ಮ ಸ್ಥಾನ ಗಟ್ಟಿಗೊಳಿಸಲು ಅವರಿಗೆ ಈ ಸರಣಿ ವೇದಿಕೆಯಾಗಿದೆ.

ಲಿಟನ್ ದಾಸ್

ಅರ್ಷದೀಪ್ ಸಿಂಗ್ ವೇಗದ ದಾಳಿಯ ನೇತೃತ್ವವನ್ನು ಸಮರ್ಥವಾಗಿ ನಿಭಾಯಿಸಿದರೆ, ಸ್ಪಿನ್ನರ್ ವರುಣ್ ಚಕ್ರವರ್ತಿ ಮೂರು ವರ್ಷಗಳ ನಂತರ ಪುನರಾಗಮನದಲ್ಲಿ ಯಶಸ್ಸು ಪಡೆದಿದ್ದಾರೆ. ರವೀಂದ್ರ ಜಡೇಜ ತೆರವುಗೊಳಿಸಿದ ಸ್ಥಾನದಲ್ಲಿ ಸ್ಪಿನ್ ಆಲ್‌ರೌಂಡರ್ ಆಗಿ ರೂಪುಗೊಳ್ಳಲು ವರುಣ್‌ಗೆ ಅವಕಾಶವಿದೆ.

ಇನ್ನೊಂದು ಕಡೆ ಬಾಂಗ್ಲಾದೇಶ ತಂಡಕ್ಕೆ ಒತ್ತಡ ಹೆಚ್ಚೇ ಇದೆ. ಜೊತೆಗೆ ಸುಧಾರಿಸಿಕೊಳ್ಳಲು ಇರುವ ಅವಧಿ ಕಡಿಮೆ. ಮೂರು ಪಂದ್ಯಗಳ ಸರಣಿ ಗೆಲ್ಲುವ ಯತ್ನಕ್ಕೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯ.

ಪಂದ್ಯ ಆರಂಭ: ರಾತ್ರಿ 7.
ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಟಿ20ಗೆ ಮಹಮದುಲ್ಲಾ ವಿದಾಯ

ನವದೆಹಲಿ (ಪಿಟಿಐ): ಬಾಂಗ್ಲಾದೇಶದ ಅನುಭವಿ ಆಲ್‌ರೌಂಡರ್ ಮಹಮದುಲ್ಲಾ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ಮಂಗಳವಾರ ವಿದಾಯ ಹೇಳಿದ್ದಾರೆ. ಈಗ ಭಾರತ ವಿರುದ್ಧ ನಡೆಯುತ್ತಿರುವ ಟಿ20 ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯ ಅವರ ಪಾಲಿಗೆ ಕೊನೆಯ ಪಂದ್ಯವಾಗಲಿದೆ.

ಹಾಲಿ ಟಿ20 ಸರಣಿಯ ಎರಡನೇ ಪಂದ್ಯ ಬುಧವಾರ ನವದೆಹಲಿಯಲ್ಲಿ ಹಾಗೂ ಅಂತಿಮ ಪಂದ್ಯ ಶನಿವಾರ ಹೈದರಾಬಾದಿನಲ್ಲಿ ನಡೆಯಲಿದೆ.

38 ವರ್ಷದ ಈ ಆಟಗಾರ 2007ರಲ್ಲಿ ಬಾಂಗ್ಲಾ ತಂಡಕ್ಕೆ ಪದಾರ್ಪಣೆ ಮಾಡಿದ್ದರು. 50 ಟೆಸ್ಟ್, 232 ಏಕದಿನ ಹಾಗೂ 139 ಟಿ20 ಪಂದ್ಯಗಳನ್ನು ಆಡಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಅವರು ಎಂಟು ಅರ್ಧ ಶತಕ ಸೇರಿದಂತೆ 2395 ರನ್ ಗಳಿಸಿದ್ದಾರೆ. ಆಫ್ ಸ್ಪಿನ್ ದಾಳಿಯಲ್ಲಿ 40 ವಿಕೆಟ್‌ಗಳನ್ನು ಪಡೆದಿದ್ದಾರೆ.

ಟಿಟಿ: ಯಶಸ್ವಿನಿಗೆ ಬೆಳ್ಳಿ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ದೋಹಾದಲ್ಲಿ ನಡೆದ ಡಬ್ಲ್ಯುಟಿಟಿ ಫೀಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ. ಮಹಿಳೆಯರ ಸಿಂಗಲ್ಸ್‌ನ ಫೈನಲ್‌ನಲ್ಲಿ ಯಶಸ್ವಿನಿ 9-11, 11-7, 8-11, 7-11ರಿಂದ ಜಪಾನ್‌ನ ಹಿಟೊಮಿ ಸಾಟೊ ಅವರಿಗೆ ಶರಣಾದರು.

ಆಸ್ಟ್ರೇಲಿಯಾಕ್ಕೆ ಮಣಿದ ಕಿವೀಸ್

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ಶಾರ್ಜಾ (ಪಿಟಿಐ): ಬ್ಯಾಟಿಂಗ್ ಬಳಿಕ ಬೌಲಿಂಗ್‌ನಲ್ಲಿ ಸಾಂಘಿಕ ಪ್ರದರ್ಶನ ನೀಡಿದ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಐಸಿಸಿ ಟಿ20 ಮಹಿಳೆಯರ ವಿಶ್ವಕಪ್‌ನ ಪಂದ್ಯದಲ್ಲಿ ಮಂಗಳವಾರ ನ್ಯೂಜಿಲೆಂಡ್ ವಿರುದ್ಧ 60 ರನ್‌ಗಳ ಸುಲಭ ಜಯ ಸಾಧಿಸಿತು.

ಟಾಸ್ ಗೆದ್ದು ಬ್ಯಾಟಿಂಗ್‌ಗೆ ಇಳಿದ ಆಸ್ಟ್ರೇಲಿಯಾ ಬೆತ್ ಮೂನಿ (40;32ಎ), ಎಲಿಸ್ ಪೆರಿ (30;24ಎ) ಅವರ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 148 ರನ್ ಗಳಿಸಿತು.

ಗುರಿಯನ್ನು ಬೆನ್ನಟ್ಟಿದ ಕಿವೀಸ್ ತಂಡದ ಬ್ಯಾಟರ್‌ಗಳನ್ನು ಮೆಗನ್ ಶುಟ್ (3ಕ್ಕೆ3) ಮತ್ತು ಅನಾಬೆಲ್ ಸದರ್ಲ್ಯಾಂಡ್ (21ಕ್ಕೆ3) ಕಾಡಿದರು. ಅಮೆಲಿಯಾ ಕೆರ್ (29;31ಎ) ಮತ್ತು ಸೂಜಿ ಬೇಟ್ಸ್ (20;27ಎ) ಹೊರತುಪಡಿಸಿ ಉಳಿದವರು ನಿರಾಸೆ ಮೂಡಿಸಿದರು. ಹೀಗಾಗಿ ತಂಡವು 19.2 ಓವರ್‌ಗಳಲ್ಲಿ 88 ರನ್‌ಗಳಿಸಿ ಹೋರಾಟ ಮುಗಿಸಿತು. ಆಸ್ಟ್ರೇಲಿಯಾಕ್ಕೆ ಇದು ಸತತ ಎರಡನೇ ಗೆಲುವಾಗಿದೆ.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 148 (ಎಲಿಸಾ ಹೀಲಿ 26, ಬೆತ್ ಮೂನಿ 40, ಎಲಿಸ್ ಪೆರಿ 30; ಅಮೆಲಿಯಾ ಕೆರ್ 26ಕ್ಕೆ 4, ರೋಸ್ಮರಿ ಮೈರ್ 22ಕ್ಕೆ 2, ಬ್ರೂಕ್ ಹ್ಯಾಲಿಡೆ 16ಕ್ಕೆ 2). ನ್ಯೂಜಿಲೆಂಡ್: 19.2 ಓವರ್‌ಗಳಲ್ಲಿ 88 (ಅಮೆಲಿಯಾ ಕೆರ್ 29, ಸೂಜಿ ಬೇಟ್ಸ್ 20; ಮೆಗನ್ ಶುಟ್ 3ಕ್ಕೆ 3, ಅನಾಬೆಲ್ ಸದರ್ಲ್ಯಾಂಡ್ 21ಕ್ಕೆ 3, ಸೋಫಿ ಮಾಲಿನೆ 15ಕ್ಕೆ 2). ಪಂದ್ಯದ ಆಟಗಾರ್ತಿ: ಮೆಗನ್ ಶುಟ್

ಒಳ ಮೀಸಲಾತಿ ಜಾರಿಗೆ ಆಗ್ರಹ

ಬೆಂಗಳೂರು: ಒಳ ಮೀಸಲಾತಿಯನ್ನು ಕಲ್ಪಿಸುವ ನಿರ್ಧಾರವನ್ನು ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿನಿಬ್ಬಾಣದ ದಿನವಾದ ಡಿಸೆಂಬರ್ 6ರೊಳಗೆ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಬೇಕು ಎಂದು ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ, 'ಒಳಮೀಸಲಾತಿ ಸಂವಿಧಾನಬದ್ಧವಾಗಿದ್ದು, ಅದನ್ನು ಜಾರಿಗೊಳಿಸುವ ಅಧಿಕಾರವನ್ನು ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಗಳಿಗೆ ನೀಡಿದೆ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಎಲ್ಲ ಜಾತಿಗಳ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ನೀಡಬೇಕು' ಎಂದು ಒತ್ತಾಯಿಸಿದರು.

'1921ರಲ್ಲಿ ಮಿಲ್ಲರ್ ಆಯೋಗ ನೀಡಿದ ವರದಿ ಪ್ರಕಾರ ಬ್ರಾಹ್ಮಣೇತರ ಜಾತಿಗಳಾದ ಒಕ್ಕಲಿಗ, ಲಿಂಗಾಯತ, ರೆಡ್ಡಿ ಸಮುದಾಯಗಳು ಶೇಕಡ 75ರಷ್ಟು ಮೀಸಲಾತಿ ಪಡೆದುಕೊಂಡಿವೆ. 2015ರಲ್ಲಿ ಕಾಂತರಾಜ ಆಯೋಗ ನೀಡಿದ ಜಾತಿವಾರು ಜನಗಣತಿ ವರದಿಯನ್ನು ಅಂಗೀಕರಿಸದಂತೆ ಸಿದ್ದರಾಮಯ್ಯ ಮೇಲೆ ಒತ್ತಡ ಹಾಕುತ್ತಿದ್ದಾರೆ. ಅಹಿಂದ ವರ್ಗಗಳ ನಾಯಕರಾದ ಸಿದ್ದರಾಮಯ್ಯ ಈ ವರದಿ ಅಂಗೀಕರಿಸಬೇಕು' ಎಂದು ಹೇಳಿದರು.

ಒಳ ಮೀಸಲಾತಿ ವಿಚಾರದಲ್ಲಿ ನಮ್ಮದು ಸ್ಪಷ್ಟ ನಿಲುವು; ಸಂಸದ ಬಸವರಾಜ ಬೊಮ್ಮಾಯಿ ಹೇಳಿಕೆ

ಜಾತಿಗಣತಿ: ಕಾಂಗ್ರೆಸ್ 'ಡಬಲ್ ಗೇಮ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ಜನಗಣತಿ ಮತ್ತು ಒಳ ಮೀಸಲಾತಿ ವಿಚಾರದಲ್ಲಿ ನಮ್ಮ ನಿಲುವು ಸ್ಪಷ್ಟವಿದೆ. ನಾವು ಎಲ್ಲರಿಗೂ ನ್ಯಾಯ ಕೊಡಿಸುವ ಶಿಫಾರಸು ಮಾಡಿದ್ದೇವೆ. ಆದರೆ, ಕಾಂಗ್ರೆಸ್‌ನವರು 'ಡಬಲ್ ಗೇಮ್' ಆಡುತ್ತಿದ್ದಾರೆ' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ದೂರಿದರು.


ಬಸವರಾಜ ಬೊಮ್ಮಾಯಿ

ಕಾಂಗ್ರೆಸ್ ಪಕ್ಷದ ಜಾತಿ ರಾಜಕಾರಣಕ್ಕೆ ಹರಿಯಾಣದ ಜನ ತಕ್ಕ ಪಾಠ ಕಲಿಸಿದ್ದಾರೆ. ಇಡೀ ದೇಶದ ರಾಜಕಾರಣ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದಕ್ಕೆ ಅಲ್ಲಿನ ಫಲಿತಾಂಶವೇ ಸಾಕ್ಷಿ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

ರಾಜ್ಯದಲ್ಲಿ ಒಳಮೀಸಲಾತಿ ವಿಚಾರದಲ್ಲಿ ಮೊದಲು ಸಂವಿಧಾನ ತಿದ್ದುಪಡಿ ಆಗಲಿ, ಆ ಬಳಿಕ ಜಾರಿ ಮಾಡುತ್ತೇವೆ ಎಂದು ಕಣ್ಣೊರೆಸುವ ತಂತ್ರ ಮಾಡಿದರು. ಈಗ ಸುಪ್ರೀಂ ಕೋರ್ಟ್ ಆದೇಶ ಬಂದ ಮೇಲೆ ಚರ್ಚೆ ಮಾಡುತ್ತೇವೆ ಎನ್ನುತ್ತಿದ್ದಾರೆ. ಕಾಂಗ್ರೆಸ್‌ನವರಿಗೆ ದಲಿತರಾಗಲಿ, ಹಿಂದುಳಿದವರಾಗಲಿ ಅಭಿವೃದ್ಧಿ ಆಗುವುದು ಬೇಕಿಲ್ಲ ಎಂದು ಕುಟುಕಿದರು.

'ಜಾತಿ ಗಣತಿ ವಿಚಾರದಲ್ಲೂ ಅಷ್ಟೇ, ಜಾತಿಗಣತಿ ವರದಿಯನ್ನು ಯಡಿಯೂರಪ್ಪ, ಬೊಮ್ಮಾಯಿ ಸ್ವೀಕಾರ ಮಾಡಲಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಕಾಂತರಾಜ ಅವರು ಸಿದ್ದರಾಮಯ್ಯ ಅವಧಿಯಲ್ಲೇ (2017) ವರದಿ ನೀಡಿದ್ದಾರೆ. ಹಿಂದುಳಿದ ವರ್ಗದ ಚಾಂಪಿಯನ್ ಎಂದು ಹೇಳಿಕೊಳ್ಳುವವರು ಆಗ ಯಾಕೆ ಒಪ್ಪಿಕೊಳ್ಳಲಿಲ್ಲ' ಎಂದು ಬೊಮ್ಮಾಯಿ ಪ್ರಶ್ನಿಸಿದರು.

'ಕಾಂತರಾಜ ಅವರು ಅಧ್ಯಯನ ಮಾಡಿ ವರದಿ ಸಿದ್ಧಪಡಿಸಿದ್ದರು. ಜಯಪ್ರಕಾಶ ಹೆಗ್ಡೆ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು ವರದಿ ತಿದ್ದುಪಡಿ ಮಾಡಿದ್ದಾರೆ. ಹಿಂದುಳಿದ ವರ್ಗದವರ ಅಭಿವೃದ್ಧಿ ಆಗಬೇಕು ಎಂಬುದು ನಮ್ಮ ಸ್ಪಷ್ಟ ನಿಲುವು. ಇದು ಗೊಂದಲದ ಗೂಡಾಗಬಾರದು. ಸಮಾಜದಲ್ಲಿ ಗೊಂದಲ ಉಂಟು ಮಾಡಬಾರದು. ಮುಡಾ ಹಗರಣದ ಆರೋಪ ಬಂದ ಕೂಡಲೇ ದಾರಿ ತಪ್ಪಿಸಲು ಜಾತಿ ಗಣತಿ ವರದಿ ಪ್ರಸ್ತಾಪ ಮಾಡುತ್ತಿರುವುದು ಎಷ್ಟರ ಮಟ್ಟಿಗೆ ಸರಿ' ಎಂದು ಪ್ರಶ್ನಿಸಿದರು.

ವರದಿ ಅಂಗೀಕರಿಸಿ: ಕನ್ನಡಪರ ಹಿರಿಯ ಹೋರಾಟಗಾರರ ಆಗ್ರಹ

ಬೆಂಗಳೂರು: ಜಾತಿವಾರು ಜನಗಣತಿ ವರದಿಯನ್ನು ಅಂಗೀಕರಿಸಿ, ಮುಂದಿನ ಕ್ರಮ ಜರುಗಿಸಬೇಕು ಎಂದು ಕನ್ನಡಪರ ಹಿರಿಯ ಹೋರಾಟಗಾರರ ವೇದಿಕೆ ಆಗ್ರಹಿಸಿದೆ.

'ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಜಾತಿವಾರು ಜನಗಣತಿ ಬಗ್ಗೆ ಗಟ್ಟಿ ಧ್ವನಿಯಲ್ಲಿ ಮಾತನಾಡಿದ್ದಾರೆ. ಸರ್ಕಾರ ಹೋದರೂ ಚಿಂತೆ ಇಲ್ಲ, ಜಾತಿ ಜನಗಣತಿ ವರದಿ ಅಂಗೀಕರಿಸಬೇಕು ಎಂದು ಒತ್ತಾಯಿಸಿರುವುದು ಸರಿಯಾಗಿದೆ. ಅಧಿಕಾರ ರಾಜಕಾರಣಕ್ಕಿಂತ ತತ್ವ, ಸಿದ್ಧಾಂತಕ್ಕೆ ಬದ್ಧತೆಯನ್ನು ಪ್ರತಿಪಾದಿಸಿರುವ ಹರಿಪ್ರಸಾದ್ ಅವರ ಹೇಳಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಂಭೀರವಾಗಿ ಪರಿಗಣಿಸಿ, ಜಾತಿವಾರು ಜನಗಣತಿ ವರದಿಯನ್ನು ಅಂಗೀಕರಿಸಬೇಕು' ಎಂದು ವೇದಿಕೆ ಅಧ್ಯಕ್ಷ ಜಿ. ಜ್ಞಾನೇಶ್ ಒತ್ತಾಯಿಸಿದ್ದಾರೆ.

'ಚುನಾವಣೆಗಳಲ್ಲಿ ತಮ್ಮ ಪಾತ್ರ ಬಂದಾಗ ಕಾಂಗ್ರೆಸ್ ವಿರೋಧಿ ಧೋರಣೆ ಅನುಸರಿಸುವ ಕೆಲವು ಸಮುದಾಯಗಳು, ಅಧಿಕಾರ ಹಂಚಿಕೆ, ಆಡಳಿತದಲ್ಲಿ, ಶಿಕ್ಷಣದಲ್ಲಿ ಮೀಸಲಾತಿ ಬಂದಾಗ ಸಿಂಹಪಾಲು ಕಬಳಿಸಲು ಮುಂದಾಗುವುದು ಎಲ್ಲಿಯವರೆಗೆ? ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ, ವರ್ಗಗಳ ಸಮುದಾಯದ ಜನರಿಗೆ ಅವರ ಸಂಖ್ಯೆಗೆ ಅನುಗಣವಾಗಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಹಿಂದುಳಿದಿರುವಿಕೆಗೆ ಪೂರಕವಾಗಿ ಹಕ್ಕು, ಪಾಲು ನೀಡಬೇಕು. ಅದಕ್ಕಾಗಿ ಜಾತಿವಾರು ಜನಗಣತಿ ವರದಿಯನ್ನು ಬಳಸಿಕೊಳ್ಳಬೇಕು. ಈ ಬಗ್ಗೆ ಕಾಂಗ್ರೆಸ್ ಪ್ರಣಾಳಿಕೆಯಲ್ಲೇ ಭರವಸೆ ನೀಡಲಾಗಿತ್ತು' ಎಂದು ತಿಳಿಸಿದ್ದಾರೆ.

ಹರಿಯಾಣದಲ್ಲಿ ಪರಿಣಾಮ– ಕೋಳಿವಾಡ

ಬೆಂಗಳೂರು: 'ಹರಿಯಾಣ ವಿಧಾನಸಭೆ ಚುನಾವಣಾ ಪ್ರಚಾರದಲ್ಲಿ ಮುಡಾ ಪ್ರಕರಣದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಪದೇ ಪದೇ ಮಾತನಾಡಿರುವುದು ಅಲ್ಲಿನ ಫಲಿತಾಂಶದ ಮೇಲೆ ಪರಿಣಾಮ ಬೀರಿದೆ' ಎಂದು ಕಾಂಗ್ರೆಸ್ ಮುಖಂಡ ಕೆ.ಬಿ. ಕೋಳಿವಾಡ ಹೇಳಿದರು.

ಕೋಳಿವಾಡ

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಿ ಮುಡಾ ಪ್ರಕರಣದ ತನಿಖೆ ಎದುರಿಸಬೇಕು. ಈ ಬಗ್ಗೆ ನಾನು ಈ ಹಿಂದೆ ನೀಡಿರುವ ಹೇಳಿಕೆಗೆ ಈಗಲೂ ಬದ್ಧ' ಎಂದರು.

ಪ್ರತ್ಯೇಕವಾಗಿ ಪ್ರತಿಕ್ರಿಯಿಸಿದ ಅವರು, 'ನಮ್ಮ ಹೇಳಿಕೆಯಿಂದ ಪಕ್ಷಕ್ಕೆ ಧಕ್ಕೆಯಾದರೆ ನೋಟಿಸ್ ಕೊಡುತ್ತಾರೆ. ನಾನು ಪಕ್ಷದ ಹಿತದೃಷ್ಟಿಯಿಂದ ಹೇಳಿದ್ದೇನೆ. ಅಷ್ಟಕ್ಕೂ ನಾನು ಸಕ್ರಿಯ ರಾಜಕಾರಣದಲ್ಲಿ ಇಲ್ಲ. ಆದರೆ, ಪಕ್ಷ ಉಳಿಸುವ ಕೆಲಸ ಮಾಡುತ್ತೇನೆ' ಎಂದರು.

'ಮನೆಯಲ್ಲಿ ಕುಳಿತು ಜಾತಿಗಣತಿ ವರದಿ ಸಿದ್ಧಪಡಿಸಿದ್ದಾರೆ' ಎಂಬ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಆರೋಪಕ್ಕೆ ಪ್ರತಿಕ್ರಿಯಿಸಿದ ಕೋಳಿವಾಡ, 'ಶಾಮನೂರು ಶಿವಶಂಕರಪ್ಪ ಓಡಾಡಿದ್ದಾರಾ? ನಮ್ಮ ತಾಲ್ಲೂಕಿನಲ್ಲಿ ಸಮೀಕ್ಷೆ ಮಾಡಿದವರ ಜೊತೆಗೆ ನಾನು ಮನೆ ಮನೆಗೆ ಹೋಗಿದ್ದೇನೆ. ಜಾತಿ, ಉಪಜಾತಿಯನ್ನೂ ದಾಖಲಿಸಿಕೊಂಡಿದ್ದಾರೆ' ಎಂದರು.

ಸಂಶೋಧಕ ಎಂ.ಎಂ.ಕಲಬುರ್ಗಿ ಹತ್ಯೆ ಪ್ರಕರಣ; ಹೈಕೋರ್ಟ್ ತೀರ್ಮಾನ

ವಿಶೇಷ ಕೋರ್ಟ್ ಮನವಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಶೋಧಕ ಎಂ.ಎಂ. ಕಲಬುರ್ಗಿ ಅವರ ಕೊಲೆ ಪ್ರಕರಣದ ತುರ್ತು ವಿಚಾರಣೆಗೆ ಧಾರವಾಡದಲ್ಲಿ ವಿಶೇಷ ನ್ಯಾಯಾಲಯ ಸ್ಥಾಪಿಸಬೇಕು' ಎಂದು ಕೋರಲಾಗಿದ್ದ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಸಾಕ್ಷಿಗಳ ವಿಚಾರಣೆಯನ್ನು ಆಕ್ಷೇಪಿಸಿ ಆರೋಪಿಗಳಾದ ಅಮೋಲ್ ಎ.ಕಾಳೆ, ವಾಸುದೇವ್ ಭಗವಾನ್ ಸೂರ್ಯವಂಶಿ ಮತ್ತು ಶರದ್ ಭಾವುಸಾಹೇಬ್ ಕಲಾಸ್ಕರ್ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸುವ ವೇಳೆ; ಧಾರವಾಡದ ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಪೂರ್ಣಿಮಾ ಎನ್.ಪೈ ಅವರು ಈ ಕುರಿತಂತೆ ಹೈಕೋರ್ಟ್‌ನ ಆಡಳಿತಾತ್ಮಕ ತೀರ್ಮಾನದ ಅಂಶವನ್ನು ತಮ್ಮ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಹೈಕೋರ್ಟ್ ಸುದ್ದಿ

'ಎಂ.ಎಂ.ಕಲಬುರ್ಗಿ ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 2024ರ ಆಗಸ್ಟ್ 3ರಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಂದ ಪತ್ರ ಬಂದಿದ್ದು, ಈ ಪ್ರಕರಣದ ವಿಚಾರಣೆಗೆ ಧಾರವಾಡದಲ್ಲಿ ವಿಶೇಷ ನ್ಯಾಯಾಲಯ ಸ್ಥಾಪನೆಯ ಸಂಬಂಧದ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ. ಆದ್ಯತೆಯ ಮೇರೆಗೆ ಹಾಲಿ ಪ್ರಕರಣದ ವಿಚಾರಣೆ ನಡೆಸಿ, ಇತ್ಯರ್ಥಪಡಿಸುವಂತೆ ನಿರ್ದೇಶಿಸಲಾಗಿದೆ' ಎಂದು ಪೂರ್ಣಿಮಾ ಅವರು ತಮ್ಮ ಆದೇಶದಲ್ಲಿ ವಿವರಿಸಿದ್ದಾರೆ.

'ಈ ಪ್ರಕರಣದಲ್ಲಿ ಇನ್ನೂ 100ಕ್ಕೂ ಹೆಚ್ಚು ಸಾಕ್ಷಿಗಳನ್ನು ದಾಖಲಿಸಬೇಕಿದ್ದು, ಅರ್ಜಿದಾರರ ಪರ ವಕೀಲರು ಅನಗತ್ಯ ಅರ್ಜಿಗಳನ್ನು ಸಲ್ಲಿಸುವ ಮೂಲಕ ವಿಚಾರಣೆಯನ್ನು ವಿಳಂಬಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಅವರು ಆದೇಶದಲ್ಲಿ ದಾಖಲಿಸಿದ್ದಾರೆ.

ಕಲಬುರ್ಗಿ ಅವರನ್ನು ಧಾರವಾಡದ ಅವರ ನಿವಾಸದಲ್ಲಿ 2015ರ ಆಗಸ್ಟ್ 31ರಂದು ಹತ್ಯೆ ಮಾಡಲಾಗಿತ್ತು. 2018-2019ರಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಜಾತಿ ಪ್ರಮಾಣ ಪತ್ರ: ತನಿಖೆಗೆ ಆದೇಶ

ಬೆಂಗಳೂರು: ನಕಲಿ ಜಾತಿ ಪ್ರಮಾಣಪತ್ರದ ಪ್ರಯೋಜನದಿಂದ ಭಾರತ ಸಂಚಾರ ನಿಗಮ ನಿಯಮಿತದಲ್ಲಿ (ಬಿಎಸ್‌ಎನ್‌ಎಲ್) ಆಪರೇಟರ್ ಉದ್ಯೋಗ ಗಿಟ್ಟಿಸಿಕೊಂಡು, ನಿವೃತ್ತಿ ಹೊಂದಿರುವ ವ್ಯಕ್ತಿಯೊಬ್ಬರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧದ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಕಲಬುರಗಿಯ ಶ್ರೀಮಂತ ಬಿನ್ ಅರ್ಜುನ್ ನಾಟೀಕರ್ (65) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಅರ್ಜಿದಾರರು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿದ ಕಬ್ಬಲಿಗ ಜಾತಿಯವರು. ಆದರೆ, ಇವರು ಪರಿಶಿಷ್ಟ ಪಂಗಡದ (ಎಸ್‌ಟಿ) ಕೋಲಿ ಡೋರ್ ಜಾತಿಯ ಹೆಸರಿನಲ್ಲಿ ನಕಲಿ ಪ್ರಮಾಣ ಪತ್ರ ಪಡೆದು ಅದರಿಂದ ಲಾಭ ಮಾಡಿಕೊಂಡಿದ್ದಾರೆ ಎಂಬ ಆರೋಪದ ಬಗ್ಗೆ ತನಿಖೆ ನಡೆಸಬೇಕು' ಎಂದು ನಾಗರಿಕ ಹಕ್ಕುಗಳ ಜಾರಿ (ಸಿಆರ್‌ಇ) ನಿರ್ದೇಶನಾಲಯಕ್ಕೆ ನ್ಯಾಯಪೀಠ ನಿರ್ದೇಶಿಸಿದೆ.

ವಿಚಾರಣೆ ವೇಳೆ ಸಿಆರ್‌ಇ ಪರ ವಿಶೇಷ ವಕೀಲರಾದ ಸಿ.ಜಗದೀಶ್, 'ಅರ್ಜಿದಾರರು ನಕಲಿ ಜಾತಿ ಪ್ರಮಾಣಪತ್ರ ಪಡೆದು, ಅದರ ಲಾಭ ಮಾಡಿಕೊಂಡು ವಂಚನೆ ಎಸಗಿದ್ದಾರೆ. ಇಂತಹ ಪ್ರಕರಣಗಳಲ್ಲಿ ತನಿಖೆ ನಡೆಯಲೇಬೇಕು ಎಂದು ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳು ಹೇಳಿವೆ. ಆದ್ದರಿಂದ, ಅರ್ಜಿ ವಜಾಗೊಳಿಸಿ, ತನಿಖೆಗೆ ಆದೇಶಿಸಬೇಕು' ಎಂದು ಕೋರಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ST JOSEPH'S BOYS' HIGH SCHOOL, Museum Road, Bengaluru
REQUIRES TEACHERS for the ISC (PG with B Ed) & ICSE (UG with B Ed) for all Subjects.
We are also looking for qualified and competent Teachers to join our Pre-Primary Team. Please send an email with your CV & recent photograph mentioning the post applied for in the subject line. Also, submit a hard copy of your CV to the school office at the earliest.
School Name and Address: St Joseph's Boys' High School, 27, Museum Road, Bengaluru 560025.
Phone: 8884200548
Email:recruitment@sjbhs.edu.in
Website: www.sjbhs.edu.in

WANTED COMPUTER Science faculty for United PU College, Nagawara Main Road, Bengaluru-45. 7483254480, 9986017219, www.united college.edu.in

General

ACCOUNTANT AND DATA ENTRY Specialist required, Himanshu Transport at Basavanagudi, send your Resume at himanshutransport1@gmail.com /Call: 9886292780. Vacancy- 2.

Hotel

WANTED IMMEDIATELY ADMIN MANAGER, RESTAURANT MANAGER, WAITERS, COOKS, COOLJOINT INCHARGE. Good Salary. UNCLE's KITCHEN: 99000-54468

Accounts & Finance

WANTED EXPERIENCED female accounts assistant qualification B.Com with knowledge of tally, GST, billing, accounting, & good communication skills kannada English & hindi for office located at rajajinagar industrial town , Bangalore-10. Candidates residing in & around can send your resume for the following mail ID : info@madhuproducts.in

Marketing & Sales

NEW INDIA ELECTRICALS LTD. (A 55 Year Old Company) JC Road,Bangalore-02. WANTED CUSTOMER SUPPORT EXECUTIVES/ SALES EXECUTIVES/ BUSINESS DEVELOPMENT EXECUTIVES, For Immediate Appointment. (MALE/ FEMALE). Qualification: Commerce/ BSc/ ITI Graduate, Skills: Basic Computer/ Good Communication, Experience: 2-4 Years Preferred, Salary: 20,000- 30,000/- Ph: 9343833300 Mail: jatinshah@newindiaelectricals.com

WANTED EXPERIENCED Salesman having vehicle for outdoor canvassing from Industries. Attractive salary. 'MAHAVEER CHEMICALS' 280,1st Main Road, Chamrajpet, Bangalore-18

Wanted

WANTED FEMALE Office Assistant Qulification Any Degree Good Communication Skills English, Hindi, In around Rajajinagar 9108458798/ 9845579620

REAL ESTATE SELLING

Commerical

Basavanagudi

COMMERCIAL LEASE (65 years). Corner 8000 sft. Builtup 18000 sft. Rental potential Rs 3 cr annually. Builders only whatsapp (message only) 99029-15651. Price Rs 15 cr.

Flat

Airport Road

SALE SENIOR Living 2 BHK New fully furnished New Airport Road Contact: 9845026300

Banashankari

DUPLEX THREE and Half Bedroom Luxurious Penthouse Title Clear OC 3118 sqft Rs 2.53Cr Vegetarians 9845228595 9844021380

General

South

RENTAL INCOME Investment Properties For Sale. Whatsapp Budget. Sarakki Homes, 9663676464

House

BEL Layout

SALE 60X40 WITH 4 BHK duplex house prime location BEL layout S/F-15500/sq.ft 9844264852 / 9449059015

PROPERTY CORNER

REQUIRED
Required Land 8000 to 15000 sqft anywhere in Bangalore City having minimum road width of 60 feet for PETROL BUNK - Rent / Company Lease for 20 years with rent between Rs.20/50. Building Tax will be paid by us.
Contact: 9845032519 / 99451 55688

RENTAL PROPERTIES

Accommodation Available

Commercial

'11000 SQUARE feet warehouse available for rent near Tin Factory, Old Madras Road, Bangalore contact 9243109977'

BUILDERS ESSENTIAL

Water Proofing

LEAKAGE... **LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

BUSINESS

Business Offers

Finance

WE ARE doing Unsecured Business loan from 1Crore and above.Home Loan, Mortgage Loan, Commercial buildings purchase loan forContractors-Schools & Colleges, Hospitals, Medical shops . OD - Term Loans for industries etc., from financial Institutions, Contact Mrs. Jyothi,8971132289.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PERSONAL

Change of Name

CHANGE OF NAME
I, IC-57609W Lt Col **JASBIR SINGH BATH** S/o Tara Singh, Date of birth: 17 August 1974 is residing at 1/10, FMCC, Cubbon Road, Bengaluru-01, hereby declare that my correct name is **JASBIR SINGH BATH** as per Civil Documents, where as in official Army record, it has been endorsed as **JASVIR SINGH BATH**. The two names belongs to one and same person.Vide affidavit dated 08.10.2024 before notary Meer Hassan, Bengaluru.

CHANGE OF NAME
I, **Viswanath,** aged 69 yrs, residing at Kadnur S Prakash, Sai Baba Temple Road, B.M. Shree Layout, K.R. Extension, Tiptur-572201, have changed my name to **K.N. VISHWANATH** vide affidavit Notary Register Book No. 1, Year 2024, Page No. 12, Sl No. 52, dated 22-02-2024 before notary K T Chandrashekaraiah, Tiptur. Henceforth I shall be called as **K.N. VISHWANATH** only.

CHANGE OF NAME
I, **Renuka K, Renuka Krishna A.G., Renuka Krishna G & Renukamma,** R/at Flat No.201, 2nd Floor, SBM Grand, Bengaluru-560043, Declare that the above names pertain to me and henceforth I shall be known as **RENUKA KRISHNA G** vide affidavit dated 08/10/2024 before Notary B. Chitra, Bengaluru.

CHANGE OF NAME
We Shri **B.R. Chandrashekar** and Smt. **Lakshmi S.** R/a No.32/5 4th Cross, Ganesh Temple Road, Cholurplaya, Magadi Road, Bangalore - 560023 We declared that our daughter name in birth certificate and Aadhar card mentioned as **POORVIKA BAI .C** Now our daughter name in Sukanya Samruddhi Yogana mentioned as **AISHWARYA .C** In feature we required **POORVIKA BAI .C** instead of **AISHWARYA.C** vide affidavit dated 30-9-2024 Sworn before Notary H.S. Sakalesh Aradhya, Bangalore.

I BASANAGOUDA S/o Sangannagouda R/o 10/3 near CB Coman, Jeeveshwar Nagar Shahapur, Shahapur Taluk, Yadgur Dist-585223 have changed my name to Basanagouda Patil vide affidavit before notary M.K.Karigudda dated 05.10.2024

'ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬಿಸಿಐ ನಿರ್ಬಂಧ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಕೀಲರ ಅಭಿವ್ಯಕ್ತಿ ಸ್ವಾತಂತ್ರ್ಯದ ಕುತ್ತಿಗೆ ಹಿಸುಕುವಂತಹ ಆದೇಶಗಳನ್ನು ಹೊರಡಿಸುವ ಅಧಿಕಾರ ಭಾರತೀಯ ವಕೀಲರ ಪರಿಷತ್‌ಗೆ (ಬಿಸಿಐ) ಇಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಭಾರತೀಯ ವಕೀಲರ ಪರಿಷತ್ 2024ರ ಏಪ್ರಿಲ್ 12ರಂದು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಹಿರಿಯ ವಕೀಲ ಎಸ್.ಬಸವರಾಜ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ವಕೀಲರ ಕಾಯ್ದೆ–1961ರ ಕಲಂ 7(1)(ಜಿ) ಪ್ರಕಾರ, ರಾಜ್ಯಗಳ ವಕೀಲರ ಷರಿಷತ್ತಿನ ಚಟುವಟಿಕೆಗಳ ಮೇಲೆ ಬಿಸಿಐ ನಿಗಾ ವಹಿಸಬಹುದಾಗಿದೆ. ಆದರೆ, ವಕೀಲರು ಮಾತನಾಡದಂತೆ ನಿರ್ಬಂಧಿಸುವ ಆದೇಶವನ್ನು ಹೊರಡಿಸುವ ಅಧಿಕಾರ ಬಿಸಿಐ ಅಧ್ಯಕ್ಷರಿಗಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: 'ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ ಹಣ ದುರ್ಬಳಕೆಯಾಗಿದೆ' ಎಂದು ಆರೋಪಿಸಿ ಎಸ್.ಬಸವರಾಜ್ ಪ್ರಕರಣ ದಾಖಲಿಸಿದ್ದರು. ಈ ವಿಚಾರವನ್ನು ಪದಾಧಿಕಾರಿಗಳು ಬಿಸಿಐ ಗಮನಕ್ಕೆ ತಂದಿದ್ದರು. ಆಗ ಬಿಸಿಐ, 'ಹಣಕಾಸು ವಹಿವಾಟಿನ ಬಗ್ಗೆ ಸ್ವೀಕೃತಿಗಳೂ ಸೇರಿದಂತೆ ಎಲ್ಲಾ ದಾಖಲೆಗಳನ್ನು 15 ದಿನಗಳಲ್ಲಿ ಒದಗಿಸಬೇಕು' ಎಂದು ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ಕಾರ್ಯದರ್ಶಿಗೆ ಸೂಚಿಸಿದ್ದರು.

ಈ ಕುರಿತ ವಿಚಾರಣಾ ಪ್ರಕ್ರಿಯೆ ಬಾಕಿ ಇರುವಾಗ ಬಿಸಿಐ ಅಧ್ಯಕ್ಷರು, 'ಹಣ ದುರ್ಬಳಕೆ ಪ್ರಕರಣದ ಬಗ್ಗೆ ಪರಿಷತ್ತಿನ ಸದಸ್ಯರೂ ಸೇರಿದಂತೆ ಯಾವುದೇ ವಕೀಲರು ಸಾರ್ವಜನಿಕ ಹೇಳಿಕೆ ನೀಡಬಾರದು ಮತ್ತು ಎಲ್ಲೂ ಮಾತನಾಡಬಾರದು' ಎಂಬ ಆದೇಶ ಹೊರಡಿಸಿದ್ದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

'170 ನಾಟ್‌ಔಟ್' ಅಂಚೆ ಚೀಟಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಅಂಚೆ ಚೀಟಿ ಆರಂಭವಾಗಿ 170 ವರ್ಷಗಳು ತುಂಬಿರುವ ನೆನಪಿಗಾಗಿ ಇಂಡ್‌ಡಾಕ್ (inddak) ವತಿಯಿಂದ ನಗರದ ಬಸವನಗುಡಿಯ ಬಿ.ಪಿ.ವಾಡಿಯಾ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ '170 ನಾಟ್ ಔಟ್' ಎಂಬ ಅಂಚೆ ಚೀಟಿ ಪ್ರದರ್ಶನವನ್ನು ಆಯೋಜಿಸಲಾಗಿದೆ.

ಗಾಂಧಿ ಜಯಂತಿಯಂದು ಅಂಚೆ ಚೀಟಿ ಪ್ರದರ್ಶನಕ್ಕೆ ಚಾಲನೆ ನೀಡಲಾಗಿದ್ದು, ಅ.30ರವರೆಗೆ ಪ್ರದರ್ಶನ ಮುಂದುವರಿಯಲಿದೆ.

ಗಾಂಧೀಜಿಯವರ 155ನೇ ಜನ್ಮ ವರ್ಷಾಚರಣೆ ಆಗಿರುವುದರಿಂದ ಗಾಂಧೀಜಿಯವರಿಗೆ ಸಂಬಂಧಿಸಿದ ಅನೇಕ ಅಂಚೆ ಚೀಟಿಗಳನ್ನು ಪ್ರದರ್ಶನ ದಲ್ಲಿಡಲಾಗಿದೆ. ಈ ಪ್ರದರ್ಶನದಲ್ಲಿ ಭಾರತದಲ್ಲದೇ, ಅಮೆರಿಕ, ರಷ್ಯಾ, ಬ್ರಿಟನ್, ಫ್ರಾನ್ಸ್ ಸೇರಿದಂತೆ ಬೇರೆ ದೇಶಗಳು ಬಿಡುಗಡೆ ಮಾಡಿರುವ ಮಹಾತ್ಮ ಗಾಂಧಿ ಭಾವಚಿತ್ರವಿರುವ ಅಂಚೆ ಚೀಟಿಗಳೂ ಇವೆ.

ಭಾರತದಲ್ಲಿ 1854ರ ಅಕ್ಟೋಬರ್ 1ರಂದು ಮೊದಲಿಗೆ ಅಂಚೆ ಚೀಟಿಗಳನ್ನು ಪರಿಚಯಿಸಲಾಯಿತು. ಅಂದಿನಿಂದ ಇಂದಿನವರೆಗೆ ಬಿಡುಗಡೆಯಾಗಿರುವ ಪ್ರಮುಖ ಅಂಚೆ ಚೀಟಿಗಳನ್ನು ಪ್ರದರ್ಶನ ದಲ್ಲಿಡಲಾಗಿದೆ. 90 ಫ್ರೇಮ್‌ಗಳಲ್ಲಿ ಸಾವಿರಕ್ಕೂ ಹೆಚ್ಚು ವಿಶೇಷವಾದ ಅಂಚೆ ಚೀಟಿಗಳು ಮತ್ತು ಪೋಸ್ಟ್ ಕಾರ್ಡ್‌ಗಳನ್ನು ವೀಕ್ಷಿಸಬಹುದು.

ಗಮನ ಸೆಳೆವ ಚೀಟಿಗಳು: 1840ರಲ್ಲಿ ಗ್ರೇಟ್ ಬ್ರಿಟನ್ ಬಿಡುಗಡೆ ಮಾಡಿದ ವಿಶ್ವದ ಮೊದಲ ಸ್ಟ್ಯಾಂಪ್ 'ದಿ ಪೆನ್ನಿ ಬ್ಲ್ಯಾಕ್', 1854ರ ಅಕ್ಟೋಬರ್‌ನಲ್ಲಿ ಬಿಡುಗಡೆಯಾದ ಬ್ರಿಟಿಷ್ ಇಂಡಿಯಾದ ಮೊದಲ ಸ್ಟಾಂಪ್ 'ದಿ ಹಾಫ್-ಅನ್ನಾ ಲಿಥೋಗ್ರಾಫ್', 1869ರ ಜುಲೈನಲ್ಲಿ ಬಿಡುಗಡೆಯಾದ ಬ್ರಿಟಿಷ್ ಇಂಡಿಯಾದ ಮೊದಲ ಪೋಸ್ಟ್ ಕಾರ್ಡ್, ವಿಶ್ವದ ಮೊದಲ ಏರ್ ಮೇಲ್ - 1911 (ಅಲಹಾಬಾದ್ ಟು ನೈನಿ), ಭಾರತದ ರಾಕೆಟ್ ಮೇಲ್, ಪಿಜನ್ ಮೇಲ್ ಪೋಸ್ಟಲ್ ಕವರ್, ಅಂಚೆ ಲಕೋಟೆ, ಕಾರ್ಡ್ ಮತ್ತು ಅಂಚೆ ಚೀಟಿಗಳು ಮತ್ತು 1947ರ ಆಗಸ್ಟ್ 15ರ ನೆನಪಿಗಾಗಿ ಬಿಡುಗಡೆ ಮಾಡಿದ 'ಜೈ ಹಿಂದ್' ನಂತಹ ವಿಶೇಷ ಅಂಚೆ ಚೀಟಿಗಳು ಗಮನ ಸೆಳೆಯುತ್ತವೆ.

'170 ನಾಟ್ ಔಟ್' ಅಂಚೆ ಚೀಟಿ ಪ್ರದರ್ಶನಕ್ಕೆ ಭೇಟಿ ನೀಡುವ ಮೂಲಕ ಭಾರತದ ಶ್ರೀಮಂತ ಇತಿಹಾಸ, ಸಾಂಸ್ಕೃತಿಕ ಪರಂಪರೆ ಮತ್ತು ಅಂಚೆ ವ್ಯವಸ್ಥೆಯ ವಿಕಾಸದ ಬಗ್ಗೆ ಆಳವಾದ ತಿಳಿವಳಿಕೆಯನ್ನು ಪಡೆಯಬಹುದು' ಎನ್ನುತ್ತಾರೆ ಅಂಚೆ ಚೀಟಿ ಸಂಗ್ರಹಕಾರ ಮತ್ತು ಪ್ರದರ್ಶನದ ಆಯೋಜಕ ರಾಮು ಶ್ರೀನಿವಾಸ.

ಮುಖ್ಯಾಂಶಗಳು
- 90 ಫೋಟೊ ಫ್ರೇಮ್‌ಗಳಲ್ಲಿ ಪ್ರದರ್ಶನ
- ವಿಶೇಷ ಅಂಚೆ ಚೀಟಿ, ಪೋಸ್ಟ್‌ಕಾರ್ಡ್‌ಗಳು
- ಅ.31ರವರೆಗೆ ಪ್ರದರ್ಶನ ಮುಂದುವರಿಯಲಿದೆ

ಜ್ಞಾನಪೀಠ, ನೊಬೆಲ್ ಪುರಸ್ಕೃತರು, ಪಕ್ಷಿ ಪ್ರಪಂಚದ 27 ಪ್ರಭೇದಗಳ ಅಂಚೆ ಚೀಟಿಗಳಿವೆ. ಸರೀಸೃಪಗಳದ್ದೇ ಪ್ರತ್ಯೇಕ ಅಂಚೆ ಚೀಟಿಗಳೂ ಪ್ರದರ್ಶನದಲ್ಲಿವೆ
ರಾಮು ಶ್ರೀನಿವಾಸ
ಅಂಚೆ ಚೀಟಿ ಸಂಗ್ರಹಕಾರ


ಅಂಚೆ ಚೀಟಿ ಪ್ರದರ್ಶನ ವೀಕ್ಷಿಸಿದ ಆಸಕ್ತರು

ನಗರದಲ್ಲಿ ಇಂದು

'ಒಂದು ದೇಶ–ಒಂದು ಚುನಾವಣೆ ನಿರಂಕುಶ ಪ್ರಜಾಪ್ರಭುತ್ವದತ್ತ ಭಾರತ' ಕುರಿತು ವಿಚಾರಸಂಕಿರಣ: ಉದ್ಘಾಟನೆ: ಎಚ್.ಎನ್. ನಾಗಮೋಹನದಾಸ್, ಅಧ್ಯಕ್ಷತೆ: ಗುರುಪ್ರಸಾದ್ ಕೆರಗೋಡು, ವಿಷಯ ಮಂಡನೆ: ಎ. ನಾರಾಯಣ, ಅತಿಥಿಗಳು: ಮರಿಯಪ್ಪ ಹಳ್ಳಿ, ಇಂದೂಧರ ಹೊನ್ನಾಪುರ, ಎನ್. ವೆಂಕಟೇಶ್, ಎನ್. ಮುನಿಸ್ವಾಮಿ, ದಂಟರಮಕ್ಕಿ ಶ್ರೀನಿವಾಸ, ಆಯೋಜನೆ: ದಲಿತ ಸಂಘರ್ಷ ಸಮಿತಿ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 11

16ನೇ ಪದವಿ ದಿನ: ಅತಿಥಿ: ವೈ. ನರಹರಿ, ಅಧ್ಯಕ್ಷತೆ: ಎಂ.ಆರ್. ಜಯರಾಂ, ಅತಿಥಿಗಳು: ಎಂ.ಆರ್. ಸೀತಾರಾಂ, ಎಂ.ಆರ್. ರಾಮಯ್ಯ, ಪಾರ್ಶ್ವನಾಥ್ ಎಚ್.ವಿ., ಕರಿಸಿದ್ದಪ್ಪ, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯ ನಗರ, ಬೆಳಿಗ್ಗೆ 11

ಮಾಸದ ಮಾತು–10 'ಕನ್ನಡ ಸಾಹಿತ್ಯಕ್ಕೆ ಎಲ್.ಎಸ್.ಎಸ್. ಕೊಡುಗೆ' ಉಪನ್ಯಾಸ: ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿ: ಎನ್. ಮಂಜುನಾಥ, ಉಪಸ್ಥಿತಿ: ಭಾರತಿ ಶೇಷಗಿರಿ ರಾವ್, ಆಯೋಜನೆ ಮತ್ತು ಸ್ಥಳ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘದ ಬಿ.ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್, ವಿಮಾನಪುರ, ಮಧ್ಯಾಹ್ನ 3.30

24ನೇ ವರ್ಷದ ಪ್ರವಚನ ವಾಹಿನಿ: 'ಭಜ ಗೋವಿಂದಂ' ಉಪನ್ಯಾಸ: ಶ್ರೀನಿವಾಸ್ ಪ್ರಸಾದ್ ಸಿ.ವಿ., ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ನವರಾತ್ರಿ ವಿಶೇಷ

ಶರನ್ನವರಾತ್ರಿ ಮಹೋತ್ಸವ: 'ಕನಕಧಾರಾ ಸ್ತೋತ್ರ' ಉಪನ್ಯಾಸ: ಎಚ್.ಆರ್. ಗಾಯತ್ರಿ, ಆಯೋಜನೆ ಮತ್ತು ಸ್ಥಳ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ತ್ಯಾಗರಾಜನಗರ, ಬೆಳಿಗ್ಗೆ 10ರಿಂದ

ಭಜನೆ: ವಿದ್ಯಾರಣ್ಯಪುರದ ವಿಜಯವಿಠ್ಠಲ ಭಜನಾ ಮಂಡಳಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ಸ್ವಾಮಿ ಮಠ, ಮಂತ್ರಿ ಮಾಲ್ ಮೆಟ್ರೊ ನಿಲ್ದಾಣ ಮುಂಭಾಗ, ಸಂಜೆ 5

ವಚನ ನವರಾತ್ರಿ: 'ವಿಸ್ಮಯಗಾತಿ ಕದಿರೆ ರೆಮ್ಮವ್ವೆಯವರ ಪರಿಚಯ': ವಿಜಯ ಮಂಜಪ್ಪ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಮಾತಾ ಅನ್ನಪೂರ್ಣೇಶ್ವರಿ ದೇವಿಗೆ ಸರಸ್ವತಿ ಅಲಂಕಾರ: ಹಾಡುಗಾರಿಕೆ: ರಘುನಂದನ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಿ, ವಸಂತಪುರ, ಸಂಜೆ 5.30ರಿಂದ

ಶಾರದಾ ಮಹಾಭಿಷೇಕ, ಶಾರದಾ ಶರನ್ನವರಾತ್ರಿ ಮಹೋತ್ಸವ, ನೃತ್ಯ ನವರಾತ್ರಿ: ಭರತನಾಟ್ಯ ಪ್ರದರ್ಶನ: ದೀಪಾಲಿ ನಾರಾಯಣ್, ಶ್ರೀವಾಣಿ, ಸ್ಥಳ: ಶೃಂಗೇರಿ ಶಂಕರ ಮಠ, ಸಂಜೆ 5.30ರಿಂದ

ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಅಲಂಕಾರ: ಮಹಾಲಕ್ಷ್ಮಿ ದೇವಿ, ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣರಾಜಪುರ, ಸಂಜೆ 6ರಿಂದ

ದಸರಾ ಮಹೋತ್ಸವ: ಕೊನ್ನಕ್ಕೋಲ್ ಲಯವಿನ್ಯಾಸ: ಪ್ರಸ್ತುತಿ: ವರ್ಲ್ಡ್ ಕೊನ್ನಕ್ಕೋಲ್ ಅಕಾಡೆಮಿ ವಿದ್ಯಾರ್ಥಿಗಳು, ನಿರ್ದೇಶನ: ಬಿ.ಆರ್. ಸೋಮಶೇಖರ್ ಜೋಯಿಸ್, ಕೂಚಿಪುಡಿ ನೃತ್ಯ ಪ್ರದರ್ಶನ: ಜತಿನ್ ಅಕಾಡೆಮಿ ವಿದ್ಯಾರ್ಥಿಗಳು, ನಿರ್ದೇಶನ: ಅರ್ಚನಾ ಪುಣ್ಯೇಶ್, ಆಯೋಜನೆ ಮತ್ತು ಸ್ಥಳ: ಲಾಸ್ಯ ವರ್ಧನ ಟ್ರಸ್ಟ್, ಮಲ್ಲೇಶ್ವರ, ಸಂಜೆ 6

ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ: ಅಲಂಕಾರ: ಕೊಬ್ಬರಿ ತುರಿ–ಸರಸ್ವತಿ ಪೂಜೆ, ಹರಿನಾಮ ಸಂಕೀರ್ತನೆ: ಸಂಗೀತ ಕಲಾನಿಧಿ ವಿದ್ಯಾಭೂಷಣ ಮತ್ತು ತಂಡ, ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ಸಂಜೆ 6.30ರಿಂದ

ಆಯೋಜನೆ: ಸರ್ಕಲ್ ಮಾರಮ್ಮ ದೇವಸ್ಥಾನ: ಅಲಂಕಾರ: ಸರಸ್ವತಿ ಅಲಂಕಾರ, ಮಧ್ಯಾಹ್ನ 1.30ಕ್ಕೆ ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ವೀಣಾ ವಾದನ: ಗೀತಾ ರಮಾನಂದ, ಮೃದಂಗ: ಅದಮ್ಯ ರಮಾನಂದ, ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ಆಯೋಜನೆ: ವೆಂಕಟರಮಣ ಸ್ವಾಮಿ ದೇವಸ್ಥಾನ: ಅಲಂಕಾರ: ಪರಶುರಾಮಾವತಾರ, ದೇವರನಾಮ: ಮಾ. ಲೋಚನ್ ಮತ್ತು ತಂಡ, ಸ್ಥಳ: ವೆಂಕಟರಮಣ ಸ್ವಾಮಿ ದೇವಸ್ಥಾನ, ಕಣಿಯರ ಕಾಲೊನಿ, ಚಾಮರಾಜಪೇಟೆ, ಸಂಜೆ 6.30

ಶರನ್ನವರಾತ್ರಿ ಮತ್ತು ವಿಜಯದಶಮಿ: ದೊಡ್ಡಮ್ಮ ದೇವಿಗೆ ಸರಸ್ವತಿ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೃಷ್ಣರಾಜಪುರ, ಸಂಜೆ 7.30

ಪ್ರಜಾವಾಣಿ ನವವರ್ಣ

ನೀಲಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಬುಧವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541

ಅಮೃತ ಸಂಸ್ಥೆ

ಬೃಂದಾವನ ಕಾಲೇಜು

ದೇಯಾನ್ಶಿ

ವಿನುತಾ ಮತ್ತು ಗೆಳತಿಯರು

ಗ್ರಿಷ್ಮಾ

ಯಕ್ಷ & ಗೆಳತಿಯರು

ನೇತ್ರಾವತಿ

ಕುಶಿ

ದೊಡ್ಡಹಾಗಡೆ ಟೈಲರಿಂಗ್ ಸಂಸ್ಥೆ

ಗೀತಾ, ರೂಪಶ್ರೀ

ಆಚಾರ್ಯ ಪಾಲಿಟೆಕ್ನಿಕ್

ಜಯಲಕ್ಷ್ಮಿ ಮತ್ತು ಗೆಳತಿಯರು

ವಚನ ಸೌರಭ

ಆವಡ್ ಟೆಕ್ನಾಲಜೀಸ್ ಸಿಬ್ಬಂದಿ

ಚಂದ್ರ ಮತ್ತು ಗೆಳತಿಯರು

ಕೀರ್ತನಾ ಎಸ್

ನಯನಾ ಮತ್ತು ಗೆಳತಿಯರು

ಶಹನಾಜ್ ಮತ್ತು ಗೆಳತಿಯರು

ಕವನ & ನರ್ಮದಾ

ಲಿಕಿತಾ & ಗಾನಶ್ರೀ

ಮೃದುಲಾ

ವಿದ್ಯಾ

ಬಸವ ಬಳಗ

ರಾಮಮಂದಿರ ತಂಡ

ಸಂವಿತಾ

ದೀಪಾ ಮತ್ತು ಗೆಳತಿಯರು

ಸಿಂಧು ಮತ್ತು ಗೆಳತಿಯರು

ಇಂದಿನ ಬಣ್ಣ - ನೀಲಿ

ಕಾರಿನ ಗಾಜು ಒಡೆದು, ಮನೆಗೆ ನುಗ್ಗಿ ಕಳ್ಳತನ: ನಾಲ್ವರು ಆರೋಪಿಗಳ ಸೆರೆ

ಕಳವಾಗಿದ್ದ 51 ಲ್ಯಾಪ್‌ಟಾಪ್ ಜಪ್ತಿ

ಪ್ರಜಾವಾಣಿ ವಾರ್ತೆ

ಪವನ್

ಚೇತನ್

ಆದರ್ಶ್

ಬೆಂಗಳೂರು: ಮನೆಯ ಬಾಗಿಲಿಗೆ ಹಾಕಿದ್ದ ಬೀಗ ಹಾಗೂ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ಕಾರಿನ ಗಾಜು ಒಡೆದು ಲ್ಯಾಪ್‌ಟಾಪ್ ಮತ್ತು ಮೊಬೈಲ್ ಕಳ್ಳತನ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಹಾಗೂ ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಎರಡು ಪ್ರಕರಣಗಳಿಂದ 51 ಲ್ಯಾಪ್‌ಟಾಪ್‌ಗಳನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ.

ಕುಮಾರಸ್ವಾಮಿ ಲೇಔಟ್ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಚೇತನ್(35), ಆದರ್ಶ್(29) ಹಾಗೂ ಪವನ್‌ಕುಮಾರ್(21) ಎಂಬುವವರನ್ನು ಬಂಧಿಸಿದ್ದಾರೆ.

ಬಂಧಿತರಿಂದ ₹23 ಲಕ್ಷ ಮೌಲ್ಯದ 34 ಲ್ಯಾಪ್‌ಟಾಪ್, 28 ಮೊಬೈಲ್ ಹಾಗೂ ನಾಲ್ಕು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

'ನಾಲ್ಕು ಲ್ಯಾಪ್‌ಟಾಪ್ ಹಾಗೂ ಒಂದು ವಾಚ್ ಕಳ್ಳತನ ಆಗಿರುವ ಬಗ್ಗೆ ಕುಮಾರಸ್ವಾಮಿ ಲೇಔಟ್‌ನ ಒಂದನೇ ಹಂತದ ನಿವಾಸಿ ಪೃಥ್ವಿರಾಜ್ ಎಂಬುವವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಮಾಹಿತಿ ನೀಡಿದರು.

ಮೂವರು ಆರೋಪಿಗಳು, ನಗರದಲ್ಲೇ ಬೈಕ್‌ಗಳ ಕಳವು ಮಾಡುತ್ತಿದ್ದರು. ಬಳಿಕ ಅವುಗಳನ್ನು ಬಳಸಿಕೊಂಡು ಯುವಕರ ಪಿ.ಜಿ.ಗಳನ್ನು ಗುರುತಿಸುತ್ತಿದ್ದರು. ನಸುಕಿನಲ್ಲಿ ರೂಮ್‌ಗಳ ಬಳಿ ಹೋಗಿ, ಕಿಟಕಿ ಪಕ್ಕದಲ್ಲೇ ಇರುತ್ತಿದ್ದ ಕೀ ತೆಗೆದು ಕಳವು ಮಾಡಿ ಬಳಿಕ ಪರಾರಿ ಆಗುತ್ತಿದ್ದರು ಎಂದು ಪೊಲೀಸರು ಹೇಳಿದರು.

'ಆರೋಪಿಗಳ ಪೈಕಿ ಚೇತನ್ ಕೊರಿಯರ್ ಬಾಯ್ ಆಗಿದ್ದು, ಪವನ್ ಮತ್ತು ಆದರ್ಶ್ ಆಟೊ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಚೇತನ್ ಕೊರಿಯರ್ ವಿತರಿಸಲು ಹೋದಾಗ ಪಿ.ಜಿ ಮತ್ತು ಅವಿವಾಹಿತ ಯುವಕರು ವಾಸವಾಗಿರುವ ಕೊಠಡಿಗಳನ್ನು ಗುರುತಿಸುತ್ತಿದ್ದರು. ನಂತರ, ತಮ್ಮ ಸ್ನೇಹಿತರ ಜತೆ ಹೋಗಿ ಕಳವು ಮಾಡುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

ಕಳವು ಮಾಡಿದ ಲ್ಯಾಪ್‌ಟಾಪ್ ಹಾಗೂ ವಾಚ್‌ಗಳನ್ನು ಹಾಸನ, ಚನ್ನರಾಯಪಟ್ಟಣ, ಬೆಂಗಳೂರಿನಲ್ಲಿ ಕಡಿಮೆ ದರಕ್ಕೆ ಮಾರಾಟ ಮಾಡುತ್ತಿದ್ದರು. ಬಂದ ಹಣದಲ್ಲಿ ಮೋಜು ಮಾಡುತ್ತಿದ್ದರು. ಆರೋಪಿಗಳ ಬಂಧನದಿಂದ 16 ಲ್ಯಾಪ್‌ಟಾಪ್ ಕಳವು ಪ್ರಕರಣಗಳು, 4 ದ್ವಿಚಕ್ರ ವಾಹನ ಕಳವು ಪ್ರಕರಣಗಳು, ಮೊಬೈಲ್ ಇ-ಲಾಸ್ಟ್‌ನಲ್ಲಿ ದಾಖಲಾಗಿದ್ದ 11 ಮೊಬೈಲ್ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಮಾಹಿತಿ ನೀಡಿದರು.

ತಮಿಳುನಾಡಿನ ಸೇಲಂನಿಂದ ಬಂದು ಕಳವು: ಒಬ್ಬನ ಬಂಧನ

ಅಪರಾಧ ಸುದ್ದಿ

ಸದ್ದಾನಾಯ್ಡು

ತಮಿಳುನಾಡಿನಿಂದ ಬಂದು ಸಾಫ್ಟ್‌ವೇರ್ ಎಂಜಿನಿಯರ್‌ಗಳು ಗುಂಪು ಸೇರುವ ಕಾಫಿ ಡೇ, ಹೋಟೆಲ್‌ಗಳ ಬಳಿ ಕಾರಿನ ಕಿಟಕಿ ಗಾಜು ಒಡೆದು ಲ್ಯಾಪ್‌ಟಾಪ್‌ಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ಸೇಲಂ ಜಿಲ್ಲೆಯ ಸದ್ದಾನಾಯ್ಡು(32) ಬಂಧಿತ. ಆರೋಪಿಯಿಂದ ₹12 ಲಕ್ಷ ಮೌಲ್ಯದ 17 ಲ್ಯಾಪ್‌ಟಾಪ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಈತನ ಸಹೋದರ ಗಂಗೇಶ್ ಎಂಬಾತ ತಲೆಮರೆಸಿಕೊಂಡಿದ್ದು, ಆತನಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದರು.

'ಸದ್ದಾನಾಯ್ಡು ಹಾಗೂ ಅವರ ಸಹೋದರ ಗಂಗೇಶ್, ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ, ಸೇಲಂನಲ್ಲಿ ಕೃಷಿ ಕೆಲಸ ಮಾಡಿಕೊಂಡಿದ್ದರು. ವಾರಕ್ಕೊಮ್ಮೆ ಬೆಂಗಳೂರಿಗೆ ಬೈಕ್‌ನಲ್ಲೇ ಬರುತ್ತಿದ್ದರು. ಸಾಫ್ಟ್‌ವೇರ್ ಎಂಜಿನಿಯರ್‌ಗಳು ಹೆಚ್ಚು ಸಂಖ್ಯೆಯಲ್ಲಿ ಸೇರುವ ಕಾಫಿ ಡೇ, ಹೋಟೆಲ್‌ಗಳು, ಪಬ್ ಹಾಗೂ ರೆಸ್ಟೋರೆಂಟ್‌ಗಳ ಬಳಿ ಬಂದು ಕಾರಿನ ಒಳಗಡೆ ಪರಿಶೀಲಿಸುತ್ತಿದ್ದರು. ಕಾರಿನ ಒಳಗೆ ಲ್ಯಾಪ್‌ಟಾಪ್ ಬ್ಯಾಗ್ ಕಂಡರೆ ಗಾಜು ಒಡೆದು ಕಳ್ಳತನ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಜಯನಗರದ 5ನೇ ಹಂತದಲ್ಲಿ ಇರುವ ಕಾಫಿ ಅಂಗಡಿಯ ಎದುರು ಪಾರ್ಕಿಂಗ್ ಮಾಡಿದ್ದ ಕಾರಿನ ಕಿಟಕಿಯ ಗಾಜು ಒಡೆದು ಲ್ಯಾಪ್‌ಟಾಪ್ ಅನ್ನು ಈಚೆಗೆ ಕಳವು ಮಾಡಿದ್ದರು. ಈ ಸಂಬಂಧ ದಾಖಲಾದ ಪ್ರಕರಣ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ತಮಿಳುನಾಡಿನಲ್ಲಿ ಬಂಧಿಸಲಾಯಿತು' ಎಂದು ಮಾಹಿತಿ ನೀಡಿದರು.

ಸಂಜೆ ಬೆಂಗಳೂರಿಗೆ ಬರುತ್ತಿದ್ದ ಸಹೋದರರು: 'ತಮಿಳುನಾಡಿನಿಂದ ಸಂಜೆ 6 ಗಂಟೆ ಸುಮಾರಿಗೆ ಬೆಂಗಳೂರಿಗೆ ಬೈಕ್‌ನಲ್ಲಿ ಬರುತ್ತಿದ್ದ ಸದ್ದಾನಾಯ್ಡು ಹಾಗೂ ಗಂಗೇಶ್ ರಾತ್ರಿ 9 ಗಂಟೆವರೆಗೂ ವಿವಿಧೆಡೆ ಸುತ್ತಾಡಿ ಕಾರಿನ ಗಾಜು ಒಡೆದು ಲ್ಯಾಪ್‌ಟಾಪ್ ಕಳವು ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಸದ್ದಾನಾಯ್ಡು ಬಂಧನದಿಂದ ಜಯನಗರ ಠಾಣೆಯಲ್ಲಿ ದಾಖಲಾಗಿದ್ದ 5 ಲ್ಯಾಪ್‌ಟಾಪ್ ಕಳವು ಪ್ರಕರಣಗಳು ಪತ್ತೆ ಆಗಿವೆ. ಆರೋಪಿಗಳು ಈ ಹಿಂದೆ ಸೇಲಂ ಗ್ಯಾಂಗ್ ಜೊತೆ ಸೇರಿ ಕೃತ್ಯ ಎಸಗುತ್ತಿದ್ದರು. ಇತ್ತೀಚೆಗೆ ಇಬ್ಬರೇ ಕೃತ್ಯ ಎಸಗುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹೆಣ್ಣು ಮಗು ಅಪಹರಿಸಿದ್ದ ಮಹಿಳೆಗೆ ನಾಲ್ಕು ವರ್ಷ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿ ವಿಲಾಸ ಆಸ್ಪತ್ರೆಯಿಂದ ಹೆಣ್ಣು ಮಗುವನ್ನು ಅಪಹರಿಸಿ, ಮಾರಾಟ ಮಾಡಿದ್ದ ಪ್ರಕರಣದಲ್ಲಿ ಅಪರಾಧಿಗೆ ನ್ಯಾಯಾಲಯವು ನಾಲ್ಕು ವರ್ಷ ಜೈಲು ಶಿಕ್ಷೆ ಹಾಗೂ ₹5 ಸಾವಿರ ದಂಡ ವಿಧಿಸಿದೆ.

ಯಲಚೇನಹಳ್ಳಿಯ ಆಯೇಷಾ ಶಿಕ್ಷೆಗೆ ಒಳಗಾದವರು. 2020 ನವೆಂಬರ್ 11ರಂದು ವಾಣಿ ವಿಲಾಸ ಆಸ್ಪತ್ರೆಯ ತೀವ್ರ ನಿಗಾ ಘಟಕದಿಂದ(ಐಸಿಯು) ಮಗುವನ್ನು ಅಪಹರಣ ಮಾಡಲಾಗಿತ್ತು.

ವಿಶ್ವೇಶ್ವರಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು, ಆರೋಪಿಯನ್ನು ಬಂಧಿಸಿದ್ದರು. ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಲಯವು ಪ್ರಕರಣದ ವಿಚಾರಣೆ ನಡೆಸಿ ಶಿಕ್ಷೆ ಪ್ರಕಟಿಸಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

'2020ರ ನವೆಂಬರ್ 11ರಂದು ವಿಜ್ಞಾನಪುರದ ಅರ್ಷಿಯಾ ಅವರು ಹೆರಿಗೆಗೆಂದು ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. ಎರಡು ದಿನ ಮಗುವಿನ ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿತ್ತು. ಐಸಿಯುಗೆ ನುಗ್ಗಿದ್ದ ಆಯೇಷಾ ಮಗುವನ್ನು ಅಪಹರಣ ಮಾಡಿದ್ದಳು' ಎಂದು ಪೊಲೀಸರು ಹೇಳಿದರು.

'ಆಸ್ಪತ್ರೆಯಲ್ಲಿದ್ದ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿ ಆಧರಿಸಿ ಮಗು ಅಪಹರಣ ಮಾಡಿದ್ದ ಆರೋಪಿಯನ್ನು ಪತ್ತೆ ಹಚ್ಚಲಾಗಿತ್ತು. ನಂತರ, ವಶಕ್ಕೆ ಪಡೆದು ಬಂಧಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

'ಆಯೇಷಾ ತಂಗಿಯೂ ಹೆರಿಗೆಗೆಂದು ಆಸ್ಪತ್ರೆಗೆ ದಾಖಲಾಗಿದ್ದರು. ಅವರನ್ನು ನೋಡಲು ಆಯೇಷಾ ಸಹ ಬಂದಿದ್ದಳು. ತಂಗಿಯನ್ನು ನೋಡಿ ವಾಪಸ್ ಬರುವಾಗ ಐಸಿಯುಗೆ ಹೋಗಿದ್ದಳು. ಅಲ್ಲಿ ಅರ್ಷಿಯಾ ಅವರ ಮಗುವಿನ ಬಳಿಗೆ ಹೋಗಿದ್ದ ಅಪರಾಧಿ, 'ನಾನು ಮಗುವಿನ ಚಿಕ್ಕಮ್ಮ' ಎಂದು ಆಸ್ಪತ್ರೆ ಸಿಬ್ಬಂದಿ ಬಳಿ ಹೇಳಿಕೊಂಡಿದ್ದಳು. ನಿಜವೆಂದು ನಂಬಿದ್ದ ಸಿಬ್ಬಂದಿ ಮಗುವನ್ನು ಕೊಟ್ಟಿದ್ದರು. ಮಗುವನ್ನು ಮನೆಗೆ ಕರೆದೊಯ್ದು ಅಬ್ದುಲ್ ರೆಹಮಾನ್ ಹಾಗೂ ಸಾನಿಯಾ ಫಾತಿಮಾ ದಂಪತಿಗೆ ₹80 ಸಾವಿರಕ್ಕೆ ಮಾರಾಟ ಮಾಡಿದ್ದಳು ಎಂಬುದು ತನಿಖೆಯಿಂದ ಗೊತ್ತಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಡ್ರಗ್ಸ್ ದಂಧೆ: ಸೆಪ್ಟೆಂಬರ್‌ನಲ್ಲಿ 67 ಬಂಧನ

ಬೆಂಗಳೂರು: ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಮೂವರು ವಿದೇಶಿ ಪ್ರಜೆಗಳೂ ಸೇರಿದಂತೆ 67 ಮಂದಿಯನ್ನು ನಗರದ ವಿವಿಧ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಾದಕ ದ್ರವ್ಯ ನಿಗ್ರಹ ಕಾಯ್ದೆಯ ಅಡಿ (ಎನ್‌ಡಿಪಿಎಸ್) 49 ಪ್ರಕರಣ ದಾಖಲು ಮಾಡಲಾಗಿದೆ. 170 ಕೆ.ಜಿ ಗಾಂಜಾ, 2 ಕೆ.ಜಿ ಅಫೀಮು, 13 ಗ್ರಾಂ ಕೊಕೇನ್, 372 ಗ್ರಾಂ ಎಂಡಿಎಂಎ, 998 ಎಕ್ಸ್‌ಟೆಸಿ ಮಾತ್ರೆಗಳು, 1,089 ಎಲ್‌ಎಸ್‌ಡಿ ಸ್ಟ್ರಿಪ್ಸ್ ಅನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ನಗರದಲ್ಲಿ ಕಾನೂನು ಬಾಹಿರ ಚಟುವಟಿಕೆ ನಡೆಸುತ್ತಿದ್ದವರ ವಿರುದ್ಧ 196 ಪ್ರಕರಣ ದಾಖಲಿಸಿಕೊಂಡು, 343 ಮಂದಿಯನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ಪಾಲಿಶ್ ನೆಪದಲ್ಲಿ ಚಿನ್ನ ಕಳವು: ಅಕ್ಕಸಾಲಿಗನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಲಿಶ್ ಹಾಗೂ ಹರಳು ಕೂರಿಸುವ ನೆಪದಲ್ಲಿ ಒಂದೂವರೆ ಕೆ.ಜಿ ಚಿನ್ನಾಭರಣ ಕದ್ದೊಯ್ದಿದ್ದ ಆರೋಪಿಯನ್ನು ಹಲಸೂರುಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಅಂಕುರ್ ಕುಮಾರ್ ಡಂಗರವಾಲ್(32) ಬಂಧಿತ. ಆರೋಪಿಯಿಂದ ₹38 ಲಕ್ಷ ಮೌಲ್ಯದ 384 ಗ್ರಾಂ ಚಿನ್ನದ ಗಟ್ಟಿ ಹಾಗೂ ₹10.99 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

'ಆರೋಪಿ ನಗರ್ತಪೇಟೆಯಲ್ಲಿ ವಾಸವಾಗಿದ್ದ. ಅಕ್ಕಸಾಲಿಗನಾಗಿ ಕೆಲಸ ಮಾಡಿಕೊಂಡಿದ್ದ. ಪರಿಚಯಸ್ಥರ ಆಭರಣಗಳ ಅಂಗಡಿಗಳಿಂದ ಚಿನ್ನಾಭರಣಗಳನ್ನು ತಂದು ಪಾಲಿಶ್ ಮಾಡುವುದು ಹಾಗೂ ಹರಳು ಕೂರಿಸಿ ವಾಪಸ್ ಕೊಡುತ್ತಿದ್ದ. ನಗರ್ತಪೇಟೆಯಲ್ಲಿ ಚಿನ್ನಾಭರಣ ಅಂಗಡಿ ಮಾಲೀಕರೊಬ್ಬರಿಂದ ಮೇ ತಿಂಗಳಲ್ಲಿ 1 ಕೆ.ಜಿ 277 ಗ್ರಾಂ ಚಿನ್ನಾಭರಣಗಳನ್ನು ಒಂದು ತಿಂಗಳಲ್ಲೇ ಪಾಲಿಶ್ ಮತ್ತು ಹರಳುಗಳನ್ನು ಕೂರಿಸಿ ಕೊಡುವುದಾಗಿ ಭರವಸೆ ನೀಡಿ ತೆಗೆದುಕೊಂಡು ಹೋಗಿದ್ದ. ಆದರೆ, ಚಿನ್ನಾಭರಣ ವಾಪಸ್ ನೀಡಿರಲಿಲ್ಲ. ಅನುಮಾನಗೊಂಡಿದ್ದ ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ತಿಳಿಸಿದರು.

ರಾಜಸ್ಥಾನದ ಬಿಲ್ವಾರ್ ಜಿಲ್ಲೆಯ ಕಲಿಯಾಸ್ ಗ್ರಾಮದ ಮನೆಯಲ್ಲಿದ್ದ ವೇಳೆ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿ ಅಂಕುರ್ ಕುಮಾರ್ ಚಿನ್ನಾಭರಣಗಳನ್ನು ಕರಗಿಸಿ ಚಿನ್ನದ ಗಟ್ಟಿಗಳನ್ನಾಗಿ ಮಾರ್ಪಡಿಸಿ ನಗರದ ವಿವಿಧ ಆಭರಣ ಅಂಗಡಿಗಳಿಗೆ ಮಾರಾಟ ಮಾಡಿದ್ದ. ಜ್ಯುವೆಲ್ಲರಿ ಅಂಗಡಿಗಳಿಂದ 384 ಗ್ರಾಂ ಚಿನ್ನಾಭರಣ ಮತ್ತು ₹10.99 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಪ್ರೇಯಸಿಯೊಂದಿಗೆ ಸುತ್ತಾಟ: 'ನಗರದ ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಅಸ್ಸಾಂ ಯುವತಿಯನ್ನು ಆರೋಪಿ ಪ್ರೀತಿಸುತ್ತಿದ್ದ. ದೋಚಿದ್ದ ಚಿನ್ನಾಭರಣ ಮಾರಾಟ ಮಾರಿ ಜ್ಯುವೆಲ್ಲರಿ ಮಾಲೀಕರಿಂದ ಲಕ್ಷಾಂತರ ರೂಪಾಯಿ ಪಡೆದುಕೊಂಡಿದ್ದ ಆರೋಪಿ, ಪ್ರೇಯಸಿ ಜೊತೆಗೆ ಮುಂಬೈ, ಗೋವಾ, ರಾಜಸ್ಥಾನ ಸೇರಿದಂತೆ ವಿವಿಧ ಪ್ರವಾಸಿ ತಾಣಗಳಿಗೆ ವಿಮಾನದಲ್ಲೇ ಪ್ರಯಾಣಿಸಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿದ್ದಾರೆ.

ಆಕ್ಸಿಸ್ ಬ್ಯಾಂಕ್

ಹರಾಜಿಗೆ ಸಾರ್ವಜನಿಕ ಸೂಚನೆ

ಸಾರ್ವಜನಿಕ ಸೂಚನೆ – ಅಡಮಾನ ಚಿನ್ನಾಭರಣಗಳ ಇ–ಹರಾಜು ನೋಟಿಸ್

ಈ ಮೂಲಕ ಸಾಲಗಾರರರಿಗೆ ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗಿನ ಖಾತೆಗಳಲ್ಲಿ ಒತ್ತೆಯಿಡಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಆಕ್ಸಿಸ್ ಬ್ಯಾಂಕ್ ಉದ್ದೇಶಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ-ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 19.10.2024 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ ಮೊತ್ತ	ಡಿಮ್ಯಾಂಡ್ ನೋಟೀಸ್ ದಿ:	ಒಟ್ಟು ತೂಕ	ನಿವ್ವಳ ತೂಕ
ಬನಶಂಕರಿ, ಬೆಂಗಳೂರು [ಕ]	XXXXXXXXXXX99748	ಸುಬ್ರಹ್ಮಣ್ಯ ಎನ್	241384	15-Feb-24	58.800	58.600
ಬನಶಂಕರಿ, ಬೆಂಗಳೂರು [ಕ]	XXXXXXXXXXX49521	ಸುರೇಶ್ ಆರ್	192870.6	07-Sep-24	47.400	41.000
ಬನಶಂಕರಿ, ಬೆಂಗಳೂರು [ಕ]	XXXXXXXXXXX65052	ಚೇತನ್ ಎಲ್	192693.71	07-Sep-24	45.200	44.600
ಬಸವನಗುಡಿ, ಬೆಂಗಳೂರು [ಕ]	XXXXXXXXXXX55306	ಶಿವ	988015	22-Mar-24	288.200	266.200
ಭಟ್ಟರಹಳ್ಳಿ ಬೆಂಗಳೂರು [ಕ]	XXXXXXXXXXX92538	ಜಸ್ತಿ ನಾಗೇಂದ್ರ ಬಾಬು	29028.62	08-May-24	9.300	7.200
ಭಟ್ಟರಹಳ್ಳಿ ಬೆಂಗಳೂರು [ಕ]	XXXXXXXXXXX79897	ರೇವಂತ್ ಕುಮಾರ್ ಬುರ್ರಾ	26611.91	04-Aug-24	9.300	5.800
ಬಿಡದಿ, ಬೆಂಗಳೂರು [ಕ]	XXXXXXXXXXX74169	ಲಕ್ಷ್ಮೀ	142886	07-Sep-24	34.100	33.800
ಬಿಡದಿ, ಬೆಂಗಳೂರು [ಕ]	XXXXXXXXXXX44025	ಸುರೇಶ ಜಿ ಎಸ್	93090.74	22-Mar-24	25.300	24.300
ಬಿಡದಿ, ಬೆಂಗಳೂರು [ಕ]	XXXXXXXXXXX27528	ಸುರೇಶ ಜಿ ಎಸ್	60245.99	22-Mar-24	15.100	15.000
ಚಾಮರಾಜಪೇಟೆ, ಬೆಂಗಳೂರು [ಕ]	XXXXXXXXXXX20465	ಬಾಲರಾಜ್ ಎಸ್ ಎಂ	607350	04-Aug-24	153.300	150.600
ಚಾಮರಾಜಪೇಟೆ, ಬೆಂಗಳೂರು [ಕ]	XXXXXXXXXXX85061	ರವಿ ಎ	208867	04-Aug-24	43.500	43.300
ಚನ್ನಪಟ್ಟಣ [ಕ]	XXXXXXXXXXX22575	ಬೇಬಿ ನಾಜ್	117784	07-Sep-24	31.900	29.300
ಚನ್ನಪಟ್ಟಣ [ಕ]	XXXXXXXXXXX37287	ಮಹಬೂಬ್ ಖಾನ್	77579.09	08-May-24	23.400	23.000
ಚನ್ನಪಟ್ಟಣ [ಕ]	XXXXXXXXXXX08482	ನದ್ಫೀಮ್ ಅಹಮದ್	58912	07-Sep-24	16.200	15.900
ಕಾಕ್ಸ್ ಟೌನ್, ಬೆಂಗಳೂರು [ಕ]	XXXXXXXXXXX39281	ಸಭಾ ನಾಜ್	510139	06-Sep-24	136.800	132.800
ದೇವನಹಳ್ಳಿ, ಬೆಂಗಳೂರು [ಕ]	XXXXXXXXXXX23548	ಝುಬಿ ಉಲ್ಲಾ	447083.64	07-Sep-24	107.100	106.300
ದೇವನಹಳ್ಳಿ, ಬೆಂಗಳೂರು [ಕ]	XXXXXXXXXXX71324	ಕೆ ನಟರಾಜ್	215088.08	07-Sep-24	50.300	48.800
ದೇವನಹಳ್ಳಿ, ಬೆಂಗಳೂರು [ಕ]	XXXXXXXXXXX58218	ಮೂರ್ತಿ ಎಂ	124505.74	07-Sep-24	38.000	29.000
ದೇವನಹಳ್ಳಿ, ಬೆಂಗಳೂರು [ಕ]	XXXXXXXXXXX88356	ಮಹೇಶ್ ಎನ್	26418	07-Sep-24	7.100	6.100
ದೊಡ್ಡಬಳ್ಳಾಪುರ, ಬೆಂಗಳೂರು [ಕ]	XXXXXXXXXXX34642	ಮನುಶ್ರೀ ಟಿ ಎ	176959.1	04-Aug-24	43.160	41.160
ದೊಡ್ಡಬಳ್ಳಾಪುರ, ಬೆಂಗಳೂರು [ಕ]	XXXXXXXXXXX74038	ಆರಿಫ್ ಕೆ ಎ	161264	06-Sep-24	33.700	33.000
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು [ಕ]	XXXXXXXXXXX47766	ಗೋಪಾಲ ನಾಯ್ಕ ಗರಿ ಹನುಮ ನಾಯ್ಕ	81308	06-Sep-24	21.500	20.200
ಗೋವಿಂದರಾಜನಗರ, ಬೆಂ [ಕ]	XXXXXXXXXXX80566	ಅಶ್ವಿನ್ ಬಿ ಆರ್	96514	07-Sep-24	25.400	24.900
ಹೆಗಡೆನಗರ ಬೆಂ. [ಕ]	XXXXXXXXXXX19169	ಪಿ ಅಯೂಬ್ ಪಾಷಾ	191510.87	07-Sep-24	45.800	45.700
ಹೆಗಡೆನಗರ ಬೆಂ. [ಕ]	XXXXXXXXXXX49440	ಬಸವರಾಜ ಮನಗುತ್ತಿ	136375.81	07-Sep-24	34.200	32.200
ಹೊಸಕೋಟೆ, ಬೆಂಗಳೂರು [ಕ]	XXXXXXXXXXX18021	ಪೂಜಾರಿ ಯೆರ್ರಿ ಸ್ವಾಮಿ	106357	07-Sep-24	23.200	22.900
ಹೊಸಕೋಟೆ, ಬೆಂಗಳೂರು [ಕ]	XXXXXXXXXXX78277	ರಾಹುಲ್ ಸಿಂಗ್	40736	08-May-24	10.600	10.500
ಹೊಸಕೋಟೆ, ಬೆಂಗಳೂರು [ಕ]	XXXXXXXXXXX45943	ನಾಗೇಶ್ ಸಿ	30911	06-Sep-24	7.900	7.700
ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು [ಕ]	XXXXXXXXXXX87734	ಮೋಸೆಸ್ ಎಂ	58530	07-Sep-24	16.100	14.700
ಹುಳಿಮಾವು ಬೆಂಗಳೂರು [ಕ]	XXXXXXXXXXX74241	ಬಿ ಆರ್ ಶಿವಕುಮಾರ್	500218	06-Sep-24	141.670	130.270
ಇಂದಿರಾನಗರ, ಬೆಂಗಳೂರು [ಕ]	XXXXXXXXXXX64700	ಚನ್ನಪ್ಪ ಕೆ ಎಸ್	2365469.85	15-Feb-24	619.400	613.800
ಇಂದಿರಾನಗರ, ಬೆಂಗಳೂರು [ಕ]	XXXXXXXXXXX89968	ಮೀರ್ ಅಬಿಸ್ ಅಲಿ	704960	07-Sep-24	155.900	153.200
ಇಂದಿರಾನಗರ, ಬೆಂಗಳೂರು [ಕ]	XXXXXXXXXXX01615	ನಾಜಿಯಾ ಅಲಿ	600108	07-Sep-24	128.100	125.400
ಇಂದಿರಾನಗರ, ಬೆಂಗಳೂರು [ಕ]	XXXXXXXXXXX89683	ಮೀರ್ ಅಬಿಸ್ ಅಲಿ	536257.98	07-Sep-24	113.500	112.500
ಜೆ ಸಿ ರಸ್ತೆ, ಬೆಂಗಳೂರು [ಕ]	XXXXXXXXXXX81035	ಬಾಲಾಜಿ ಪಿ	87794	07-Sep-24	22.900	22.300
ಜಯನಗರ, ಬೆಂಗಳೂರು [ಕ]	XXXXXXXXXXX44114	ಎನ್ ರವೀಂದ್ರ	154642	28-Aug-24	39.300	37.600
ಕಲ್ಯಾಣ್ ನಗರ, ಬೆಂಗಳೂರು [ಕ]	XXXXXXXXXXX64503	ಟಿ ಕೆ ರಾಜೇಂದ್ರ ಪ್ರಸಾದ್	248091	07-Sep-24	54.900	53.900
ಕಲ್ಯಾಣ್ ನಗರ, ಬೆಂಗಳೂರು [ಕ]	XXXXXXXXXXX61410	ಟಿ ಕೆ ರಾಜೇಂದ್ರ ಪ್ರಸಾದ್	238979.44	07-Sep-24	52.800	52.100
ಕಸ್ತೂರಿಬಾನಗರ ಮೈಸೂರು ರಸ್ತೆ [ಕ]	XXXXXXXXXXX04106	ಶ್ರುತಿ	44420	15-Feb-24	12.800	12.700
ಮಹಾಲಕ್ಷ್ಮೀ ಲೇಔಟ್ ಬೆಂ [ಕ]	XXXXXXXXXXX16829	ಪ್ರಮೋದಾ ಡಿ	84565	28-Aug-24	21.700	21.700
ಮಹಾಲಕ್ಷ್ಮೀ ಲೇಔಟ್ ಬೆಂ [ಕ]	XXXXXXXXXXX12597	ಕಣ್ಣನ್ ಆರ್	78210	04-Aug-24	16.800	16.800
ಮಹಾಲಕ್ಷ್ಮೀ ಲೇಔಟ್ ಬೆಂ [ಕ]	XXXXXXXXXXX99300	ಐಶ್ವರ್ಯ ವಿ	51867	07-Sep-24	17.100	17.000
ಮಹಾಲಕ್ಷ್ಮೀ ಲೇಔಟ್ ಬೆಂ [ಕ]	XXXXXXXXXXX93842	ಆರ್ ವೇದಮೂರ್ತಿ	34837	08-May-24	9.600	9.100
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX84268	ಐಪ್ರಕ್ಷಮಿತಾ ಮೊಹಾಂತಿ	306429.87	28-Aug-24	73.500	72.800
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX92402	ನವೀನ್ ಎ	212540.45	15-Feb-24	100.900	61.000
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX24966	ಮೊಹಮ್ಮದ್ ಅಜರ್	202592	20-Jul-24	50.600	50.000
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX19603	ಗಾರ್ಗಿ ಚಕ್ರವರ್ತಿ	200100	26-Aug-24	64.700	57.500
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX81374	ಲೋಕೇಶ ಪಿ	76326	04-Aug-24	23.700	23.000
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX88374	ಚಂದ್ರನಿ ಘೋಷ್	67390.25	10-Oct-23	104.300	103.000
ನಾಗರಭಾವಿ, ಬೆಂಗಳೂರು [ಕ]	XXXXXXXXXXX29412	ಅಶೋಕ್ ಕುಮಾರ್	99877.9	04-Aug-24	28.100	27.300
ಪೀಣ್ಯ, ಬೆಂಗಳೂರು [ಕ]	XXXXXXXXXXX93716	ವುಂದಲ ಹರಿನಾಥ ರೆಡ್ಡಿ	602327	04-Aug-24	136.700	130.800
ಪೀಣ್ಯ, ಬೆಂಗಳೂರು [ಕ]	XXXXXXXXXXX41987	ಗಾಯತ್ರಿ ಎಸ್	121178	07-Jun-24	31.800	31.600
ಪೀಣ್ಯ, ಬೆಂಗಳೂರು [ಕ]	XXXXXXXXXXX94813	ಸಂತೋಷ ಎಂ	115835	28-Aug-24	26.100	25.700
ಪೀಣ್ಯ, ಬೆಂಗಳೂರು [ಕ]	XXXXXXXXXXX79546	ಸುನೀಲ್ ಎಂ ಪಗಡ	106347	26-Aug-24	25.700	25.700
ಪೀಣ್ಯ, ಬೆಂಗಳೂರು [ಕ]	XXXXXXXXXXX51967	ಎಂ ಮೂರ್ತಿ	104449	20-Jul-24	27.800	24.800
ಆರ್ ಟಿ ನಗರ, ಬೆಂಗಳೂರು [ಕ]	XXXXXXXXXXX22520	ರವಿ ಕಾರಿಯಪ್ಪ	369194	20-Jul-24	84.500	84.000
ಆರ್ ಟಿ ನಗರ, ಬೆಂಗಳೂರು [ಕ]	XXXXXXXXXXX77558	ಶ್ರೀಧರ್ ಬಿ ರುದ್ರಪ್ಪ	209543	07-Sep-24	64.200	44.000
ರಾಮನಗರ [ಕ]	XXXXXXXXXXX88047	ಸಲೀಂ ಪಾಷಾ	71397.97	06-Sep-24	22.380	20.910
ಆರ್‌ಬಿಐ ಲೇಔಟ್, ಬೆಂಗಳೂರು [ಕ]	XXXXXXXXXXX94897	ರಕ್ಷಿತ್ ಕೆ ಪಿ	162347	15-Feb-24	52.000	45.900
ಸಹಕಾರನಗರ, ಬೆಂಗಳೂರು [ಕ]	XXXXXXXXXXX15961	ಕಿಶೋರ್ ಆರ್	158980	28-Aug-24	42.500	42.000
ಸಂಜಯ್ ನಗರ, ಬೆಂಗಳೂರು [ಕ]	XXXXXXXXXXX34830	ಬುರ್ಹಾನ್ ಪಾಷಾ ಮಲಿಕ್	701478	05-Aug-24	177.400	173.200
ಸಂಜಯ್ ನಗರ, ಬೆಂಗಳೂರು [ಕ]	XXXXXXXXXXX00632	ಪೂಜಾ ಪ್ರಭು	230631	04-Aug-24	50.300	49.800
ಸಂಜಯ್ ನಗರ, ಬೆಂಗಳೂರು [ಕ]	XXXXXXXXXXX72825	ಸುಮಿತ್ರಾ ವಿ	115769	02-Apr-24	35.400	29.400
ಸಂಜಯ್ ನಗರ, ಬೆಂಗಳೂರು [ಕ]	XXXXXXXXXXX17777	ವಿನ್ಸೆಂಟ್ ಕುಮಾರ್ ಬಿ	115419.78	08-May-24	29.200	28.700
ವಿದ್ಯಾರಣ್ಯಪುರ, ಬೆಂಗಳೂರು [ಕ]	XXXXXXXXXXX74088	ಶಿವಪ್ಪ	37605	07-Sep-24	9.900	9.800
ವಿಜಯನಗರ, ಬೆಂಗಳೂರು [ಕ]	XXXXXXXXXXX37787	ಮುಬಾರಕ್ ಪಾಷಾ	756713	06-Sep-24	216.500	208.100
ವಿಜಯನಗರ, ಬೆಂಗಳೂರು [ಕ]	XXXXXXXXXXX71268	ಶಾಲಿನಿ ಎ	519160.66	07-Sep-24	126.400	126.400
ವಿಜಯನಗರ, ಬೆಂಗಳೂರು [ಕ]	XXXXXXXXXXX59565	ಪಿ ವೀಣಾ	268091	20-Jul-24	100.500	93.600
ವಿಜಯನಗರ, ಬೆಂಗಳೂರು [ಕ]	XXXXXXXXXXX13012	ಅಬ್ದುಲ್ಲಾ ಯಾಫೈ	114802	06-Sep-24	31.500	31.500
ವಿಜಯನಗರ, ಬೆಂಗಳೂರು [ಕ]	XXXXXXXXXXX96460	ಸೈಯದ್ ಜೈನುಲ್ಲಾಬುದ್ದೀನ್	69122.51	06-Sep-24	20.500	18.000
ವೈಟ್‌ಫೀಲ್ಡ್ ಮೈನ್, ಬೆಂ [ಕ]	XXXXXXXXXXX49253	ಸುಧೀರ್ ಶರ್ಮಾ	265500	07-Jun-24	94.540	68.000
ವೈಟ್‌ಫೀಲ್ಡ್ ಮೈನ್, ಬೆಂ [ಕ]	XXXXXXXXXXX20282	ಮೋಹನ್ ಬಾಬು ಎಂ	185921.37	15-Feb-24	66.420	62.020
ವೈಟ್‌ಫೀಲ್ಡ್ ಮೈನ್, ಬೆಂ [ಕ]	XXXXXXXXXXX67210	ರಮೇಶ್ ಕುಮಾರ್ ಆರ್	74056.86	07-Sep-24	20.700	20.000
ಯಲಹಂಕ, ಬೆಂಗಳೂರು [ಕ]	XXXXXXXXXXX45228	ಆರುದ್ರ ಸುಬ್ಬ ರಾವ್	310782	07-Sep-24	84.500	78.300
ಯಲಹಂಕ, ಬೆಂಗಳೂರು [ಕ]	XXXXXXXXXXX01590	ಮನೋಜಿತ್ ರಾಯ್	288599.45	04-Aug-24	66.700	65.900
ಯಲಹಂಕ, ಬೆಂಗಳೂರು [ಕ]	XXXXXXXXXXX70932	ರಾಜೇಶ್ ಕುಮಾರ್ ಬಿ ಎಂ	45634.19	07-Sep-24	12.200	12.000

ಆಕ್ಸಿಸ್ ಬ್ಯಾಂಕ್ ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ. ಹರಾಜು ಆನ್‌ಲೈನ್ **https://gold.samil.in** ನಲ್ಲಿ **ದಿನಾಂಕ : 19.10.2024 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ **https://gold.samil.in** ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು **ಸಹಿ/– ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–151/1594/2024–25 ದಿನಾಂಕ:08.10.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ಎಲಿಗಂಟ್ ಬಿಲ್ಡರ್ಸ್ & ಡೆವಲಪರ್ಸ್ # 1/116, ನ್ಯೂ ಕೆಂಪೇಗೌಡ ಲೇಔಟ್, ಬಿ.ಎಸ್.ಕೆ 3ನೇ ಹಂತ, 4ನೇ ಅಡ್ಡರಸ್ತೆ, ಬೆಂಗಳೂರು–560 085	ಯಲಹಂಕ	ಜಾಲ	ನೆಲ್ಲುಕುಂಟೆ	36/1	1 ಎಕರೆ 00 ಗುಂಟೆ	ವ್ಯವಸಾಯ ವಲಯ	ವಸತಿ ಉಪಯೋಗ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಸತಿ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ. ವಸತಿ ಕಟ್ಟಡ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಸತಿ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ–561 203
ದೂರವಾಣಿ : 080–29562046

ಸಂಖ್ಯೆ: DPA/TP/ಭೂಉನಿ/10/2024-25 ದಿನಾಂಕ:08.10.2024

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (3) ರ ತಿದ್ದುಪಡಿ ಕಾಯ್ದೆಯಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 95 ಬಿಎಂಆರ್ 2016 ದಿನಾಂಕ: 30.11.2017 ರನ್ವಯ ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಗಂಗಾಧರಪುರ ಗ್ರಾಮವು "ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶ" ವ್ಯಾಪ್ತಿಗೆ ಒಳಪಟ್ಟಿದ್ದು, ಈ ಹಿಂದೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 157 ಬಿಎಂಆರ್ ದಿನಾಂಕ:27.01.2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29.01.2009ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಗಂಗಾಧರಪುರ ಗ್ರಾಮದ ಸರ್ವೆ ನಂ. 78/3ರ ಪೈಕಿ 00–19.50 ಗುಂಟೆ ವಿಸ್ತೀರ್ಣದ ಪ್ರದೇಶವನ್ನು 'ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉದ್ದೇಶಕ್ಕಾಗಿ' ಕಾಯ್ದಿರಿಸಲಾಗಿರುತ್ತದೆ. ಮಹಾಯೋಜನೆ ಅನುಮೋದನೆಗೊಂಡು ಐದು ವರ್ಷಗಳ ಅವಧಿಯು ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರನ್ವಯ ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಲಾದ ಭೂ ಉಪಯೋಗ ರದ್ದಾಗುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 ರನ್ವಯ ಈ ಕೆಳಕಂಡಂತೆ 'ವಸತಿ' ಭೂ ಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುವಂತೆ ಕಲಂ 69 (4) ರ ಅಡಿಯಲ್ಲಿ 'ವಸತಿ' ಭೂ ಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ	ವಿಸ್ತೀರ್ಣ (ಎ–ಗು)	ಬೆಂ.ಅ.ರಾ.ವಿ.ನಿ.ಪ್ರ. ಯೋ.ಪ್ರಾಧಿಕಾರದ ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ನಾರಾಯಣಸ್ವಾಮಿ ಎಲ್.ಎನ್. ಬಿನ್ ನಾರಾಯಣಪ್ಪ ಮತ್ತು ಶ್ರೀ ವಿ.ಆರ್.ರಮೇಶ್ ಬಿನ್ ರಂಗೇಗೌಡ	ದೊಡ್ಡ ಬಳ್ಳಾಪುರ	ಕಸಬಾ	ಗಂಗಾಧರ ಪುರ	78/3ರ ಪೈಕಿ	0–19.50	ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ	ವಸತಿ

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/35/2024–25/1605 ದಿನಾಂಕ: 04.10.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಅಶೋಕ ರೆಡ್ಡಿ ಎ ಬಿನ್ ಅಶ್ವಥಪ್ಪ, ಶ್ರೀ ಎಂ ದಿಲೀಪ್ ಬಿನ್ ಮಾರಪ್ಪ ಹಾಗೂ ಶ್ರೀಮತಿ ದೀಪ ಎಸ್ ವಾಣಿ ಕೋಂ ಶ್ರೀ ದೇವ್ ಕುಮಾರ್ ಆರ್.	ದೇವನಹಳ್ಳಿ	ಕುಂದಾಣ	ಇಲ್‌ತೊರೆ	55/1	0–38	ವ್ಯವಸಾಯ	ವಸತಿ
2	ಶ್ರೀ ಅಶೋಕ ರೆಡ್ಡಿ ಎ ಬಿನ್ ಅಶ್ವಥಪ್ಪ,	ದೇವನಹಳ್ಳಿ	ಕುಂದಾಣ	ಇಲ್‌ತೊರೆ	55/2	0–19	ವ್ಯವಸಾಯ	ವಸತಿ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ಭೂಉಪಯೋಗ ವಲಯ'** ದಿಂದ **'ವಸತಿ ವಲಯ'ಕ್ಕೆ** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/ಜಿಎ/2420/2024–25

ಶಿಬಿರದಲ್ಲಿ ಕಂದಾಯ ಸಚಿವ ಕೃಷ್ಣಬೈರೇಗೌಡ, ಮಹಿಳೆಯೊಬ್ಬರಿಗೆ ಕನ್ನಡಕ ವಿತರಿಸಿದರು. ಕಾಂಗ್ರೆಸ್ ಮುಖಂಡ ಎಚ್.ಎ.ಶಿವಕುಮಾರ್ ಇತರರು ಇದ್ದರು

ನೇತ್ರ ತಪಾಸಣೆ ಶಿಬಿರಕ್ಕೆ ಸಚಿವ ಕೃಷ್ಣಬೈರೇಗೌಡ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕೆಬಿಜಿ ಸ್ವಯಂ ಸೇವಕರು ಹಾಗೂ ಡಾ.ಸೋಲಂಕಿ ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ ಕಟ್ಟಿಗೇನಹಳ್ಳಿಯಲ್ಲಿ ಯುವ ಕಾಂಗ್ರೆಸ್ ಮುಖಂಡರಾಗಿದ್ದ ಸಂತೋಷ್ ಬೆಳ್ಳೂಟಿ ಅವರ ಸ್ಮರಣಾರ್ಥ ಆಯೋಜಿಸಿದ್ದ ನೇತ್ರ ತಪಾಸಣಾ ಶಿಬಿರವನ್ನು ಕಂದಾಯ ಸಚಿವ ಕೃಷ್ಣಬೈರೇಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಸಕ್ರಿಯ ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ಸಂತೋಷ್ ಬೆಳ್ಳೂಟಿ ಅವರು, ಹಲವು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಅಂತಹ ನಿಷ್ಠಾವಂತ ಕಾರ್ಯಕರ್ತನ ಹೆಸರಿನಲ್ಲಿ ಕಣ್ಣಿನ ತಪಾಸಣೆ ಶಿಬಿರ ಆಯೋಜಿಸುವ ಮೂಲಕ ಬಡಜನರಿಗೆ ಕಣ್ಣಿನ ತಪಾಸಣೆ, ಅಗತ್ಯವಿದ್ದವರಿಗೆ ಕನ್ನಡಕ ವಿತರಣೆ ಹಾಗೂ ಕಣ್ಣಿನಪೊರೆ ಶಸ್ತ್ರಚಿಕಿತ್ಸೆಗೆ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

ಶಿಬಿರದಲ್ಲಿ ಒಟ್ಟು 325 ಜನರ ಆರೋಗ್ಯ ತಪಾಸಣೆ ನಡೆಸಲಾಯಿತು. ಕಣ್ಣಿನಪೊರೆ ಶಸ್ತ್ರಚಿಕಿತ್ಸೆ ಅವಶ್ಯಕತೆಯಿದ್ದ 37 ಮಂದಿಯನ್ನು ಗುರುತಿಸಿ, ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಯಿತು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಕಾಂಗ್ರೆಸ್ ಮುಖಂಡರಾದ ಎಚ್.ಎ.ಶಿವಕುಮಾರ್, ಗೋಪಾಲ್ ರೆಡ್ಡಿ, ಚಂದನ್ ಉಪಸ್ಥಿತರಿದ್ದರು.

ಎಸ್‌ಕೆಎಂ ಬಲಪಡಿಸಲು ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಭಾರತದ ರಾಜ್ಯಗಳಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಸಂಘಟನೆ ಬಲಗೊಳಿಸುವುದು, ಆಯಾ ರಾಜ್ಯಗಳಲ್ಲಿ ರೈತ ಮುಖಂಡರ ಸಭೆಗಳನ್ನು ನಡೆಸಿ, ಸ್ಥಳೀಯ ರೈತರ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ರೂಪಿಸುವುದು ಸೇರಿದಂತೆ ಹಲವು ನಿರ್ಣಯಗಳನ್ನು ದಕ್ಷಿಣ ಭಾರತದ ರಾಜ್ಯಗಳ ನಾಯಕರ ಎರಡು ದಿನಗಳ ಸಭೆಯಲ್ಲಿ ಕೈಗೊಳ್ಳಲಾಗಿದೆ.

ಸಭೆಯ ನಿರ್ಣಯಗಳ ಕುರಿತು ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎಸ್‌ಕೆಎಂ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಪಂಜಾಬ್‌ನ ದರ್ಶನ್ ಪಾಲ್ ಮಾಹಿತಿ ನೀಡಿದರು.

'ನ.15ರೊಳಗೆ ಆಯಾ ರಾಜ್ಯಗಳಲ್ಲಿರುವ ಎಲ್ಲ ರೈತ ಸಂಘಟನೆಗಳ ಮುಖಂಡರ ಸಭೆ ನಡೆಸುವುದು. ಕೃಷಿ ಮತ್ತು ಕೃಷಿ ಕಾರ್ಮಿಕರ ಸಂಘಟನೆಗಳ ಸಮನ್ವಯ ಸಾಧಿಸುವುದು. ನ.26ರಂದು ಜಿಲ್ಲಾ ಮಟ್ಟದಲ್ಲಿ ರೈತರ ಬೃಹತ್ ಸಮಾವೇಶ ನಡೆಸುವ ಮೂಲಕ, ಆ ದಿನವನ್ನು ದಕ್ಷಿಣ ಭಾರತದ ಅತ್ಯಂತ ಐತಿಹಾಸಿಕ ದಿನವನ್ನಾಗಿಸಲು ತೀರ್ಮಾನಿಸಲಾಗಿದೆ' ಎಂದು ವಿವರಿಸಿದರು.

'ಕೃಷಿ ಮಾರುಕಟ್ಟೆ ಬಲಗೊಳಿಸಬೇಕು. ರೈತರ ಮೇಲೆ ವಿಧಿಸುವ ಮಾರುಕಟ್ಟೆ ತೆರಿಗೆ ಮನ್ನಾ ಮಾಡಬೇಕು. ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆ ಮತ್ತು ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ ರೈತರಿಂದಲೇ ಆಹಾರ ಧಾನ್ಯಗಳನ್ನು ಕನಿಷ್ಠ ಬೆಂಬಲ ಬೆಲೆ ನೀಡಿ (ಎಂಎಸ್‌ಪಿ) ಖರೀದಿಸುವಂತೆ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

ದೆಹಲಿಯ ಕೃಷ್ಣಪ್ರಸಾದ್, ಮಧ್ಯಪ್ರದೇಶದ ಸುನಿಲಂ, ತೆಲಂಗಾಣದ ವಿ.ವೆಂಕಟರಾಮಯ್ಯ, ಪದ್ಮ ಪಸ್ಸಾ, ಆಂಧ್ರಪ್ರದೇಶದ ವಡ್ಡೆ ಸಾಂಬಶಿವರಾವ್, ಕೇರಳದ ವಿಜುಕೃಷ್ಣ, ಕರ್ನಾಟಕದ ರೈತ ಮುಖಂಡರರಾದ ಜಿ.ಸಿ.ಬಯ್ಯಾರೆಡ್ಡಿ ಮತ್ತು ಬಡಗಲಪುರ ನಾಗೇಂದ್ರ ಮಾತನಾಡಿದರು.

ಪ್ರಜಾವಾಣಿ ನವವರ್ಣ

ನೀಲಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಬುಧವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...
7338018541

ದಿವ್ಯಾ ಮತ್ತು ಗೆಳತಿಯರು

ರಾಷ್ಟ್ರೀಯ ಹೆದ್ದಾರಿ ಸಿಬ್ಬಂದಿ

ಶ್ರೀ ವರಸಿದ್ಧಿ ವಿನಾಯಕ ಬಳಗ ಹಾವನೂರು ಬಡಾವಣೆ

ಪ್ರೆಸಿಡೆನ್ಸಿ ಕಾಲೇಜ್ ಆಡಳಿತ ಸಿಬ್ಬಂದಿ

ನೈಟಾಂಗಲ್ಸ್ ಶಾಲೆ

ರಾಜೇಶ್ವರಿ ಮತ್ತು ಗೆಳತಿಯರು

ಗಾಯತ್ರಿ ಮತ್ತು ಗೆಳತಿಯರು

ಪ್ರೈಡ್ ಗ್ರೂಪ್

ಕರ್ನಾಟಕ ಬ್ಯಾಂಕ್ – ಬಸವೇಶ್ವರ ನಗರ

ದೀಪ & ಧಂಶಿಕ

ವೆಲ್ನೆಸ್ ಲೇಡೀಸ್ ಕ್ಲಬ್

ಜ್ಯೋತಿ ಮತ್ತು ತಂಡ

ಸ್ವಾಮಿ ವಿವೇಕಾನಂದ ಶಾಲೆ

ನಾಗವೇಣಿ ಮತ್ತು ಸ್ನೇಹಿತರು

ವಿದ್ಯಾ, ಲತಾಮಣಿ & ಪೂರ್ಣಿಮಾ

ವಿಯನ

ಭೂಮಿಕಾ

ಮಿಂಚು ಮತ್ತು ಸಾನ್ವಿ

ಹೇಮಾ ಮತ್ತು ಗೆಳತಿಯರು

ಗ್ರೀನ್ ಮಿಡೋಸ್

ಲಿಲ್ಲಿ SK

ಕೆನರಾ ಬ್ಯಾಂಕ್ ಸ್ವಸಹಾಯ ತರಬೇತಿ ಕೇಂದ್ರ

SMVIT ಸಿಬ್ಬಂದಿ

ಆದ್ಯಾ ಶ್ರೀನಿವಾಸ

ಸೌಮ್ಯ

ಜಯಶ್ರೀ ಮತ್ತು ಗೆಳತಿಯರು

ಕವಿತಾ ಮತ್ತು ಗೆಳತಿಯರು

ಸುಧಾ

ಗುಲಾಬಿ ನಗೆ ಕೂಟ

VIP ಪ್ರೌಢಶಾಲೆ

ಎನ್. ಶಾರದಾಂಬ & ಎಂ. ಜಸಿಂತಾ

ವಸುಮತಿ ಮತ್ತು ಗೆಳತಿಯರು

NBET ಶಿಕ್ಷಣ ಟ್ರಸ್ಟ್

ರೂಪ ಬಸವರಾಜ್

ಲತಾ ಮತ್ತು ತಂಡ

ಕ್ರಿಶಾ ಮತ್ತು ಪೂಜಾ

ರಮಾ, ಜ್ಯೋತಿ

ಮಹೇಶ್ ಪಿ. ಯು. ಕಾಲೇಜು ಸಿಬ್ಬಂದಿ ನಾಗರಭಾವಿ

ಶೈಲಜಾ ಮತ್ತು ಸಿಂಧು

ವಿದ್ಯಾ, ಪ್ರಜ್ಞಾ

ದಸರಾ ಕುಸ್ತಿ: ಫೈನಲ್‌ಗೆ ಬಾಪೂ, ಶಿವಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ಮುಧೋಳದ ಬಾಪೂ ಸಾಹೇಬ ಶಿಂಧೆ ಹಾಗೂ ಬಾಗಲಕೋಟೆಯ ಶಿವಯ್ಯ ಪೂಜಾರಿ ಅವರು 'ದಸರಾ ಕಂಠೀರವ' ಪ್ರಶಸ್ತಿಯ ಫೈನಲ್‌ಗೆ ಲಗ್ಗೆಯಿಟ್ಟರು.

ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 'ದಸರಾ ಕುಸ್ತಿ' ಸೆಮಿಫೈನಲ್‌ನಲ್ಲಿ ಬಾಪೂ 14-8 ಪಾಯಿಂಟ್‌ನಿಂದ ದಾವಣಗೆರೆಯ ಬಸವರಾಜ ಹುದಲಿ ವಿರುದ್ಧ ಜಯ ಸಾಧಿಸಿದರು. ಮತ್ತೊಂದು ಸೆಮಿಫೈನಲ್‌ನಲ್ಲಿ ಶಿವಯ್ಯ ಪೂಜಾರಿ 3-1ರಿಂದ ಬೆಳಗಾವಿಯ ಬಿ.ನಾಗರಾಜ್ ಅವರನ್ನು ಮಣಿಸಿ ಅಂತಿಮ ಘಟ್ಟ ಪ್ರವೇಶಿಸಿದರು.

'ದಸರಾ ಕುಸ್ತಿ' ಪಂದ್ಯದಲ್ಲಿ ದಾವಣಗೆರೆಯ ಬಸವರಾಜು ಪಾಟೀಲ ಹಾಗೂ ಹಳಿಯಾಳದ ಮಂಜುನಾಥ್ ಗೌಡ ನಡುವಿನ ಪೈಪೋಟಿ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

'ದಸರಾ ಕೇಸರಿ' ಪ್ರಶಸ್ತಿಗಾಗಿ ನಡೆದ ಸೆಮಿಫೈನಲ್ ಕಾದಾಟದಲ್ಲಿ ಮುಧೋಳದ ಸದಾಶಿವ ನಲವಡೆ ಅವರು 19–8 ಪಾಯಿಂಟ್ ಅಂತರದಲ್ಲಿ ಬೆಳಗಾವಿಯ ಮಹೇಶ್‌ಕುಮಾರ್ ವಿರುದ್ಧ ಜಯ ಸಾಧಿಸಿದರು. ಆರಂಭದಲ್ಲಿ ಮಹೇಶ್ 8–0ರಿಂದ ಮುಂದಿದ್ದರು. ಇನ್ನೆರಡು ಅಂಕ ಪಡೆದಿದ್ದರೆ ಗೆಲುವು ಅವರ ಪಾಲಾಗುತ್ತಿತ್ತು. ಪುಟಿದೆದ್ದ ಸದಾಶಿವ ಆಕ್ರಮಣಕಾರಿ ಆಟದ ಮೂಲಕ 12 ಅಂಕ ಪಡೆದು ಮೇಲುಗೈ ಸಾಧಿಸಿದರು. ವಿರಾಮದ ನಂತರ ಮತ್ತೆ 7 ಅಂಕವನ್ನು ವೇಗವಾಗಿ ಕಲೆಹಾಕಿ ಫೈನಲ್ ಪ್ರವೇಶಿಸಿದರು. ಇದೇ ವಿಭಾಗದ ಮತ್ತೊಂದು ಸೆಮಿಫೈನಲ್‌ನಲ್ಲಿ ದಾವಣಗೆರೆಯ ಬಸವರಾಜ ಪಾಟೀಲ 7-2 ಪಾಯಿಂಟ್‌ನಿಂದ ಧಾರವಾಡದ ಟಿ. ಮಲ್ಲಿಕಾರ್ಜುನ್ ವಿರುದ್ಧ ಜಯ ಸಾಧಿಸಿದರು.

'ದಸರಾ ಕಿಶೋರ' ಪ್ರಶಸ್ತಿಗಾಗಿ ನಡೆದ ಸೆಮಿಫೈನಲ್‌ನಲ್ಲಿ ದಾವಣಗೆರೆಯ ಕೊರವರ ಸಂಜೀವ ಅವರು 10-0ರಿಂದ ತಮ್ಮದೇ ಊರಿನ ಖ್ವಾಜಾ ಮೈನುದ್ದೀನ್ ವಿರುದ್ಧ ಜಯ ಸಾಧಿಸಿದರು. ಮತ್ತೊಂದು ಪಂದ್ಯದಲ್ಲಿ ದಾವಣಗೆರೆಯ ಮಹೇಶ್ ಪಿ.ಗೌಡ 8-3 ರಿಂದ ಬಾಗಲಕೋಟೆಯ ವೈ.ಸಚಿನ್ ವಿರುದ್ಧ ಗೆಲುವು ದಾಖಲಿಸಿದರು.

'ದಸರಾ ಕಿಶೋರಿ' ಪ್ರಶಸ್ತಿಯ ಫೈನಲ್‌ಗೆ ಹಳಿಯಾಳದ ಶಾಲಿನಾ ಸಿದ್ದಿ ಮತ್ತು ಆರ್.ಎಸ್.ಗಾಯತ್ರಿ ಸುತಾರ್ ಲಗ್ಗೆ ಇಟ್ಟರೆ, 'ದಸರಾ ಕುಮಾರ' ಪ್ರಶಸ್ತಿಗೆ ಮೈಸೂರಿನ ಆರ್.ನಿತಿನ್ ಮತ್ತು ಮಂಡ್ಯದ ವೈ.ಗಿರೀಶ್ ಸೆಣಸಾಟ ನಡೆಸಲಿದ್ದಾರೆ.

ಪ್ರಶಸ್ತಿ ಸುತ್ತಿನ ಎಲ್ಲ ಪಂದ್ಯಗಳು ಅ.9ರಂದು ನಡೆಯಲಿವೆ.

ನ.17ರಿಂದ ಮಾಸ್ಟರ್ಸ್ ಲೀಗ್ ಕ್ರಿಕೆಟ್

ಮುಂಬೈ (ಪಿಟಿಐ): ಸಚಿನ್ ತೆಂಡೂಲ್ಕರ್, ಬ್ರಯಾನ್ ಲಾರಾ ಸೇರಿದಂತೆ ಘಟಾನುಘಟಿ ಆಟಗಾರರು ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಲೀಗ್ ಕ್ರಿಕೆಟ್‌ನ ಉದ್ಘಾಟನಾ ಆವೃತ್ತಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಲೀಗ್ ನವೆಂಬರ್ 17ರಿಂದ ಡಿಸೆಂಬರ್ 8ರವರೆಗಿನ ಅವಧಿಯಲ್ಲಿ ಮುಂಬೈ, ಲಖನೌ ಮತ್ತು ರಾಯಪುರದಲ್ಲಿ ನಡೆಯಲಿದೆ.

ಟೂರ್ನಿಗೆ ಮಂಗಳವಾರ ಅಧಿಕೃತವಾಗಿ ಇಲ್ಲಿ ಚಾಲನೆ ನೀಡಲಾಯಿತು. ಭಾರತ, ಇಂಗ್ಲೆಂಡ್, ಆಸ್ಟ್ರೇಲಿಯಾ, ಶ್ರೀಲಂಕಾ, ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ಕಣದಲ್ಲಿರುವ ತಂಡಗಳಾಗಿವೆ.

ತೆಂಡೂಲ್ಕರ್ ಭಾರತ ಮಾಸ್ಟರ್ಸ್ ತಂಡದ ನಾಯಕರಾಗಿದ್ದಾರೆ. ಬ್ಯಾಟಿಂಗ್ ದಿಗ್ಗಜ ಸುನಿಲ್ ಗಾವಸ್ಕರ್ ಅವರು ಲೀಗ್ ಕಮಿಷನರ್ ಆಗಿದ್ದಾರೆ. ನ.17ರಂದು ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಭಾರತ ಮಾಸ್ಟರ್ಸ್ ತಂಡ, ಶ್ರೀಲಂಕಾ ಮಾಸ್ಟರ್ಸ್ ತಂಡವನ್ನು ಎದುರಿಸಲಿದೆ.

ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಲೀಗ್‌ನಲ್ಲಿ ಆಡುವ ತಂಡಗಳ ನಾಯಕರು ಮಂಗಳವಾರ ಅಧಿಕೃತವಾಗಿ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಭಾಗಿಯಾದರು. (ಎಡದಿಂದ): ಸ್ಟೀಫನ್ ಫೆಲ್ಲಿಂಗ್ (ಸಿಇಒ, ಸ್ಪೋರ್ಟ್‌ಫೈವ್), ಇಯಾನ್ ಮಾರ್ಗನ್ (ಇಂಗ್ಲೆಂಡ್) ಬ್ರಯಾನ್ ಲಾರಾ (ವೆಸ್ಟ್ ಇಂಡೀಸ್), ಸಚಿನ್ ತೆಂಡೂಲ್ಕರ್ (ಭಾರತ), ಜಾಂಟಿ ರೋಡ್ಸ್ (ದಕ್ಷಿಣ ಆಫ್ರಿಕಾ), ರಮೇಶ್ ಕಲುವಿತರಣ (ಶ್ರೀಲಂಕಾ), ಶೇನ್ ವ್ಯಾಟ್ಸನ್ (ಆಸ್ಟ್ರೇಲಿಯಾ) ಮತ್ತು ಮೆಲ್ರಾಯ್ ಡಿಸೋಜ (ಸಿಇಒ, ಪಿಎಂಜಿ ಸ್ಪೋರ್ಟ್ಸ್).

ಟೆನಿಸ್: ಶ್ರೀವಲ್ಲಿ ಶುಭಾರಂಭ

ಮೈಸೂರು: ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಹಾಗೂ ಸ್ಮೃತಿ ಭಾಸಿನ್ ಅವರು ಇಲ್ಲಿ ನಡೆಯುತ್ತಿರುವ ಐಟಿಎಫ್ ಮಹಿಳೆಯರ ವಿಶ್ವ ಟೆನಿಸ್ ಟೂರ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ) ನಲ್ಲಿ ಮಂಗಳವಾರ ನಡೆದ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಶ್ರೀವಲ್ಲಿ 7–5, 6–1 ರಿಂದ ಸ್ವದೇಶದ ಸೋನಾಲ್ ಪಾಟೀಲ ಅವರನ್ನು ಮಣಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಸ್ಮೃತಿ ಭಾಸಿನ್ ನ್ಯೂ ಕ್ಯಾಲಿಡೊನಿಯಾದ ಐದನೇ ಶ್ರೇಯಾಂಕಿತ ಆಟಗಾರ್ತಿ ಕ್ಯಾರೊಲಾನ್ ಡೆಲಾವನ್ನಾಯ್ ಅವರನ್ನು 4–6, 6–0, 6–2ರಿಂದ ಸೋಲಿಸಿದರು.

ಫಲಿತಾಂಶ: ಸಿಂಗಲ್ಸ್: ಡೆನ್ಮಾರ್ಕ್‌ನ ಎಲಿನಾ ಜಾಮ್‌ಶಿದಿ 6–1, 6–1ರಿಂದ ವಂಶಿತಾ ಪಠಾನಿಯಾ ಎದುರು, ಆಕಾಂಕ್ಷಾ ನಿಟ್ಟುರೆ 6–3, 6–1ರಿಂದ ದಿವಾ ಭಾಟಿಯಾ ಎದುರು, ಅಮೆರಿಕದ ಜೆಸ್ಸಿ ಆ್ಯನೆ 6–2, 6–0ರಿಂದ ಅಂಜಲಿ ರಾಠೆ ಎದುರು, ಹುಮೆರಾ ಬಹರ್ಮಸ್ 7–5, 6–4ರಿಂದ ಅಮೋದಿನಿ ನಾಯಕ್ ಎದುರು, ಅಮೆರಿಕದ ಶ್ರೀಯಾ ಅತ್ತೂರು 6–1 ಎದುರು, 6–3ರಿಂದ ಪಾವನಿ ಪಾಠಕ್ ಎದುರು, ಶಹಿರಾ ಸಿಂಗ್ 6–2, 6–1ರಿಂದ ನೇಪಾಳದ ಅಭಿಲಾಷಾ ಬಿಸ್ಟ ಎದುರು ಜಯ.

ಫುಟ್‌ಬಾಲ್: ರೂಟ್ಸ್‌ಗೆ ಗೆಲುವು

ಬೆಂಗಳೂರು: ಮೊಹಮ್ಮದ್ ಉನ್ನೈಸ್ ಗಳಿಸಿದ ಗೋಲಿನ ನೆರವಿನಿಂದ ರೂಟ್ಸ್ ಎಫ್‌ಸಿ ತಂಡವು ಜಾರ್ಜ್ ಹೂವರ್ ಕಪ್‌ಗಾಗಿ ಇಲ್ಲಿ ನಡೆಯುತ್ತಿರುವ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಟೂರ್ನಿ ಯಲ್ಲಿ ಶುಭಾರಂಭ ಮಾಡಿತು.

ರೂಟ್ಸ್ ಫುಟ್‌ಬಾಲ್ ಕ್ಲಬ್‌ನ ಟಿಕ್ಕಂ ಧರಣೇಶ್ವರ ರೆಡ್ಡಿ (ಹಳದಿ) ಮತ್ತು ಎಂಇಜಿ ತಂಡದ ಅಜೇಂದ್ರ ಸಿಂಗ್ ಚೆಂಡಿಗಾಗಿ ಸೆಣಸಾಟ ನಡೆಸಿದರು –ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ರೂಟ್ಸ್ ತಂಡವು 1–0 ಗೋಲುಗಳಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಸೋಲಿಸಿತು. 51ನೇ ನಿಮಿಷದಲ್ಲಿ ಉನ್ನೈಸ್ ಗೆಲುವಿನ ಗೋಲು ದಾಖಲಿಸಿದರು. ದಿನದ ಮತ್ತೊಂದು ಪಂದ್ಯದಲ್ಲಿ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು 2–2 ಗೋಲುಗಳಿಂದ ಎಫ್‌ಸಿ ರಿಯಲ್ ಬೆಂಗಳೂರು ತಂಡದ ಜೊತೆ ಡ್ರಾ ಸಾಧಿಸಿತು.

ಇಂದಿನ ಪಂದ್ಯಗಳು: ರೆಬೆಲ್ಸ್ ಎಫ್‌ಸಿ– ಸೌತ್ ಯುನೈಟೆಡ್ (ಮ.12.45) ಪರಿಕ್ರಮ ಎಫ್‌ಸಿ– ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ (ಮಧ್ಯಾಹ್ನ 3.45)